# ಪ್ರಸಾದ

ದ್ವೈಮಾಸಿಕ

ಸಂಪುಟ ೩೭ ಸಂಚಿಕೆ ೨

ಮಾರ್ಚ್–ಏಪ್ರಿಲ್ ೨೦೨೨



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಧಾರವಾಡದ ಕೆಲಗೇರಿಯಲ್ಲಿ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಕಾಲೇಜು ಹಾಗೂ ವಿದ್ಯಾರ್ಥಿನಿಲಯಗಳ ನೂತನ ಕಟ್ಟಡದ ಭೂಮಿಪೂಜೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಿತು. ಜಿಲ್ಲಾಧಿಕಾರಿಗಳಾದ ಶ್ರೀ ನಿತೀಶ್ ಪಾಟೀಲ್, ಹುಬ್ಬಳ್ಳಿ ಶ್ರೀ ಮೂರುಸಾವಿರ ಮಠದ ಜಗದ್ಗುರುಗಳು, ಗದಗ ಶ್ರೀ ತೋಂಟದಾರ್ಯ ಮಠದ ಜಗದ್ಗುರುಗಳು, ಶ್ರೀ ಶಿವಾನಂದ ಮಠದ ಜಗದ್ಗುರುಗಳು, ಮಾಜಿ ಶಾಸಕರಾದ ಶ್ರೀ ಜಿ.ಎಸ್. ಗಡ್ಡದೇವರಮಠ ಮೊದಲಾದವರುಗಳಿದ್ದಾರೆ (5 ಏಪ್ರಿಲ್ 2022)




ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿದ್ದ ಸುತ್ತೂರು ಶ್ರೀಮಠ–ಗುರುಪರಂಪರೆ ಅನಿಮೇಷನ್ ಚಿತ್ರ ಪ್ರದರ್ಶನ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳು ದಿವ್ಯಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಡಾ. ಗೊರುಚ, ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ಸುನೀಲ್ ಪುರಾಣಿಕ್, ಶ್ರೀ ಅಬ್ದುಲ್ ಕರೀಂರವರುಗಳಿದ್ದಾರೆ (8 ಮಾರ್ಚ್ 2022)

# ಪ್ರಸಾದ

**ಸಂಪುಟ 37 : ಸಂಚಿಕೆ 2** **ಮಾರ್ಚ್–ಏಪ್ರಿಲ್ 2022**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ

ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ

**ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು**

---

ಮುಖಪುಟ ಚಿತ್ರ

ಪರಮಪೂಜ್ಯ ಜಗದ್ಗುರುಗಳವರು ಹೈದರಾಬಾದ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ವಿಜಯವಾಡದ ಶ್ರೀ ಜೀಯರ್ ಮಠದ ಶ್ರೀ ತ್ರಿದಂಡಿ ಚಿನ್ನ ಶ್ರೀಮನ್ನಾರಾಯಣ ರಾಮಾನುಜ ಜೀಯರ್ ಸ್ವಾಮಿಗಳೊಂದಿಗಿನ ಸಮಾಗಮದ ಸಂದರ್ಭ (25 ಏಪ್ರಿಲ್ 2022)

**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ: 10/-**

## ಪರಿವಿಡಿ


| | |
|---|---|
| ಗುರುವಾಣಿ | 5 |
| ಸಂಪಾದಕೀಯ | 7 |
| ಸಿಹಿ–ಕಹಿ ಬದುಕಿನ ಮಿಶ್ರಣವೇ ಯುಗಾದಿ<br>**ಶ್ರೀ ಜಯರಾಜೇಂದ್ರರು** | 11 |
| ಕಿನ್ನರಿ ಬ್ರಹ್ಮಯ್ಯನ ಜನ್ಮಸ್ಥಳ : ಒಂದು ಅವಲೋಕನ<br>**ಡಾ. ಚಿದಾನಂದ ಚಿಕ್ಕಮಠ** | 15 |
| ಸಾಂಸ್ಕೃತಿಕ ನಾಯಕರಾಗಿ ಬಸವಣ್ಣನವರು<br>**ಸಂಗಮೇಶ ಎನ್. ಜವಾದಿ** | 26 |
| ವಾರ್ತಾವಿಹಾರ<br>**ಕುಮಾರಸ್ವಾಮಿ ವಿರಕ್ತಮಠ** | 32 |
| ಕೃತಿ–ಸ್ವೀಕೃತಿ | 70 |

## ಮನವಿ

ಜೆಎಸ್ಎಸ್ ಮಹಾವಿದ್ಯಾಪೀಠದಿಂದ ಪ್ರಕಟಗೊಳ್ಳುತ್ತಿರುವ "ಪ್ರಸಾದ" ಸಂಚಿಕೆಯ ಕೆಳಕಂಡ ಪ್ರತಿಗಳು ನಮ್ಮಲ್ಲಿ ಲಭ್ಯವಿಲ್ಲದ ಕಾರಣ ತಮ್ಮ ಬಳಿ ಅಥವಾ ಯಾವುದಾದರೂ ಗ್ರಂಥಾಲಯದಲ್ಲಿ ಲಭ್ಯವಿರುವ ಬಗ್ಗೆ ತಿಳಿಸಿದರೆ, ಜೆರಾಕ್ಸ್ ಮಾಡಿಸಿಕೊಂಡು ತಮಗೆ ಹಿಂತಿರುಗಿಸಲಾಗುವುದು. ದಯಮಾಡಿ ಸಹಕರಿಸಿ.

| ಕ್ರ.ಸಂ. | ಪ್ರಕಟವಾದ ವರ್ಷ | ದೊರಕದೆ ಇರುವ ಪ್ರತಿಗಳು |
|---|---|---|
| 1. | 1966 | ಈ ವರ್ಷದ ಎಲ್ಲ ಸಂಚಿಕೆಗಳು |
| 2. | 1967 | ಮೂರನೇ ಸಂಚಿಕೆ |
| 3. | 1970 | ಒಂದನೇ ಸಂಚಿಕೆ |
| 4. | 1971 | 2, 3, 4ನೇ ಸಂಚಿಕೆಗಳು |
| 5. | 1972 | 1, 3, 4ನೇ ಸಂಚಿಕೆಗಳು |
| 6. | 1975 | ಮೂರನೇ ಸಂಚಿಕೆ |
| 7. | 1976 | ಮೂರನೇ ಸಂಚಿಕೆ |
| 8. | 1984 | ಒಂದನೇ ಸಂಚಿಕೆ |

ಸಂಪರ್ಕದ ಮೊಬೈಲ್ ನಂ. 9986137389, 9964161363

ಸಂಪಾದಕರು

# ಗುರುವಾಣಿ

**ಈ**ಗ ಎಲ್ಲ ಕಡೆ ಅಕ್ಕಮಹಾದೇವಿಯವರ ಜಯಂತಿಯು ವಿಜೃಂಭಣೆಯಿಂದ ಆಚರಿಸಲ್ಪಡುತ್ತಿದೆ. ಅಂದಿಗೂ, ಇಂದಿಗೂ ಸ್ತ್ರೀವಾದಿ ಚಿಂತಕರಿಗೆ ಅಕ್ಕಮಹಾದೇವಿ ಬದುಕು ಬಹು ದೊಡ್ಡ ಮಾದರಿಯಾಗಿ ಕಂಡುಬರುತ್ತಿದೆ. ಅದಕ್ಕೆ ಕಾರಣ ಸ್ಪಷ್ಟವಾಗಿಯೇ ಇದೆ. 800 ವರ್ಷಗಳ ಹಿಂದಿನ ಸಾಮಾಜಿಕ ವ್ಯವಸ್ಥೆಯನ್ನು ನೆನೆಸಿಕೊಂಡರೆ, ಅಕ್ಕಮಹಾದೇವಿ ಯಾಕೆ ಇಂದಿಗೂ ಒಂದು ಅಚ್ಚರಿಯಾಗಿ ಕಂಡುಬರುತ್ತಾರೆ ಎನ್ನುವುದು ಅರಿವಿಗೆ ಬರುತ್ತದೆ. ಅನೇಕ ರೀತಿಯ ಪರಂಪರಾಗತ ನಂಬಿಕೆ, ಮೂಢನಂಬಿಕೆ, ನಡಾವಳಿಗಳನ್ನು ಒಪ್ಪಿತ ಮೌಲ್ಯಗಳನ್ನಾಗಿಸಿಕೊಂಡಿದ್ದ 'ವ್ಯವಸ್ಥೆ'ಯ ಬಿಗಿಹಿಡಿತದ ನಡುವೆ ಅಕ್ಕಮಹಾದೇವಿ ಆ ಎಲ್ಲ ಶೃಂಖಲೆಗಳನ್ನು ಕಡಿದು ಚೆನ್ನಮಲ್ಲಿಕಾರ್ಜುನನೇ ಗಂಡನೆನಗೆ ಎಂದು ಉದ್ಘೋಷಿಸಿ ಮುಡಿಬಿಟ್ಟು ನಿರ್ವಾಣಸ್ಥಿತಿಯಲ್ಲಿ ಇಟ್ಟ ದಿಟ್ಟ ಹೆಜ್ಜೆ ಇಂದಿಗಷ್ಟೇ ಅಲ್ಲ, ಎಂದೆಂದಿಗೂ ಒಂದು ವಿಸ್ಮಯವೇ ಆಗಿ ಉಳಿದು ಬಂದಿದೆ. ಹಾಗೆ ನೋಡಿದರೆ ಅಕ್ಕನವರದು ವೈರಾಗ್ಯದ ಕಡೆ ಮುಖಮಾಡುವ ವಯಸ್ಸೇನೂ ಆಗಿರಲಿಲ್ಲ. ಏರುಜವ್ವನದಲ್ಲಿಯೇ ವೈರಾಗ್ಯಪರರಾದುದಕ್ಕೆ ಅಂದಿನ ಸಾಮಾಜಿಕ ವ್ಯವಸ್ಥೆಯೇ ಕಾರಣವಾಯಿತು.

ಆಳುವ ಪ್ರಭುವಾದ ಕೌಶಿಕನು ರಾಜಪಥದಲ್ಲಿ ಹೋಗುತ್ತಿದ್ದುದನ್ನು ನೋಡುವ ಸಹಜ ಕುತೂಹಲದಿಂದ ಹಾದಿಬದಿಯಲ್ಲಿ ನಿಂತ ಅಕ್ಕನ ಸೌಂದರ್ಯಕ್ಕೆ ಮಾರುಹೋದ ಆತ ಅಕ್ಕನ ಅಥವಾ ಅಕ್ಕನ ಕುಟುಂಬದ ಯಾವ ಪ್ರತಿಕ್ರಿಯೆಯನ್ನೂ ಪರಿಗಣಿಸದೆ ತನ್ನನ್ನು ವರಿಸುವಂತೆ ಆಹ್ವಾನ ಕಳುಹಿಸಿದ. ಆದರೆ ರಾಜಪ್ರಭುತ್ವದ ಮುಂದೆ, ಸಾಮಾನ್ಯ ಪ್ರಜೆಯ ಪ್ರತಿಭಟನೆ ಅರಣ್ಯರೋದನೆಯೇ ಸರಿ ಎಂದು ಭಾವಿಸಿದ ಅಕ್ಕ, ಕುಟುಂಬದ ನೆಮ್ಮದಿಗೆ ಭಂಗ ಬರುವುದು ಬೇಡ ಎನ್ನುವ ಏಕೈಕ ಕಾರಣದಿಂದ, ಕೆಲವು ನಿಬಂಧನೆಗಳನ್ನು ಹಾಕಿ ಕೌಶಿಕನನ್ನು ವರಿಸುತ್ತಾರೆ. ಆ ನಿಬಂಧನೆಗಳನ್ನು ಕೌಶಿಕ ಮುರಿದ ಕಾರಣಕ್ಕೆ ಅಕ್ಕ ಆತನ ಹಂಗನ್ನು ತೊರೆದು, ಸಾವಿಲ್ಲದ ಕೇಡಿಲ್ಲದ ಪತಿಯನ್ನು ಅರಸಿ ಶ್ರೀಶೈಲದ ಮಹಾಮಾರ್ಗವನ್ನು ಹಿಡಿಯುತ್ತಾರೆ. ಇದು ಅಕ್ಕನ ಬದುಕಿನ ಸರಳರೇಖಾತ್ಮಕ ಜೀವನ ಚರಿತ್ರೆಯಾದರೂ, ಅವರ ಚಾರಿತ್ರ್ಯದ ಏರುದಾರಿ ಬಹು ಸಂಕೀರ್ಣವಾಗಿತ್ತು ಎನ್ನುವುದು ವಚನಗಳ ಅಧ್ಯಯನದಿಂದ ತಿಳಿದುಬರುತ್ತದೆ. ಹೆಜ್ಜೆ ಹೆಜ್ಜೆಗೂ ಅನೇಕ ಪರೀಕ್ಷೆಗಳನ್ನು ಎದುರಿಸಿ ಅಕ್ಕ ಗೆದ್ದ ಪರಿ ಸಹಜ ಅನುಭಾವಿಗಳಿಗೆ ಮಾತ್ರ ಅರ್ಥವಾಗುವಂಥದು.

ಇಹಕ್ಕೊಬ್ಬ ಗಂಡ, ಪರಕ್ಕೊಬ್ಬ ಗಂಡನೇ ಎಂದು ದಿಟ್ಟತನದಿಂದ ಪ್ರಶ್ನಿಸಿದ ಅಕ್ಕ, ಅಲ್ಲಮಪ್ರಭುವಿನಂತಹವರ ಪ್ರಖರ ಅನುಭಾವಿಕ ವೈಚಾರಿಕತೆಯ ಪ್ರಶ್ನೆಗಳಿಗೂ ವಿನೀತಭಾವದಿಂದ ಉತ್ತರಿಸಿ ಜಯಶಾಲಿಯಾಗುತ್ತಾರೆ. ತಮ್ಮ ಮಾತುಗಳ ಮೂಲಕ ಶರಣ ಸಮೂಹದ ನೈತಿಕ ನಿಷ್ಠೆಗೆ ಸವಾಲು ಹಾಕುತ್ತಾರೆ. ಇಷ್ಟಾಗಿಯೂ ಲೌಕಿಕ ಬಯಕೆಯನ್ನು ಮೀರಲಾಗುತ್ತಿಲ್ಲ ಎನ್ನುವ ಅರಿವು ಅವರನ್ನು ಕಾಡುತ್ತಲೇ ಇರುತ್ತದೆ.

'ಎನ್ನ ಮನದ ದುರಾಸೆಯ ಮಾಣಿಸಿ ನಿನ್ನತ್ತ ತೋರಾ ಚೆನ್ನಮಲ್ಲಿಕಾರ್ಜುನ' ಎನ್ನುವ ಮಾತು ಕೇವಲ ಅವರೊಬ್ಬರ ಮಾತಾಗದೆ, ಇಂದಿನ ಇಡೀ ಸಮಾಜದ ಸ್ಥಿತಿಯನ್ನು ಪ್ರತಿಬಿಂಬಿಸುವಂತಿದೆ.

ರೇಷ್ಮೆ ಹುಳು ಬೇರೆಯ ಪ್ರಾಣಿ ಪಕ್ಷಿಗಳ ಹಾಗೆ ಹೊರಗಿನ ವಸ್ತುಗಳಿಂದ ತನ್ನ ಗೂಡನ್ನು ನಿರ್ಮಿಸಿಕೊಳ್ಳದೆ ತನ್ನ ಒಡಲ ನೂಲಿನಿಂದಲೇ ತನ್ನ ಸುತ್ತ ಸುಂದರವಾದ, ಆಕರ್ಷಕ ವರ್ಣದ ಗೂಡನ್ನು ನಿರ್ಮಿಸಿಕೊಳ್ಳುತ್ತದೆ. ತಾನು ಅದರೊಳಗೆ ನಿರಾತಂಕವಾಗಿ ಸೇರಿಕೊಂಡು ಚಿಟ್ಟೆಯಾಗಿ, ಮೊಟ್ಟೆ ಇಟ್ಟು ಸಂತಾನವನ್ನು ವೃದ್ಧಿ ಮಾಡಬೇಕೆನ್ನುವುದು ಅದರ ಬಯಕೆಯಾಗಿರುತ್ತದೆ. ಆದರೆ ಕೊನೆಯಲ್ಲಿ ನೀರಿನಲ್ಲಿ ಕುದಿಕುದಿದು ತನ್ನ ಸಾವನ್ನು ತಾನೇ ತಂದುಕೊಳ್ಳುತ್ತದೆ. ಅಕ್ಕ ಈ ಹುಳುವಿನ ಸ್ಥಿತಿಯನ್ನು ತಮ್ಮ ಬದುಕಿಗೆ ಹೋಲಿಸಿಕೊಳ್ಳುವುದರ ಮೂಲಕ ಬಹು ದೊಡ್ಡ ಸಂದೇಶವನ್ನು ನೀಡಿದ್ದಾರೆ.

ಮಿತಿಯಿಲ್ಲದ ಮನಸ್ಸಿನ ಬಯಕೆಗಳೇ ಮನುಷ್ಯನ ನಾಶಕ್ಕೆ ಕಾರಣವಾಗುತ್ತವೆ. ಆದ್ದರಿಂದ ಮಹತ್ತರ ಗುರಿಯ ಮಾರ್ಗದಲ್ಲಿ ಕ್ರಮಿಸುವ ಯಾರೇ ಆದರೂ ತಮ್ಮ ಕ್ಷುದ್ರ ಬಯಕೆಗಳಿಗೆ ಕಡಿವಾಣ ಹಾಕಿ, ಆ ದಿವ್ಯಶಕ್ತಿಯನ್ನು ಆವಾಹಿಸಿಕೊಳ್ಳುವ ಅನುಸಂಧಾನಮಾರ್ಗದಲ್ಲಿ ಸಮರ್ಪಣಾಭಾವದಿಂದ ಮುಂದುವರಿಯಬೇಕಾಗುತ್ತದೆ. ಮಹಾದೇವಿಯಕ್ಕನವರ ಬದುಕು ಇದಕ್ಕೊಂದು ಮಾದರಿಯಾಗಿದೆ. ಹಸಿವಾದರೆ ಭಿಕ್ಷಾನ್ನಗಳುಂಟು ಎಂದು ಹೇಳುವ ಅವರ ಹಸಿವು ಕೇವಲ ಉದರಸಂಬಂಧಿಯಾದರೆ, ನಾಗರಿಕ ಸಮಾಜದ ಬದುಕಿನ ಹಸಿವಿನ ಪರಿಗೆ ಅನೇಕ ವಿಕೃತ ಮುಖಗಳು! ಇವುಗಳನ್ನು ಜಯಿಸದೆ 'ಶಿವದ' ದರ್ಶನ ಸಾಧ್ಯವಿಲ್ಲ. ಈ ದೃಷ್ಟಿಯಿಂದ ಇಡೀ ಸಮಾಜ (ಸ್ತ್ರೀಸಂಕುಲ) 'ಅಕ್ಕ'ನವರ ಆದರ್ಶವನ್ನು ಪಾಲಿಸಿ ಆತ್ಮಸಂತೋಷ ಹಾಗೂ ಸಾಮಾಜಿಕ ನೆಮ್ಮದಿ ಎರಡನ್ನೂ ರೂಢಿಸಿಕೊಳ್ಳುವಂತಾಗಬೇಕಾಗಿದೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

“**ಅ**ಕ್ರಮ, ಭ್ರಷ್ಟಾಚಾರವನ್ನು ಕಾನೂನಿನಿಂದ ನಿಯಂತ್ರಿಸಲು ಸಾಧ್ಯವಿಲ್ಲ. ಅದಕ್ಕೆ ಸಾಮಾಜಿಕ ಬದಲಾವಣೆ ಬರಬೇಕು. ಭ್ರಷ್ಟಾಚಾರದ ಹಿನ್ನೆಲೆ ದುರಾಸೆ; ದುರಾಸೆಗೆ ಮದ್ದಿಲ್ಲ. ಅದು ಯಾವ ಕಾನೂನಿಗೂ ಹೆದರಲ್ಲ. ಯಾವ ಕಾನೂನು ಇದ್ದರೂ ಅದನ್ನು ಮುರಿಯುವ, ದಾರಿ ತಪ್ಪಿಸುವ ಯತ್ನ ಆಗುತ್ತದೆ. ತೃಪ್ತಿ ಮತ್ತು ಮಾನವೀಯತೆ ಎಂಬ ಮೌಲ್ಯಗಳ ಕುಸಿತವೇ ಎಲ್ಲದಕ್ಕೂ ಕಾರಣ”

ಈ ಮೇಲಿನ ಮಾತುಗಳನ್ನು ಆಡಿದವರು ನಿವೃತ್ತ ಲೋಕಾಯುಕ್ತರಾದ ನ್ಯಾಯಮೂರ್ತಿ ಎಸ್. ಸಂತೋಷ್ ಹೆಗ್ಡೆಯವರು. ಇತ್ತೀಚಿನ ದಿನಗಳಲ್ಲಿ ಪ್ರಾಧ್ಯಾಪಕರು, ಪೊಲೀಸ್ ಇನ್ಸ್‌ಪೆಕ್ಟರ್‌ಗಳು, ಎಂಜಿನಿಯರ್‌ಗಳ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಬ್ರಹ್ಮಾಂಡ ಅಕ್ರಮಗಳ ಬಗ್ಗೆ ಪ್ರತಿಕ್ರಿಯಿಸುತ್ತಾ ಶ್ರೀ ಸಂತೋಷ ಹೆಗ್ಡೆಯವರು ಆಡಿರುವ ಈ ಮಾತುಗಳು ನಮ್ಮ ರಾಜಕೀಯ ಹಾಗೂ ಸಾಮಾಜಿಕ ವ್ಯವಸ್ಥೆಗೆ ಹಿಡಿದಿರುವ ಅನೈತಿಕ ಹಾದಿಯನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತವೆ. ನಮ್ಮ ದೇಶಕ್ಕೆ ಬಹುದೊಡ್ಡ ಸಂವಿಧಾನವಿದೆ. ಅದರ ಆಶಯಗಳ ಅನುಷ್ಠಾನದ ಪಾರದರ್ಶಕತೆಯನ್ನು ಕಣ್ಣಲ್ಲಿ ಕಣ್ಣಿಟ್ಟು ಗಮನಿಸುತ್ತಾ, ಕಾರ್ಯಾಂಗ, ಶಾಸಕಾಂಗಗಳು ಮಾರ್ಗ ತಪ್ಪಿದರೆ ಅವುಗಳನ್ನು ಎಚ್ಚರಿಸಲು, ಶಿಕ್ಷಿಸಲು ಬಲವಾದ ನ್ಯಾಯಾಂಗವಿದೆ. ಇಷ್ಟಾಗಿಯೂ ಸಾಮಾಜಿಕ ವ್ಯವಸ್ಥೆಯಲ್ಲಿ ಅವ್ಯವಹಾರ ಎನ್ನುವುದು ಯಾವುದೇ ಎಗ್ಗಿಲ್ಲದೆ ನಡೆಯುತ್ತಲೇ ಇದೆ. ಅಪಮಾರ್ಗಗಳೇ ಗುರಿ ಸಾಧಿಸಲು ಇರುವ ರಾಜಮಾರ್ಗಗಳು ಎಂದುಕೊಂಡೇ ವ್ಯವಸ್ಥೆಗೆ ಸೆಡ್ಡು ಹೊಡೆದು ಹಣ, ಅಧಿಕಾರಗಳನ್ನು ಪಡೆದು ವಿಜೃಂಭಿಸುವವರ ದುಷ್ಟ ಪಡೆ ದಿನದಿನಕ್ಕೂ ಹೆಚ್ಚುತ್ತಲೇ ಇದೆ. ಅಕ್ರಮ ಸಂಪತ್ತಿನ ಸಂಗ್ರಹಣೆಯನ್ನು ನಮ್ಮ ವ್ಯವಸ್ಥೆ ಸಂಪಾದನೆಯೆಂದೇ ಭಾವಿಸಿ, ಅಂತಹ ಸಂಪಾದಕರನ್ನು ಸಮಾಜವೂ ಹೆಚ್ಚು ಹೆಚ್ಚು ಗೌರವಿಸಿ, ಪೂಜ್ಯ ಸ್ಥಾನದಲ್ಲಿರಿಸುವುದೂ ಸಮಾಜದಲ್ಲಿ ಒಪ್ಪಿತ ಮೌಲ್ಯವಾಗಿಯೇ ಪರಿಗಣಿತವಾಗಿದೆ. ಆರ್ಥಿಕ ಅಪರಾಧ ಅಪರಾಧವೇ ಅಲ್ಲ, ಸ್ಪರ್ಧಾತ್ಮಕ ಕಾಲಮಾನದಲ್ಲಿ ಅದೂ ಸಹ ಬದುಕಿನ ಕ್ರಮವೇ ಎಂದು ಭಾವಿಸುವ ಫಲಾನುಭವಿಗಳು ಬಹುಸಂಖ್ಯಾತರಾಗಿಯೇ ಇದ್ದಾರೆ. ಭ್ರಷ್ಟಾಚಾರ, ದರೋಡೆ, ಲೂಟಿ, ಸುಲಿಗೆ, ಅಕ್ರಮ

ಕಮಿಷನ್, ವ್ಯಕ್ತಿಗಳ ಅಸಹಾಯಕತೆಯನ್ನೇ ಬಂಡವಾಳ ಮಾಡಿಕೊಂಡು ರಕ್ತಹೀರುವ ಸೂಕ್ಷ್ಮತೆ, ಈ ಎಲ್ಲವೂ 'ಸಂಪಾದನೆ' ಎನ್ನುವ ವಿಶಾಲಾರ್ಥದಲ್ಲಿ ಬಳಕೆಗೊಂಡು ಸಾಮಾಜಿಕರ ಒಪ್ಪಿತ ಮುದ್ರೆಯನ್ನು ಪಡೆದುಕೊಂಡಿವೆ. ಇಡೀ ಪ್ರಕೃತಿಯನ್ನು ವಿರೂಪಗೊಳಿಸಿ, ಅಲ್ಲಿನ ಸಂಪತ್ತನ್ನು ದೋಚಿ, ಕಾಳಸಂತೆಯಲ್ಲಿ ವಹಿವಾಟು ನಡೆಸಿದ್ದರೂ, ದೇವರುಗಳಿಗೆ ಚಿನ್ನದ ಮುಖವಾಡ, ವಜ್ರದ ಕಿರೀಟ ಮುಂತಾದವನ್ನು ಕಾಣಿಕೆಯಾಗಿ ಕೊಟ್ಟವರನ್ನು ಮುಗ್ಧ ಭಕ್ತರು (ಮೂಢ ಭಕ್ತರು) 'ಪುಣ್ಯಾತ್ಮ' ಮಹಾದಾನಿ ಎಂದು ಕರೆದು ಪೂಜನೀಯ ಸ್ಥಾನದಲ್ಲಿರಿಸಿ ಗೌರವಿಸುತ್ತದೆ. ಅವರಿಗೆ ಗರ್ಭಗುಡಿಗೆ ನೇರ ಪ್ರವೇಶವಿರುತ್ತದೆ. ಇಂತಹವರಿಂದ ದೇವರೂ ಮೈಲಿಗೆಯಾಗುವುದಿಲ್ಲ. ಅದೇ ದೇಗುಲದ ಆಚೆ ಅಸಹಾಯಕತೆಯಿಂದ ಭಿಕ್ಷೆ ಬೇಡಿ ಹೊಟ್ಟೆ ಹೊರೆದುಕೊಳ್ಳುವವರನ್ನು ಯಾವುದೊ ಜನ್ಮದಲ್ಲಿ ಮಾಡಿದ ಪಾಪ ಎಂದು ತಿರಸ್ಕಾರದಿಂದ ನೋಡುತ್ತಾರೆ.

ಈ ಎಲ್ಲ ಹಿನ್ನೆಲೆಯಲ್ಲಿಯೇ ನ್ಯಾಯಮೂರ್ತಿಗಳು ಹೇಳಿರುವಂತೆ ಇದಕ್ಕೆಲ್ಲಾ ಸಾಮಾಜಿಕ ಬದಲಾವಣೆ ಬರಬೇಕು. ಆ ಸಾಮಾಜಿಕ ಬದಲಾವಣೆ ಎಂತದ್ದಾಗಿರಬೇಕು ಎಂದರೆ, ದುರಾಸೆ ರಹಿತವಾದ ಸಮಾಜಘಾತುಕರನ್ನು ಸಮಾಜದಿಂದ ಬಹಿಷ್ಕರಿಸುವ ನೈತಿಕ ನೆಲೆಗಟ್ಟಿನ ಸಮಾಜ ರೂಪಿತವಾಗಬೇಕು. ವ್ಯಕ್ತಿ ಹಾಗೆಯೇ ಸಮಾಜದ ಈ ಎಲ್ಲ ಅನಿಷ್ಟ ನಡವಳಿಕೆಗಳಿಗೂ ಮೂಲವೇ, 'ಏನಕೇಣ ಪ್ರಕಾರೇಣ' ಹಣ ಮತ್ತು ಅಧಿಕಾರವನ್ನು ಪಡೆಯುವುದು. ಆದರೆ ದುರಾಸೆಗೆ ಮದ್ದಿಲ್ಲ, ಅದು ಯಾವ ಕಾನೂನಿಗೂ ಹೆದರುವುದಿಲ್ಲ. ಎಲ್ಲಿಯ ತನಕ 'ತೃಪ್ತಿ' ಎನ್ನುವುದಕ್ಕೆ ಒಂದು ಇತಿಮಿತಿಯ ಚೌಕಟ್ಟನ್ನು ಮಾನಸಿಕವಾಗಿ ನಿರ್ಮಿಸಿಕೊಳ್ಳುವುದಿಲ್ಲವೋ, ಅಲ್ಲಿಯತನಕ ಮನುಷ್ಯನ ಒಳಗೆ ರಾಕ್ಷಸೀಯತೆ ವಿಜೃಂಭಿಸುತ್ತಲೇ ಇರುತ್ತದೆ. ಅದು ಉಕ್ರೇನ್‌ನಲ್ಲಿ ನಡೆಯುತ್ತಿರುವ ಮಾರಣಹೋಮವಾಗಿರಬಹುದು, ಚೈನಾ, ಶ್ರೀಲಂಕಾದಲ್ಲಿ ಎದ್ದಿರುವ ಹಾಹಾಕಾರ ವಿದ್ದಿರಬಹುದು. ಇವುಗಳೆಲ್ಲಾ ಆಡಳಿತ ನಡೆಸುವವರ ದುರಾಸೆಯ ಬೇರೆ ಬೇರೆ ರೂಪಗಳೇ ಹೊರತು ಬೇರೇನೂ ಅಲ್ಲ.

ಇದಕ್ಕಿರುವ ಏಕೈಕ ಮದ್ದು ಎಂದರೆ, ನಿರಂತರ ಆತ್ಮಶೋಧ ಹಾಗೂ ಆತ್ಮಸಾಕ್ಷಿಗೆ ವಿರುದ್ಧವಲ್ಲದ ನಡಾವಳಿಗಳು. ಇದಕ್ಕೆ ಯಾವ ಕಾನೂನಿನ ಹಂಗೂ ಇಲ್ಲ, 'ಎನ್ನ ಮನದ ದುರಾಸೆಯ ಮಾಣಿಸಿ ನಿಮ್ಮತ್ತ ತೋರಾ' ಎಂದು ಹೇಳಿದ ಮಹಾದೇವಿಯಕ್ಕನ ನಿಲುವು ನಮ್ಮ ಒಳಹೊರಗನ್ನು ಆವರಿಸಬೇಕು.

> ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ
> ಎನ್ನ ಒಡಲಿಂಗೆ, ಎನ್ನ ಒಡವೆಗೆಂದು, ಎನ್ನ ಮಡದಿ – ಮಕ್ಕಳಿಗೆಂದು
> ಕುದಿದೆನಾದಡೆ ಎನ್ನ ಮನಕ್ಕೆ ಮನವೆ ಸಾಕ್ಷಿ.
> ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ |

ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ ||
ಎಂಬ ಶ್ರುತಿಯ ಬಸವಣ್ಣನೋದುವನು
ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹನೆಂದು ನುಡಿವರಯ್ಯಾ ಪ್ರಮಥರು.
ಕೊಡುವೆನೆ ಉತ್ತರವನವರಿಗೆ? ಕೊಡಲಮ್ಮೆ.
ಹೊಲೆಹೊಲೆಯರ ಮನೆಯ ಹೊಕ್ಕಾದಡೆಯೂ
ಸಲೆ ಕೈಕೂಲಿಯ ಮಾಡಿಯಾದಡೆಯೂ,
ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ ಕುದಿದೆನಾದಡೆ
ತಲೆದಂಡ! ಕೂಡಲಸಂಗಮದೇವಾ!

ಮಹಾಮಂತ್ರಿಯಾದರೂ ಬಸವಣ್ಣನವರ ಈ ಸಂತ ಸ್ಥಿತಿ ಪ್ರಭುತ್ವದ ಆಯಕಟ್ಟಿನ ಸ್ಥಳದಲ್ಲಿರುವವರ ನಿತ್ಯ ನಿರಂತರ ಸ್ಥಾಯೀಭಾವವಾಗಬೇಕು. ಸಂವಿಧಾನದ ಆಶಯಗಳಿಗೆ ಚ್ಯುತಿ ಬರದಂತೆ ಸಮಷ್ಟಿ ಬದುಕನ್ನು ಯೋಜಿಸುವ, ಯೋಜನೆಗಳನ್ನು ಕಾರ್ಯಗತ ಮಾಡುವ ಪ್ರಭುಗಳು ಮೊದಲು ಆದರ್ಶಗಳ ಜೀವಂತ ರೂಪವಾಗಬೇಕು. ಆಗ ಸಹಜವಾಗಿಯೇ ಉಳಿದ ಎಲ್ಲರೂ ಸರಿದಾರಿಯಲ್ಲಿ ನಡೆಯುವುದು ಅನಿವಾರ್ಯವಾಗುತ್ತದೆ. ಒಂದು ಮಹಾಶಿಲ್ಪದ ಮೇಲೆ ಕೆಲವೇ ಕೊಡಗಳಷ್ಟು ಜಲವನ್ನು ಅಭಿಷೇಕ ಮಾಡಿದರೂ ಸಾಕು, ಇಡೀ ಶಿಲ್ಪ ತೊಯ್ದು ಹೋಗುತ್ತದೆ. ಆದರೆ ಅದೇ ಶಿಲ್ಪದ ತಳಭಾಗದಿಂದ ಎಷ್ಟು ಕೊಡ ನೀರನ್ನು ಬಳಸಿದರೂ ಇಡೀ ಶಿಲ್ಪವನ್ನು ತೋಯಿಸಲು ತುಂಬಾ ಪ್ರಯಾಸ ಪಡಬೇಕಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯೂ ಹಾಗೆಯೇ. ತಳಮಟ್ಟದ ಬದುಕು ಶುದ್ಧವಾಗಬೇಕಾದರೆ, ಮೊದಲು ಮೇಲಿನವರ ಬದುಕು ತನ್ನ ಒಡಲವಸರಕ್ಕೆ ಕುದಿಯದೆ, ಅಸಹಾಯಕ ಸಮೂಹದ ಒಡಲುರಿಯನ್ನು ನಂದಿಸುವ, ಶಾಂತಗೊಳಿಸುವ ಕೆಲಸವನ್ನು ಮಾಡಬೇಕು.

ಈ ಹಿನ್ನೆಲೆಯಲ್ಲಿ ನ್ಯಾ. ಸಂತೋಷ್ ಹೆಗ್ಡೆಯವರ ಮಾತನ್ನು ಮನನ ಮಾಡಬೇಕಾಗಿದೆ. 'ತೃಪ್ತಿ ಮತ್ತು ಮಾನವೀಯತೆ' ಕಾನೂನು ಮಾಡಲಾರದ ಕೆಲಸವನ್ನು ಮಾಡಲು ಸಮರ್ಥವಾಗುತ್ತದೆ ಎನ್ನವುದು ನಮ್ಮ ನಿತ್ಯದ 'ಸುಪ್ರಭಾತ'ವಾಗಬೇಕು.

**ಮಲೆಯೂರು ಗುರುಸ್ವಾಮಿ**
**ಸಂಪಾದಕ**

# ತತ್ವಪದ

## ಶರೀರನೆಂದೆಂಬುವ ಹೊಲ

ಶರೀರನೆಂದೆಂಬುವ ಹೊಲನ ಹಸನ ಮಾಡಿ
ಪರತತ್ವ ಬೆಳೆಯನೆ ಬೆಳೆದುಣ್ಣಿರೋ.

ಶಮದಯೆಯೆಂಬುವ ಎರಡೆತ್ತುಗಳ ಹೂಡಿ
ವಿಮಲ ಮಾನಸನ ನೇಗಿಲನೆ ಮಾಡಿ
ಮಮಕಾರವೆಂದೆಂಬ ಕರಕೆಯ ಕಳೆದಿಟ್ಟು
ಸಮತೆಯೆಂದೆಂಬ ಗೊಬ್ಬರವ ಚೆಲ್ಲಿ.

ಗುರುವರನ ಉಪದೇಶವೆಂಬ ಬೀಜವ ಬಿತ್ತಿ
ಮೆರೆವ ಸಂಸ್ಕಾರವೃಷ್ಟಿಯ ಬಲದಿ
ಅರಿವೆಂಬ ಪೈರನೆ ಬೆಳೆಸುತ ಮುಸಗಿರ್ದ
ದುರಿತ ದುರ್ಗುಣವೆಂಬ ಕಳೆಯ ಕಿತ್ತು.

ಸ್ಥಿರಮುಕ್ತಿಯೆಂದೆಂಬ ಧಾನ್ಯವ ಬೆಳೆದುಂಡು
ಪರಮಾನಂದದೊಳು ತಣ್ಣನೆ ದಣಿದು
ಗುರುಸಿದ್ಧ ನಡಿಗಳಿಗೆರಗುತ್ತೆ ಭವವೆಂಬ
ಬರವನು ತಮ್ಮ ಸೀಮೆಗೆ ಕಳುಹಿ.

**– ಸರ್ಪಭೂಷಣ ಶಿವಯೋಗಿ**

**ಕೃಪೆ: ತತ್ವಪದಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ**

# ಸಿಹಿ–ಕಹಿ ಬದುಕಿನ ಮಿಶ್ರಣವೇ ಯುಗಾದಿ

ಶ್ರೀ ಜಯರಾಜೇಂದ್ರರು

ಉಗಾದಿ ಎಂಬುದು ಯುಗಾದಿಯ ತದ್ಭವರೂಪ. 'ಯುಗಸ್ಯ ಆದಿಃ' ಯುಗಾದಿ. ಸಂವತ್ಸರವೇ ಯುಗದ ಆದಿ. ಯುಗವೆಂದರೆ ವರ್ಷ, ಸಂವತ್ಸರ ಎಂದೂ ಕರೆಯುತ್ತೇವೆ. ವರ್ಷಾರಂಭದ ದಿನವೇ ಕೃತಯುಗದ ಮೊದಲ ದಿನ; ಸೃಷ್ಟಿಯ ಮೊದಲನೆಯ ದಿನ. ಈ ಸಮಯದ ವಸಂತ ಋತುವಿನಲ್ಲಿ ಗಿಡಮರಗಳು ಚಿಗುರುತ್ತವೆ. ಮಾವು ಹೂ ಬಿಡುತ್ತದೆ, ಹೂ ಕಾಯಾಗುತ್ತದೆ, ಸೊಂಪು ಪಸರುತ್ತದೆ. ಆಗ ಸೃಷ್ಟಿಯಲ್ಲೊಂದು ನವಚೈತನ್ಯ.

**ಆಚರಣೆ**

ಅಭ್ಯಂಜನ ಸ್ನಾನ, ಹೊಸ ಬಟ್ಟೆಯ ತೊಡುಗೆ, ಗೃಹಶುದ್ಧಿ, ಮಾವು ಬೇವಿನ ತೋರಣ, ದೇವಪೂಜೆ, ದಾನಧರ್ಮ, ಬೇವು ಬೆಲ್ಲದ ಸೇವನೆ, ಪಂಚಾಂಗ ಪೂಜನ ಶ್ರವಣ, ಚಂದ್ರದರ್ಶನ – ಯುಗಾದಿ ದಿನದ ವಿಶೇಷತೆಗಳು.

ಯುಗಾದಿಯಂದು ಬೇವು ಬೆಲ್ಲದ ಸೇವನೆ ಪ್ರಧಾನ ಆಚರಣೆ. ಬೇವಿನ ಚಿಗುರು + ಬೇವಿನ ಹೂವು + ಬೆಲ್ಲ + ತುಪ್ಪ + ಕಾಳುಮೆಣಸು + ಉಪ್ಪು + ಇಂಗು + ಜೀರಿಗೆ + ಓದಕ್ಕಿ – ಈ ವಸ್ತುಗಳಿಂದ ಮನುಷ್ಯನ ದೇಹದ ವಾತ + ಪಿತ್ತ + ಕಫಗಳು ಸಮಧಾತುವಿಗೆ ಬರುತ್ತವೆ ಎಂದು ಆಯುರ್ವೇದ ಹೇಳುತ್ತದೆ.

ಬೇವು ಕಹಿ, ಬೆಲ್ಲ ಸಿಹಿ, ಬದುಕೆಂದರೆ ಸಿಹಿ–ಕಹಿಗಳ ಮಿಶ್ರಣ. ಇವೆರಡರಲ್ಲಿ ಯಾವುದು ಬಂದರೂ, ಹಿಗ್ಗದೆ ಕುಗ್ಗದೆ ಬಾಳಬೇಕು ಎಂಬ ಹಿರಿದಾದ ಸಂದೇಶ ಈ ಬೇವು ಬೆಲ್ಲದಲ್ಲಿದೆ.

ಸುಖದುಃಖೇ ಸಮೇ ಕೃತ್ವಾ
ಲಾಭಾಲಾಭೌ ಜಯಾಜಯೌ

ಸುಖ–ದುಃಖ, ಲಾಭ–ನಷ್ಟ, ಜಯಾಪಜಯಗಳನ್ನು ಸಮಾನವಾಗಿಸಿಕೊಂಡು ಬದುಕನ್ನು ಸಾಗಿಸಬೇಕು. ಬೇವು ಬೆಲ್ಲದ ಸೇವನೆಯ ಹೊತ್ತಿನಲ್ಲಿ ಈ ಶ್ಲೋಕವನ್ನು ಹೇಳುವ ಆಚರಣೆಯೂ ಇದೆ:

ಶತಾಯುರ್ವಜ್ರದೇಹಾಯ
ಸರ್ವ ಸಂಪತ್ಕರಾಯ ಚ ।
ಸರ್ವಾರಿಷ್ಟ ವಿನಾಶಯಾ
ನಿಂಬಕಂ ದಳಭಕ್ಷಣಂ ॥

ನಾವು ನೂರು ವರ್ಷ ಬಾಳೋಣ. ನಮ್ಮ ಶರೀರವು ರೋಗಮುಕ್ತವಾಗಿ ವಜ್ರದೇಹವಾಗಿರಲಿ. ದ್ರವ್ಯ ಸಂಪತ್ತು, ಕೀರ್ತಿ ಸಂಪತ್ತು, ವಿದ್ಯಾ ಸಂಪತ್ತು, ಸುಖಶಾಂತಿ ಸಂಪತ್ತು ಮೊದಲಾದ ಸಂಪತ್ತುಗಳೆಲ್ಲ ನಮಗೆ ಲಭಿಸಲಿ. ಈ ಆಶಯ ಹೊತ್ತು ಎಲ್ಲ ಬಗೆಯ ಕೇಡು, ವಿಪತ್ತು, ವಿಘ್ನಗಳು ನಾಶವಾಗಲಿ ಎಂದು ನಾವು ಬೇವಿನ ಚಿಗುರನ್ನು ಈ ಶುಭಮುಹೂರ್ತದಲ್ಲಿ ಸೇವಿಸುತ್ತೇವೆ.

ಪ್ರಕೃತಿಯಲ್ಲಿ ಹೊಸತನ ಆವಿರ್ಭವಿಸುವಂತೆ ನಮ್ಮ ವ್ಯಕ್ತಿತ್ವದಲ್ಲೂ ಹೊಸತನ ಇಣುಕಬೇಕು. ಹಿಂದೆ ಮಾಡಿದ ಪಾಪಕರ್ಮಗಳಿಗೆ ಶಿವನಲ್ಲಿ ಕ್ಷಮೆ ಬೇಡೋಣ. ನವೋಲ್ಲಾಸ, ನವೋತ್ಸಾಹವನ್ನು ಹೇ ಶಿವನೇ ನಮಗೆ ತುಂಬಿಸಿಕೊಡು ಎಂದು ಪ್ರಾರ್ಥಿಸಬೇಕು. ಅದರಂತೆ ನಮ್ಮ ಆತ್ಮಾವಲೋಕನದಿಂದ ದೋಷಗಳನ್ನು ತಿದ್ದಿಕೊಳ್ಳುವುದರಿಂದ ಜೀವನ ಆನಂದಮಯವಾಗುತ್ತದೆ. ಯುಗಾದಿ ಶುಭದಿನದಂದು ನಾವು ಒಳ್ಳೆಯದನ್ನು ಚಿಂತಿಸಿದರೆ ವರ್ಷವಿಡೀ ನಮ್ಮ ಚಿಂತನೆ ಮಂಗಳಮಯ ವಾಗಿರುವುದರಲ್ಲಿ ಸಂದೇಹವಿಲ್ಲ.

ಯುಗಾದಿ ಒಂದು **"ಆರೋಗ್ಯ ವ್ರತ" "ಶರೀರಮಾದ್ಯಂ ಖಲು ಧರ್ಮಸಾಧನಂ"** ಎಂಬುದು ಆರ್ಯೋಕ್ತಿ. ಸತ್ಕಾರ್ಯಸಾಧನೆಗೆ ಆರೋಗ್ಯಕರವಾದ ದೇಹವಿರಬೇಕು. ಅಂತೆಯೇ ದೇಹರಕ್ಷಣೆಯೊಂದು **"ಆರೋಗ್ಯ ವ್ರತ"**.

**ಪಂಚಾಂಗಶ್ರವಣ**

ಪಂಚಾಂಗಶ್ರವಣ ಯುಗಾದಿಯ ಒಂದು ಬಹುಮುಖ್ಯವಾದ ಅಂಗ. ಅಂದು ಹೊಸ ಪಂಚಾಂಗದ ಓದು ಮಠಮಂದಿರ ಮನೆಗಳ ಆವರಣದಲ್ಲಿ ನಡೆಯುತ್ತದೆ. ಹಿರಿಯರು ಓದುತ್ತಾರೆ, ಮಿಕ್ಕವರು ಆಲಿಸುತ್ತಾರೆ.

ಪಂಚಾಂಗವೆಂದರೆ ಕಾಲಕೋಶದ ಐದು ಅಂಗಗಳು: ತಿಥಿ–ವಾರ–ನಕ್ಷತ್ರ–ಯೋಗ–ಕರಣ.

ವಾರ್ಷಿಕ ಮಳೆಬೆಳೆ, ದವಸಧಾನ್ಯಗಳ ಹುಲುಸುವಿಕೆ, ರಾಷ್ಟ್ರದ ಮುಂಬರುವ ಸಮರ – ಶಾಂತಿ, ರಾಜಕೀಯ ಪಕ್ಷಗಳ ಏಳು–ಬೀಳು, ವ್ಯಕ್ತಿಗತ ರಾಶಿ ಭವಿಷ್ಯ, ಬೆಲೆಏರಿಕೆ ಮುಂತಾದ ವಿಚಾರಗಳು ಪಂಚಾಂಗಶ್ರವಣದ ವೈಶಿಷ್ಟ್ಯ.

ಯುಗಾದಿಯು ಯಾವ ವಾರದಂದು ಬೀಳುತ್ತದೆಯೋ, ಆ ವಾರದ ಅಧಿಪತಿ ಇಡೀ ಸಂವತ್ಸರದ ಮಹಾರಾಜನೆನಿಸುತ್ತಾನೆ.

ಪಂಚಾಂಗಶ್ರವಣಕ್ಕೆ ವಿಶೇಷ ಫಲವುಂಟು.

ತಿಥೇಶ್ಚ ಪ್ರಿಯಮಾಪ್ನೋತಿ ವಾರೇಣಾಯುಷ್ಯ ವರ್ಧತೇ. ನಕ್ಷತ್ರಾದ್ಧರತೇ ಪಾಪಂ ಯೋಗಾದ್ರೋಗ ನಿವಾರಣಂ. ಕರಣಾತ್ಕಾರ್ಯ ಸಿದ್ಧಿಂ ಚ ಪಂಚಾಂಗಂ ಫಲಮುತ್ತಮಂ.

ತಿಥಿಯನ್ನು ತಿಳಿಯುವುದರಿಂದ ನಮಗೆ ಪ್ರಿಯವಾದದ್ದು ಲಭಿಸುತ್ತದೆ. ವಾರವನ್ನು ಅರಿಯುವುದರಿಂದ ಆಯುಷ್ಯ ಹೆಚ್ಚುತ್ತದೆ. ನಕ್ಷತ್ರವನ್ನು ತಿಳಿಯುವುದರಿಂದ ಪಾಪಗಳೆಲ್ಲ ಪರಿಹಾರವಾಗುತ್ತದೆ. ಯೋಗವನ್ನು ಅರಿಯುವುದರಿಂದ ರೋಗ ನಿವಾರಣೆಯಾಗುತ್ತದೆ. ಕರಣದ ಅರ್ಥವಿವರಣೆಯಿಂದ ಕಾರ್ಯ ಸಿದ್ಧಿಯಾಗುತ್ತದೆ. ಹೀಗೆ ಪಂಚಾಂಗವನ್ನು ತಿಳಿದು ಕಾರ್ಯೋನ್ಮುಖರಾಗುವುದರಿಂದ ನಮಗೆ ಉತ್ತಮ ಫಲಗಳು ಲಭಿಸುತ್ತವೆ.

ವಾರ್ಷಿಕ ಪಂಚಾಂಗದ ವಿವರಣೆಗಳನ್ನು ಪಠಿಸಿದರೆ, ಆಲಿಸಿದರೆ ಲಭಿಸುವ ಫಲಗಳಿಗೆ ತುದಿಮೊದಲೇ ಇಲ್ಲ.

ಶ್ರೀಕಲ್ಯಾಣಗುಣಾವಹಂ ರಿಪುಹರಂ ದುಃಸ್ವಪ್ನದೋಷಾಪಹಂ
ಗಂಗಾಸ್ನಾನ ವಿಶೇಷ ಪುಣ್ಯಫಲದಂ ಗೋದಾನ ತುಲ್ಯಂ ನೃಣಾಂ ।
ಆಯುರ್ವೃದ್ಧಿದಮುತ್ತಮಂ ಶುಭಕರಂ ಸಂತಾನ ಸಂಪತ್ಪ್ರದಂ
ನಾನಾ ಕರ್ಮ ಸುಸಾಧನಂ ಸಮುಚಿತಂ ಪಂಚಾಂಗಮಾಕರ್ಣ್ಯತಾಂ ॥

ಪಂಚಾಂಗಶ್ರವಣದಿಂದ ಕಲ್ಯಾಣಕರ ಮಂಗಳಕರ ಗುಣಗಳು ನಮ್ಮತ್ತ ಹರಿದು ಬರುತ್ತವೆ. ಶತ್ರುಬಾಧೆಯಿಂದ ಮುಕ್ತರಾಗುತ್ತೇವೆ. ಗಂಗಾ ನದಿ ಸ್ನಾನದಿಂದ ಲಭಿಸುವಂತಹ ವಿಶೇಷವಾದ ಪುಣ್ಯ ಪಂಚಾಂಗಶ್ರವಣಮಾತ್ರದಿಂದ ಲಭಿಸುತ್ತದೆ. ಗೋದಾನ ಮಾಡಿದರೆ ಬರಬಹುದಾದ ಪುಣ್ಯ ಇಲ್ಲಿಯೇ ದೊರಕುತ್ತದೆ. ಉತ್ತಮ ರೀತಿಯಲ್ಲಿ ಆಯುಷ್ಯ ವೃದ್ಧಿಯಾಗುತ್ತದೆ. ಬದುಕಿನಲ್ಲಿ ಶುಭಗಳು ಸಾಲುಗಟ್ಟಿ ನಿಲ್ಲುತ್ತವೆ. ಸಂತಾನವಿಹೀನರಿಗೆ ಉತ್ತಮ ಸಂತಾನ ಪ್ರಾಪ್ತಿಯಾಗುತ್ತದೆ. ನಾವು ಕೈಗೊಳ್ಳುವ ಸತ್ಕರ್ಮಗಳಿಗೆ ಬೇಕಾಗುವ ಉತ್ತಮ ಸಾಧನಗಳು ಲಭಿಸುತ್ತವೆ. ಹೀಗೆ ಪಂಚಾಂಗಶ್ರವಣ ಅನೇಕ ವಿಧಗಳಲ್ಲಿ ನಮಗೆ ಉಪಕಾರಿಯಾಗುತ್ತದೆ.

### ಯುಗಾದಿಯಲ್ಲಿ ಎರಡು ಬಗೆ

**1. ಚಾಂದ್ರಮಾನ ಯುಗಾದಿ:** ಚೈತ್ರಮಾಸದ ಶುಕ್ಲಪಕ್ಷದ ಪಾಡ್ಯದಂದು ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಚಾಂದ್ರಮಾನ ಯುಗಾದಿಯನ್ನು ಆಚರಿಸುತ್ತಾರೆ.

**2. ಸೌರಮಾನ ಯುಗಾದಿ:** ಚೈತ್ರಮಾಸದ ಶುಕ್ಲಪಕ್ಷದ ನವಮಿಯಂದು ತಮಿಳುನಾಡು, ಕೇರಳ ಮತ್ತು ಉತ್ತರ ಭಾರತದಲ್ಲಿ ಸೌರಮಾನ ಯುಗಾದಿ ಆಚರಿಸಲಾಗುತ್ತದೆ.

ಯುಗಾದಿಯನ್ನು ಮರಾಠಿಗರು **"ಗುಡಿಪಾಡವ"** ಎಂಬ ಹೆಸರಿನಲ್ಲಿ ಆಚರಿಸುತ್ತಾರೆ. ಉದ್ದವಾದ ಗಳುವಿಗೆ ನೂತನ ವಸ್ತ್ರ, ಮಾವು ಬೇವಿನ ಅಲಂಕಾರ ಮಾಡಿ ತಮ್ಮ ಮನೆಯಲ್ಲಿಯೇ ಅದನ್ನು ಕಂಬಕ್ಕೆ ಕಟ್ಟಿ ಏರಿಸುತ್ತಾರೆ. ಸೂರ್ಯನು ಮುಳುಗುವ ವೇಳೆಗೆ ಇಳಿಸುತ್ತಾರೆ. ಕೆಲವು ಕಡೆ ಸಿಹಿತಿಂಡಿಗಳ ಪೊಟ್ಟಣವನ್ನು ಅದರೊಡನೆ ಏರಿಸುತ್ತಾರೆ. ಇಳಿಸಿದ ಬಳಿಕ ಅದನ್ನು ಮಕ್ಕಳಿಗೆ ವಿತರಿಸುತ್ತಾರೆ.

ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಯುಗಾದಿಯನ್ನು **'ಚಿತ್ರವಿಷ್ಣು'** ಎಂದು ಕರೆದರೆ, ಉತ್ತರ ಭಾರತದಲ್ಲಿ ಸಂವತ್ಸರ ಪ್ರತಿಪಾದ, ನವವರ್ಷ ಪ್ರತಿಪಾದ, ಸಂವತ್ಸರಾರಂಭ ಎಂಬ ಹೆಸರುಗಳಿಂದ ಕರೆಯುತ್ತಾರೆ.

ಯುಗಾದಿಯಂದು ರೈತರು ಸಾಂಕೇತಿಕವಾಗಿ ತಮ್ಮ ಕೃಷಿ ಕಾರ್ಯವನ್ನು ಪ್ರಾರಂಭಿಸುತ್ತಾರೆ. ದೇವಾಲಯಗಳಲ್ಲಿ ಸಾಮೂಹಿಕವಾಗಿ ಪೂಜೆ ಸಲ್ಲಿಸಿ ತರುವಾಯ ತಮ್ಮ ಹೊಲಗದ್ದೆಗಳಲ್ಲಿ ಸ್ವಲ್ಪ ಹೊತ್ತು ಉಳುಮೆ ಮಾಡಿ ಬರುತ್ತಾರೆ. ಈ ಆಚರಣೆಗೆ ಹೊನ್ನೇರು ಎಂಬ ಹೆಸರಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಣ್ಣೆಯೊಂದಿಗೆ ಅರಿಸಿಣ ಕಲಸಿ ಮೈಗೆಲ್ಲ ಲೇಪಿಸಿಕೊಂಡು ಬಿಸಿಲಿಗೆ ಮೈಯೊಡ್ಡಿ ಗ್ರಾಮೀಣ ಕ್ರೀಡೆಗಳನ್ನು ಈ ದಿನದಂದು ಆಡುತ್ತಾರೆ.

ಹನ್ನೆರಡು ವರ್ಷಗಳು ಸತತವಾಗಿ ನಾವು ಎಲ್ಲಿ ವಾಸಿಸುತ್ತೇವೊ, ಅಲ್ಲಿಯ ಪಂಚಾಂಗವನ್ನು ಅನುಸರಿಸಬೇಕೆಂದು ಧರ್ಮಶಾಸ್ತ್ರಗಳು ಉಲ್ಲೇಖಿಸಿವೆ. ವಲಸೆ ಹೋದ ಜನರಿಗೆ ಈ ಸೂತ್ರ ಅನ್ವಯಿಸುತ್ತದೆ.

ಯುಗಾದಿಯ ಮರುದಿನವನ್ನು ವರ್ಷತೊಡಕು ಎನ್ನುತ್ತಾರೆ. ಇದು ಸತ್ಕಾರ್ಯದಲ್ಲಿ ತೊಡಗುವ ಮಂಗಳಕರವಾದ ದಿನ. ರಾತ್ರಿಯಲ್ಲಿ ಚಂದ್ರ ದರ್ಶನ; ಬಿದಿಗೆಯ ಚಂದ್ರನಲ್ಲಿ ಎರಡು ಕಲೆಗಳು ಉದಿಸಿರುತ್ತವೆ. ನಾವು ಕೂಡ ಬದುಕಿನಲ್ಲಿ ದಿನದಿಂದ ದಿನಕ್ಕೆ ಅಭಿವೃದ್ಧಿ ಸಾಧಿಸಬೇಕೆಂಬ ಸಂಕೇತವಿದು.

□

# ಕಿನ್ನರಿ ಬ್ರಹ್ಮಯ್ಯನ ಜನ್ಮಸ್ಥಳ : ಒಂದು ಅವಲೋಕನ

**ಡಾ. ಚಿದಾನಂದ ಚಿಕ್ಕಮಠ**

**ವ್ಯ**ಕ್ತಿಯೋರ್ವನ ಜೀವನ ಚರಿತ್ರೆಯನ್ನು ನಿರ್ಮಿಸತೊಡಗಿದಾಗ ಆತನಿಗೆ ಸಂಬಂಧಿಸಿದ ಚಾರಿತ್ರಿಕ ಸಂಗತಿಗಳನ್ನೊಳಗೊಂಡ ವಿಶ್ವಸನೀಯ ಆಕರಗಳನ್ನು ಕಲೆಹಾಕಬೇಕಾಗುತ್ತದೆ. ಆದರೆ, ನಂಬಲರ್ಹವಾದ ಆಕರ ಸಾಮಗ್ರಿಗಳ ಕೊರತೆಯುಂಟಾದಾಗ ಜೀವನ ಚರಿತ್ರೆಯನ್ನು ಸಮಗ್ರವಾಗಿ ಹಾಗೂ ವಿಶ್ವಸನೀಯವಾಗಿ ಕಟ್ಟಿಕೊಡುವುದು ಅಥವಾ ಕಂಡುಹಿಡಿಯುವುದು ತುಂಬ ಕಷ್ಟದಾಯಕ ಕೆಲಸವಾಗುತ್ತದೆ. ಇದರೊಂದಿಗೆ, ವ್ಯಕ್ತಿಯೋರ್ವ ವಿಶೇಷವೆನ್ನುವ ರೀತಿಯಲ್ಲಿ ಏನಾದರೊಂದು ಕೆಲಸವನ್ನೋ, ಸಾಧನೆಯನ್ನೋ ಮಾಡಿಬಿಟ್ಟರಂತೂ ಮುಗಿದೇಹೋಯಿತು. ಜನ ಬಹುಬೇಗ ಆ ವ್ಯಕ್ತಿಯನ್ನು ಮಹಾಪುರುಷನೆಂತಲೋ, ದೈವಾಂಶಸಂಭೂತನೆಂತಲೋ ಭಾವಿಸಿ ಆತನ ಹೆಸರಿನಲ್ಲಿ ಅನೇಕ ಪವಾಡಗಳನ್ನೇ ಸೃಷ್ಟಿಸಿಬಿಡುತ್ತಾರೆ. ಈ ರೀತಿಯ ಘಟನೆಗಳಿಂದ ವ್ಯಕ್ತಿಯ ಜೀವನದ ನಿಜಸಂಗತಿಗಳು ಮರೆಮಾಚಿಹೋಗುತ್ತವೆ. ಮಹಾತ್ಮರೆನಿಸಿಕೊಂಡವರ ಜೀವನದಲ್ಲಿ ಇದನ್ನು ನಾವು ಹೆಚ್ಚಾಗಿ ಗುರುತಿಸಬಹುದು. 12ನೆಯ ಶತಮಾನದಲ್ಲಿ ಆದರ್ಶಪ್ರಾಯವಾಗಿ ಬಾಳಿ ಬದುಕಿಹೋಗಿರುವ ಬಸವಾದಿ ಶಿವಶರಣರ ಚರಿತ್ರೆಯೂ ಇದಕ್ಕೆ ಹೊರತಾದುದಲ್ಲ. ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭುದೇವರು, ಮಹಾದೇವಿಯಕ್ಕ, ಸಿದ್ಧರಾಮ, ಮಡಿವಾಳ ಮಾಚಿದೇವ, ಕಿನ್ನರಿಬ್ರಹ್ಮಯ್ಯ ಹೀಗೆ ಬಹುತೇಕ ಶಿವಶರಣರ ಜೀವನ ಚರಿತ್ರೆಗಳು ಪವಾಡ–ಚಮತ್ಕೃತಿಗಳಿಂದ ತುಂಬಿ ತುಳುಕುತ್ತಿವೆ. ಹೀಗಾಗಿ, ಈ ಬಸವಾದಿ ಶಿವಶರಣರ ವಾಸ್ತವ ಜೀವನ ಚಿತ್ರಣವನ್ನು ಸೆರೆಹಿಡಿಯುವುದು ಬಹು ಕಷ್ಟದಾಯಕವಾದ ಕಾರ್ಯ.

ಬಸವಾದಿ ಶಿವಶರಣರು ಆತ್ಮಪ್ರಶಂಸೆಗೆ ಕಿಂಚಿತ್ತು ಬೆಲೆಕೊಡದೆ, ಕೇವಲ ಆತ್ಮೋನ್ನತಿಗಾಗಿ ಹರಸಿ ಹಂಬಲಿಸಿದವರು. ಹೀಗಾಗಿ, ಅವರು ತಮ್ಮ ವೈಯಕ್ತಿಕ ಬದುಕಿನ ವಿವರಗಳನ್ನು ಎಲ್ಲಿಯೂ ದಾಖಲಿಸಲಿಲ್ಲ. ಕೇವಲ ಅನುಭಾವವನ್ನಷ್ಟೇ ಉಸುರಿದರು. ಅದರಂತೆ ಬಾಳಿ–ಬದುಕಿ ಕೊನೆಗೆ ಮರೆಯಾದರು. ಹೀಗಾಗಿ ಈ ಒಂದು ಕಾರಣವೂ ಮುಖ್ಯವಾಗಿ ಅವರ ಜೀವನಚಿತ್ರಣವನ್ನು ಕಂಡುಹಿಡಿಯುವಲ್ಲಿ ಎದುರಾಗುವ ಕೊರತೆಗಳಲ್ಲಿ ಪ್ರಧಾನವಾದುದಾಗಿ ನಿಲ್ಲುತ್ತದೆ. ಈ ಕಾರಣಗಳಿಂದಾಗಿ

ಶರಣರ ಜೀವನ ಚರಿತ್ರೆಯನ್ನು ಕಟ್ಟುವ ಕಾರ್ಯದಲ್ಲಿ ಆಂತರಿಕ ಪ್ರಮಾಣಗಳು ದೊರಕದೆ, ಬಾಹ್ಯಪ್ರಮಾಣಗಳ ಆಧಾರದಿಂದ ಚರಿತ್ರೆಯನ್ನು ನಿರ್ಮಿಸಬೇಕಾಗುತ್ತದೆ. ಆದರೆ, ಈ ಆಧಾರಗಳನ್ನು ಇಟ್ಟುಕೊಂಡು ವಸ್ತುನಿಷ್ಠ ಚರಿತ್ರೆಯನ್ನು ರೂಪಿಸಿಕೊಡುವುದು ತುಂಬ ಕಷ್ಟದ ಕೆಲಸವೆನ್ನಬಹುದು. ಕೆಲವು ಬಾರಿ ಅಸಾಧ್ಯವಾದ ಮಾತು. ಕಿನ್ನರಿಬ್ರಹ್ಮಯ್ಯ ಸಹ ಇವೆರಡರಿಂದ ಹೊರತಾಗಿಲ್ಲವೆಂದು ಹೇಳಬಹುದು.

ಕಿನ್ನರಿಬ್ರಹ್ಮಯ್ಯನ ಜನನ, ಬಾಲ್ಯ, ವಿದ್ಯಾಭ್ಯಾಸಗಳ ಕುರಿತಾದ ಮಾಹಿತಿಯನ್ನು ಒದಗಿಸುವ ಕೃತಿಗಳು ಇಲ್ಲವೆಂದೇ ಹೇಳಬಹುದು. ಶಿವಶರಣರ ಕುರಿತು ಕೃತಿ ರಚಿಸಿದವರಲ್ಲಿ, ಆ ಪರಂಪರೆಗೆ ನಾಂದಿ ಹಾಡಿದವರಲ್ಲಿ ಹರಿಹರನೇ ಮೊದಲಿಗ. ಆತನ ಕೃತಿಯಾದ ಬಸವರಾಜದೇವರ ರಗಳೆಯ 11ನೆಯ ಸ್ಥಲದಲ್ಲಿ ಕಿನ್ನರಿಬ್ರಹ್ಮಯ್ಯನ ಬಗೆಗೆ ಉಲ್ಲೇಖವಾಗಿದ್ದು, ಆತ ಕಲ್ಯಾಣಕ್ಕೆ ಬಂದ ಅನಂತರದಲ್ಲಿ ಬಸವಣ್ಣ ಮತ್ತು ಆತನ ಮಧ್ಯೆ ನಡೆದ ಘಟನೆಯೊಂದರ ಚಿತ್ರಣ ಮಾತ್ರ ಕಂಡುಬರುತ್ತದೆ. ಹೊರತಾಗಿ, ಹುಟ್ಟೂರಿನಲ್ಲಿರುವಾಗಿನ ಆತನ ಜೀವನದ ವಿವರಗಳು ಅಲ್ಲಿ ಕಂಡುಬರುವುದಿಲ್ಲ. ಹರಿಹರನ ನಂತರ ಬಂದ ಕವಿಗಳಿಂದ ರಚನೆಗೊಂಡ ಹಲವು ಕಾವ್ಯ–ಪುರಾಣಗಳಲ್ಲಿ ಕಿನ್ನರಿಬ್ರಹ್ಮಯ್ಯ ಪ್ರಾಸಂಗಿಕವಾಗಿ ಕಂಡುಬಂದರೆ, ಇದೇ ಕಾಲದಲ್ಲಿ ರಚನೆಯಾದ ಬಸವಪುರಾಣ, ಬಸವರಾಜ ವಿಜಯಂ, ಪುರಾತನರ ಚರಿತೆ (ಗಣಾಡಂಬರ ಚರಿತೆ), ಶಿವಶರಣ ವಿಲಾಸ, ವೀರಶೈವಾಮೃತ ಪುರಾಣ, ಬಸವೇಶ್ವರ ಷಟ್‌ಸ್ಥಲ ವಚನದ ಕಥಾಸಾರ, ಸಿಂಗಿರಾಜ ಪುರಾಣ ಮುಂತಾದ ಕೆಲವು ಕಾವ್ಯ–ಪುರಾಣಗಳಲ್ಲಿ ಆತನ ಕಲ್ಯಾಣ ಆಗಮನದ ಪೂರ್ವದ ಕೆಲ ವಿವರಗಳು ದೊರಕುತ್ತವೆ. ಏನೇ ಆದರೂ ಎಲ್ಲಾ ಕಾವ್ಯ–ಪುರಾಣಗಳಲ್ಲಿ ಕಿನ್ನರಿಬ್ರಹ್ಮಯ್ಯ ಅಲ್ಪ ವಿವರಗಳೊಂದಿಗೋ ಇಲ್ಲವೆ ದೀರ್ಘ ವಿವರಗಳೊಂದಿಗೋ ಕಂಡುಬಂದರೂ ಕೇವಲ ಪ್ರಾಸಂಗಿಕವಾಗಿ ಮಾತ್ರ ಕಂಡುಬರುತ್ತಾನೆ. ಹೊರತಾಗಿ, ಈತನ ಕುರಿತಾಗಿ ಕನಿಷ್ಠ ಒಂದೂ ಸ್ವತಂತ್ರ ಕಾವ್ಯಕೃತಿ ರಚನೆಯಾಗಲಿಲ್ಲ. ಇದೂ ಸಹ ಕಿನ್ನರಿಬ್ರಹ್ಮಯ್ಯನ ಸಮಗ್ರ ಜೀವನ ಚರಿತ್ರೆಯನ್ನು ಕಂಡುಕೊಳ್ಳುವಲ್ಲಿ ಎದುರಾಗುವ ಕೊರತೆಗಳಿಗೆ ಮುಖ್ಯ ಕಾರಣವಾಗಿದೆ. ಇನ್ನು ಕಿನ್ನರಿಬ್ರಹ್ಮಯ್ಯ ಹಲವು ಜನ ಶಿವಶರಣರ ವಚನಗಳಲ್ಲಿ ಉಲ್ಲೇಖವಾಗಿದ್ದು, ಅವುಗಳು ಶೂನ್ಯಸಂಪಾದನೆಗಳಲ್ಲಿ ದಾಖಲಾಗಿವೆ. ಕೆಲವು ಪ್ರಸಂಗಗಳಲ್ಲಿ ಕಿನ್ನರಿಬ್ರಹ್ಮಯ್ಯ ಕಾಣಿಸಿಕೊಂಡಿದ್ದು, ಇವುಗಳೂ ಆತನ ಜೀವನದಲ್ಲಿ ನಡೆದಿರಬಹುದಾದ ಕೆಲವು ಚಾರಿತ್ರಿಕ ಘಟನೆಗಳ ಮಾಹಿತಿಯನ್ನು ಒದಗಿಸಿಕೊಡುತ್ತವೆ. ಹೀಗೆ, ಈ ಎಲ್ಲ ಬಗೆಯ ಆಕರಗಳನ್ನು ಮುಂದಿಟ್ಟುಕೊಂಡು ಆತನ ಜೀವನದ ವಿವರಗಳನ್ನು ಕಟ್ಟಿಕೊಡಬಹುದಾಗಿದೆ.

ಕಿನ್ನರಿಬ್ರಹ್ಮಯ್ಯನ ಜನ್ಮಸ್ಥಳ ಕುರಿತು ಕಾವ್ಯ–ಪುರಾಣಗಳಲ್ಲಿ ಭಿನ್ನಭಿನ್ನ ಉಲ್ಲೇಖಗಳು ಕಂಡುಬರುತ್ತವೆ. ಅವುಗಳನ್ನು ಈ ಕೆಳಗಿನಂತೆ ಕಾಣಬಹುದು.

**ಬಸವ ಪುರಾಣದಲ್ಲಿ**

ಜಂಗಮಾವಳಿಗೊಸೆದು ಪರಿಚರಿ
ಯಂಗಳಂ ಮಾಡುತ್ತ ತೇಜೋ
ತ್ತುಂಗ ಭಕ್ತಿಯೊಳಿಂತು ಪೂಡೂರೊಳು ಪೆಸರ್ವೆತ್ತು
ಸಾಂಗಮಾಗಿರೆ ವಿವಿಧ ಕಾಯಕ
ಸಂಗತಂಗಳನಱುದು ಪಲವ
ರ್ಥಂಗಳಂ ನಾನಾ ಪ್ರಕಾರದೊಳುಂಗಳಿಸಿ ತಂದು

ಕಿನ್ನರಿಬ್ರಹ್ಮಯ್ಯನು ತೇಜೋತ್ತುಂಗ ಭಕ್ತಿಯಿಂದ ಕೂಡಿದವನಾಗಿ ಜಂಗಮ ಸೇವೆಯನ್ನು ಮಾಡುತ್ತ (ಜಂಗಮದಾಸೋಹ), ಪೂಡೂರು ಎಂಬ ಗ್ರಾಮದಲ್ಲಿ ವಿವಿಧ ಕಾಯಕಗಳನ್ನು ಮಾಡಿಕೊಂಡು ಹಲವು ಅರ್ಥಂಗಳನ್ನು ಗಳಿಸಿ ಘನತೆ-ಕೀರ್ತಿಗಳಿಂದ ಕೂಡಿ ಜೀವನವನ್ನು ನಡೆಸುತ್ತಿದ್ದನು ಎಂದು ಭೀಮಕವಿಯು ತಿಳಿಸುತ್ತಾನೆ.

**ಬಸವರಾಜ ವಿಜಯಂದಲ್ಲಿ**

ಧರಣೀ ಭಾಗದೊಳೇಳ್ಗೆವೆತ್ತೆಸೆವ ಪೂಡೂರೆಂಬ ಸದ್ಗ್ರಾಮದೊಳ್
ಪರಭೀಮಂ ದುರಿತಾಮಯಾರಿ ಸುಜನಸ್ತೋಮಸ್ತುತಂ ಸತ್ಯಸಂ
ಗರನಂಗೇಂದ್ರಿಯಲಿಂಗಸಂಗತನುದಾರಸ್ಥಾರ ವೀರವ್ರತಾ
ಚರಣಂ ಕಿನ್ನರ ಬೊಮ್ಮಿದೇವನೆಸೆದಂ ದುರ್ದಾಂತವಾಗ್ಭಂಜನಂ

ಧರಣೀಭಾಗದಲ್ಲಿ ಕೀರ್ತಿಯಿಂದ ಕೂಡಿರುವ ಪೂಡೂರು ಎಂಬ ಸದ್ಗ್ರಾಮದಲ್ಲಿ ಶಕ್ತಿವಂತನಾಗಿ, ಸಜ್ಜನರಿಂದ ಹೊಗಳಿಸಿಕೊಳ್ಳುತ್ತ, ಸತ್ಯತನದಿಂದ ಕೂಡಿ ವೀರವ್ರತಾಚಾರ ವನ್ನು ಪಾಲಿಸುತ್ತ ಕಿನ್ನರಿಬ್ರಹ್ಮಯ್ಯನು ತನ್ನ ಜೀವನವನ್ನು ನಡೆಸುತ್ತಿದ್ದನು ಎಂದು ಷಡಕ್ಷರದೇವ ತಿಳಿಸುತ್ತಾನೆ.

**ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರದಲ್ಲಿ**

ಪೂಡೂರಲ್ಲಿ ಕಿನ್ನರಯ್ಯನು ಜಂಗಮಾರ್ಚನೆಯ ಮಾಡುವಲ್ಲಿ
ದ್ರವ್ಯತೀರಲು, ಕಿನ್ನರವೀಣೆಯ ರಚಿಸಿ ಲಿಂಗಕ್ಕೆ ಪಾಡಿ ಕೇಳಿಸಿ
ಭಕ್ತರಿಂದ ಕಾಯಕವಂ ತಂದು.......

ಕಿನ್ನರಯ್ಯನು ಪೂಡುರು ಎಂಬಲ್ಲಿಯೆ ಕಿನ್ನರವೀಣೆಯ ನುಡಿಸಿ, ಅದರಿಂದ ಬಂದ ಕಾಯಕ (ದ್ರವ್ಯ)ದಲ್ಲಿ ಜಂಗಮಾರ್ಚನೆ ಮಾಡುತ್ತಿದ್ದ ಎಂದು ಹೇಳಿದ್ದಾನೆ ಕವಿ ಶಾಂತಲಿಂಗದೇಶಿಕನು.

**ಪುರಾತನರ ಚರಿತ್ರೆಯಲ್ಲಿ**

ಪೂಡೂರೆನಿಪ್ಪ ಪುರದೊಳು ಚಿನ್ನಕಾಯಕವ
ಮಾಡಿಕೊಂಡಭವಭಜಕರ್ಗೆ ಶಯನೋದಕವ
ನೀಡುತ್ತೆ ಕಿನ್ನರಯ್ಯಗಳಿರ್ದೊಡವರ ........

ಕಿನ್ನರಯ್ಯನು ಪೂಡೂರು ಎಂಬ ಗ್ರಾಮ(ಪುರ)ದಲ್ಲಿ ಚಿನ್ನಕಾಯಕ (ಅಕ್ಕಸಾಲಿಗ ವೃತ್ತಿ)ವನ್ನು ಮಾಡಿಕೊಂಡು ಶಿವಭಕ್ತರಿಗೆ ಸೇವೆಯನ್ನು ಒದಗಿಸುತ್ತ ಜೀವನ ನಡೆಸುತ್ತಿದ್ದನು ಎಂದು ಕುಮಾರ ಚೆನ್ನಬಸವನು ತಿಳಿಸುತ್ತಾನೆ.

**ಬಸವೇಶ್ವರ ಷಟ್‌ಸ್ಥಲ ವಚನದ ಕಥಾಸಾರದಲ್ಲಿ**

ಹೂದೂರಲ್ಲಿ ಕಲಿದೇವಿ ಎಂಬ ಭಕ್ತಿಯ ಪುತ್ರನಾದ
ಕಿನ್ನರಯ್ಯಗಳು ಅಕ್ಕಸಾಲೆಯ ಕಾಯಕದಲ್ಲಿದ್ದು...........

ಕಲಿದೇವಿ ಎಂಬ ಭಕ್ತೆಯ ಮಗನಾದ ಕಿನ್ನರಯ್ಯಗಳು ಹೂದೂರು ಎಂಬಲ್ಲಿ ಅಕ್ಕಸಾಲೆಯ ಕಾಯಕವನ್ನು ಮಾಡಿಕೊಂಡಿದ್ದರು ಎಂದು ಅಜ್ಞಾತ ಕವಿಯೋರ್ವ ಮಾಹಿತಿಯೊದಗಿಸುತ್ತಾನೆ.

**ಶಿವಶರಣ ವಿಲಾಸದಲ್ಲಿ**

ಆಗಲಾಪೂಡೂರುಯೆಂಬ ಗ್ರಾಮದೊಳು
ನಾಗಭೂಷಣ ಭರ್ಗನಡಿಯ ನೆನಪಿನೊಳು ॥
ಕಿನ್ನರಿಬ್ರಹ್ಮಯ್ಯನೆಂಬ ಕೋವಿದನು
...............................................

ಪೂಡೂರು ಎಂಬ ಗ್ರಾಮದಲ್ಲಿ ಕಿನ್ನರಿಬ್ರಹ್ಮಯ್ಯನೆಂಬ ಕೋವಿದ(ಪಂಡಿತ)ನು ಶಿವನ ಸ್ಮರಣೆಯಲ್ಲಿ ಜೀವಿಸುತ್ತಿದ್ದನು ಎಂದು ಕವಿ ಮಹಾಂತದೇಶಿಕ ಕಿನ್ನರಯ್ಯನ ಜನ್ಮಸ್ಥಳದ ಕುರಿತು ತಿಳಿಸುತ್ತಾನೆ.

**ಸಂಸ್ಕೃತ ಬಸವ ಪುರಾಣದಲ್ಲಿ**

ತದ್ಧನೇನಾನ್ವಹಂ ಭಕ್ತಸೇವಾವಿಧಿಪರಾಯಣಃ ।
ಪುರೂಡಾಖ್ಯೇ ಪುರೆ ಸಿದ್ಧಿಃ ಪೂಜ್ಯಮನೋವಸತ್ಸುಧಿಃ ॥

ಸಂಪತ್ತಿನಿಂದ ಕೂಡಿ, ಭಕ್ತಿಸೇವಾಪರಾಯಣನಾಗಿ, ಸತ್ಪುರುಷರಿಂದ ಪೂಜಿಸಲ್ಪಡುತ್ತ, ಬುದ್ಧಿವಂತನಾದ ಕಿನ್ನರಬ್ರಹ್ಮಯ್ಯನು 'ಪುರೂಡ'ವೆಂಬ ಪುರ(ಗ್ರಾಮ) ದಲ್ಲಿ ವಾಸವಾಗಿದ್ದನು ಎಂದು ಕವಿ ಕಂಚಿ ಶಂಕರಾರಾಧ್ಯನು ಕಿನ್ನರಿಬ್ರಹ್ಮಯ್ಯನ ಜನ್ಮಸ್ಥಳದ ಮಾಹಿತಿಯನ್ನು ನೀಡುತ್ತಾನೆ.

**ಹಂತಿ ಹಾಡುಗಳಲ್ಲಿ**

ಹೂಡೂರ ಹಳ್ಳ್ಯಾಗೆ ಹೂಡಿದನು ಕಾಯಕವ
ಮಾಡಿ ಜಂಗಮಕೆ ದಾಸೋಹ। ಸಿರಿವಂತ
ನೀಡಿ ಶಿವಭಕ್ತಿ ಶಿವಮತಕೆ

ಕಿನ್ನರಿಬ್ರಹ್ಮಯ್ಯನು ಹೂಡೂರು ಎಂಬ ಹಳ್ಳಿಯಲ್ಲಿ ತನ್ನ ಕಾಯಕವನ್ನು ಮಾಡುತ್ತ, ಜಂಗಮಕ್ಕೆ ದಾನ–ದಾಸೋಹಾದಿಗಳನ್ನು ಮಾಡಿಕೊಂಡು ಶಿವಭಕ್ತಿಯಿಂದ ಜೀವನವನ್ನು ನಡೆಸುತ್ತಿದ್ದ ಎಂದು ತಿಳಿಸುತ್ತದೆ ಪ್ರಸ್ತುತ ತ್ರಿಪದಿ.

ಈ ಮೇಲಿನ ಕೆಲವು ಕಾವ್ಯಗಳಲ್ಲಿ ಕಿನ್ನರಿಬ್ರಹ್ಮಯ್ಯನ ಜನ್ಮಸ್ಥಳ ಪೂಡೂರು ಎಂದು ಹೇಳಿರುವುದು ಕಂಡುಬಂದರೆ, ಬಸವೇಶ್ವರ ಷಟ್‌ಸ್ಥಲ ವಚನದ ಕಥಾಸಾರ ಮತ್ತು ಹಂತಿಹಾಡುಗಳಲ್ಲಿ ಅನುಕ್ರಮವಾಗಿ ಹೂದೂರು–ಹೂಡೂರು ಎಂದು ಹೇಳಲಾಗಿದೆ. ಇನ್ನು, ಸಂಸ್ಕೃತ ಬಸವ ಪುರಾಣದಲ್ಲಿ ಎಲ್ಲಕ್ಕಿಂತ ಭಿನ್ನವಾಗಿ 'ಪುರೂಡ' ಎಂಬ ಗ್ರಾಮದಲ್ಲಿ ಕಿನ್ನರಯ್ಯ ಇದ್ದ ಎಂದು ತಿಳಿಸಲಾಗಿದೆ. ಬಸವೇಶ್ವರ ಷಟ್‌ಸ್ಥಲ ವಚನದ ಕಥಾಸಾರ ಮತ್ತು ಹಂತಿಹಾಡುಗಳಲ್ಲಿ ಹೇಳಲಾಗಿರುವ ಹೂದೂರು ಮತ್ತು ಹೂಡೂರು ಎಂಬುವುಗಳೆರಡೂ ಪೂಡೂರು ಎಂಬುದನ್ನೇ ಪ್ರತಿನಿಧಿಸುತ್ತಿವೆ ಎನ್ನಬಹುದು. "ಪೂಡೂರು" ಎಂದು ಕರೆಯಲ್ಪಡುವ ಪದದಲ್ಲಿನ ಪಕಾರದ ಸ್ಥಾನವನ್ನು ಕಾಲಾಂತರದಲ್ಲಿ ಬಹುಶಃ ಹಕಾರವು ಬಂದು ಆವರಿಸಿಕೊಂಡಿರುವುದರಿಂದ (ಪ>ಹ) ಪೂಡೂರು ಎಂಬುದನ್ನೇ ಹೂಡೂರು ಅಥವಾ ಹೂದೂರು ಎಂದು ಕರೆದಿರುವುದಾಗಿ ಊಹಿಸಬಹುದಾಗಿದೆ. ಇದರೊಂದಿಗೆ, ಸಂಸ್ಕೃತ ಬಸವ ಪುರಾಣದಲ್ಲಿ ಉಲ್ಲೇಖಿಸ ಲಾಗಿರುವ "ಪುರೂಡ" ಎಂಬುದನ್ನು ಅವಲೋಕಿಸುವುದಾದರೆ ಪೂಡೂರು ಮತ್ತು ಪುರೂಡ ಎಂಬ ಉಭಯ ಪದಗಳ ನಡುವೆ ಸಾಮ್ಯತೆ ಇದ್ದು, ಇಲ್ಲಿ ಬಹುಶಃ ವರ್ಣಗಳ ಸ್ಥಾನಪಲ್ಲಟ ಪ್ರಕ್ರಿಯೆ ನಡೆದ ಹಾಗೆ ಕಂಡುಬರುತ್ತದೆ. ಡ ಕಾರ ಮತ್ತು ರ ಕಾರಗಳು ಪರಸ್ಪರ ಸ್ಥಾನಪಲ್ಲಟಕ್ಕೊಳಗಾಗಿರುವ ಸಾಧ್ಯತೆ ಇದೆ. ತೆಲಗು ಬಸವಪುರಾಣವನ್ನು ಅನುಸರಿಸಿ ರಚಿತವಾದ ಕನ್ನಡ ಬಸವ ಪುರಾಣದಲ್ಲಿ ಕಿನ್ನರಯ್ಯನ ಜನ್ಮಸ್ಥಳ ಪೂಡೂರು ಎಂದು ಸ್ಪಷ್ಟವಾಗಿ ಹೇಳಲಾಗಿದೆ (ತೆಲಗು ಬಸವ ಪುರಾಣ ದಲ್ಲಿಯೂ ಪೂಡೂರು ಎಂದೇ ಹೇಳಲಾಗಿದೆ). ಇದನ್ನೇ ಅನುಸರಿಸಿ ರಚಿತವಾದ ಬಸವರಾಜ ವಿಜಯಂದಲ್ಲಿಯೂ ಪೂಡೂರು ಎಂದು ಕವಿ ಷಡಕ್ಷರದೇವ ತಿಳಿಸಿದ್ದಾನೆ. ಆದರೆ, ಕನ್ನಡ ಬಸವಪುರಾಣದಂತೆ ಮೂಲ ಬಸವಪುರಾಣವಾದ ತೆಲಗು ಬಸವ ಪುರಾಣವನ್ನು ಅನುಸರಿಸಿ ಸಂಸ್ಕೃತದಲ್ಲಿ "ಬಸವ ಪುರಾಣ" ರಚಿಸಿದ ಕಂಚಿ ಶಂಕರಾರಾಧ್ಯ ಮಾತ್ರ ಕಿನ್ನರಯ್ಯನ ಜನ್ಮಸ್ಥಳ "ಪುರೂಡ" ಎಂಬುದಾಗಿ ಭಿನ್ನ ಹೆಸರನ್ನು ತಿಳಿಸಿರುವುದು ಅಚ್ಚರಿಯ ಸಂಗತಿ. ಆದರೆ ಇಲ್ಲಿ ಒಂದು ಸಾಧ್ಯತೆಯನ್ನು ಊಹಿಸಬಹುದು. ಅದೇಂದರೆ, ಪ್ರತಿ ಮಾಡಿಕೊಳ್ಳುವ ಸಂದರ್ಭ ಸಂಭವಿಸಬಹುದಾದ ಪ್ರಕ್ಷೇಪದ ಕಾರಣದಿಂದಾಗಿಯೂ ಪೂಡೂರು ಎಂಬುದು ಪುರೂಡ ಎಂಬುದಾಗಿ ಪರಿವರ್ತಿತವಾಗಿರುವ ಸಾಧ್ಯತೆಗಳೂ ಇವೆ. ಆ ದೋಷ ಮುಂದೆ ಕಾವ್ಯದಲ್ಲಿ ಹಾಗೇ ಉಳಿದುಕೊಂಡುಬಂದಂತಿದೆ. ಈ ರೀತಿ ಕೆಲವು ಚಿಕ್ಕಪುಟ್ಟ ಭಿನ್ನತೆಗಳಿಂದ ಕೂಡಿ ಕಿನ್ನರಿಬ್ರಹ್ಮಯ್ಯನ ಜನ್ಮಸ್ಥಳವನ್ನು ಕಾವ್ಯ ಪುರಾಣಕಾರರು ತಿಳಿಸಿರುವುದನ್ನು ಕಾಣಬಹುದು.

ಇನ್ನು, ಆಧುನಿಕರ ಹೇಳಿಕೆಗಳನ್ನು ಗಮನಿಸುವುದಾದರೆ, "ದಕ್ಷಿಣ ದೇಶದಲ್ಲಿ ಪೂಡೂರೆಂಬ ಗ್ರಾಮವಿರುತ್ತದೆ. ಅಲ್ಲಿ ಕಿನ್ನರಿಬ್ರಹ್ಮಯ್ಯನೆಂಬ ಶಿವಶರಣನು ವಾಸ ಮಾಡುತ್ತಿದ್ದನು" ಎಂದು ಡಾ. ಫ.ಗು. ಹಳಕಟ್ಟಿಯವರು ಹೇಳಿದ್ದಾರೆ. "ಆಂಧ್ರ ದೇಶದಲ್ಲಿ ಪೂಡೂರೆಂಬ ಗ್ರಾಮವಿದ್ದಿರುತ್ತದೆ. ಅಲ್ಲಿ ಕಿನ್ನರಿಬ್ರಹ್ಮಯ್ಯನೆಂಬ ಶಿವಶರಣನು ಅಕ್ಕಸಾಲಿಗ ಕಾಯಕವನ್ನು ಮಾಡುತ್ತ ಜೀವಿಸುತ್ತಿದ್ದನು" ಎಂದು '770 ಅಮರಗಣಾಧೀಶ್ವರರ ಚರಿತ್ರೆಗಳು' ಕೃತಿಯಲ್ಲಿ ಹೇಳಲಾಗಿದೆ. "ಆಂಧ್ರದೇಶದ 'ಪೂಡೂರು' ಗ್ರಾಮದಲ್ಲಿ ಕಲಿದೇವಿ ಎಂಬ ಭಕ್ತೆಯ ಪುತ್ರನಾಗಿ ಜನಿಸಿದ ಕಿನ್ನರಯ್ಯಗಳು"[11] ಎಂದು ಡಾ. ಸಿದ್ಧಯ್ಯ ಪುರಾಣಿಕರು ತಿಳಿಸುತ್ತಾರೆ. "ಆಂಧ್ರದೇಶದ 'ಪುತ್ತೂರು'[12] ಗ್ರಾಮದಲ್ಲಿ ಕಿನ್ನರಯ್ಯ" ಜನಿಸಿದುದಾಗಿ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳು ಮಾಹಿತಿ ಒದಗಿಸಿದ್ದಾರೆ. "ಕಿನ್ನರಯ್ಯ ಮೂಲತಃ ಆಂಧ್ರದ ಪೂದೂರು (ಪೊಡೂರು) ಎಂಬ ಗ್ರಾಮದವನು" ಎಂದು ಡಾ. ಎಸ್. ವಿದ್ಯಾಶಂಕರ ಅವರು ತಿಳಿಸಿದ್ದಾರೆ. "ಕಿನ್ನರಿಬ್ರಹ್ಮಯ್ಯನ ಜನ್ಮಸ್ಥಳ ಆಂಧ್ರಪ್ರದೇಶದ 'ಪುಂತೂರು' ಎಂಬ ಪುಣ್ಯಗ್ರಾಮ" ಎಂದು ಶ್ರೀ ಎಚ್.ಎಸ್. ಸಿದ್ಧಗಂಗಪ್ಪನವರು ಅಭಿಪ್ರಾಯಪಟ್ಟಿದ್ದಾರೆ. "ಆಂಧ್ರಪ್ರದೇಶದ ಪೂಡೂರು ಎಂಬ ಗ್ರಾಮದಲ್ಲಿ ಕಿನ್ನರಯ್ಯಗಳು ಜನಿಸಿದರು" ಎಂದು ಪ್ರೊ. ಎಸ್. ಉಮಾಪತಿಯವರು ತಿಳಿಸಿದ್ದಾರೆ. "ಬೊಮ್ಮಯ್ಯನು ಆಂಧ್ರಪ್ರದೇಶದ ಪೂಡೂರು ಗ್ರಾಮದಲ್ಲಿ ಜನಿಸಿದನು" ಎಂದು ಪ್ರೊ. ಸೂಗಯ್ಯ ಹಿರೇಮಠ ಅವರು ಹೇಳುತ್ತಾರೆ. "ಕಿನ್ನರಯ್ಯ ಮೂಲತಃ ಆಂಧ್ರದ ಪೊಡುರು ಎಂಬ ಗ್ರಾಮದವನು" ಎಂದು ಡಾ. ಸೋಮನಾಥ ಯಾಳವಾರ ಅವರು ಅಭಿಪ್ರಾಯ ತಳೆದಿದ್ದಾರೆ. ಪ್ರೊ. ಬಿ. ಮಹದೇವಪ್ಪನವರು "ಕಿನ್ನರಯ್ಯನ ಜನ್ಮಸ್ಥಳ ಪೋಡೂರು" ಎಂದು ತಿಳಿಸುತ್ತಾರೆ.

ವಿದ್ವಾಂಸರ ಅಭಿಪ್ರಾಯಗಳಲ್ಲಿಯೂ ಕೆಲವೊಂದು ಹೆಸರುಗಳು ಭಿನ್ನಭಿನ್ನ ವಾಗಿರುವುದು ಕಂಡುಬರುತ್ತದೆ. ಏನೇ ಆದರೂ ಭೀಮಕವಿಯು ಹೇಳಿರುವ "ಪೂಡೂರು" ಎಂಬ ಗ್ರಾಮವೇ ಖಚಿತವಾಗಿಯೂ ಕಿನ್ನರಿಬ್ರಹ್ಮಯ್ಯನ ಜನ್ಮ ಗ್ರಾಮ ವಾಗಿರುವ ಸಾಧ್ಯತೆಗಳಿವೆ. ತೆಲುಗು ಬಸವ ಪುರಾಣವನ್ನು ಅನುಸರಿಸಿ ಕನ್ನಡ ಬಸವ ಪುರಾಣವನ್ನು ಭೀಮಕವಿ ರಚಿಸಿರುವುದರಿಂದ ಆಂಧ್ರನಾಡಿನವನೇ ಆದ ಪಾಲ್ಕುರಿಕೆ ಸೋಮನಾಥನು ಅದೇ ಪರಿಸರದವನಾದ (ಆಂಧ್ರನಾಡು) ಕಿನ್ನರಿಬ್ರಹ್ಮಯ್ಯನ ಜನ್ಮಸ್ಥಳವನ್ನು ಸರಿಯಾಗಿಯೇ ದಾಖಲಿಸಿರುತ್ತಾನೆ. ಹೀಗಾಗಿ ಭೀಮಕವಿಯು ಪೂಡೂರು ಎಂದು ಹೇಳಿರುವುದರಲ್ಲಿ ಯಾವ ಅನುಮಾನವೂ ಇರಲಾರದು. ವಿಶೇಷವೆಂದರೆ, ಪೂಡೂರು ಎಂಬ ಹೆಸರಿನ ಗ್ರಾಮವೊಂದು ಇಂದಿಗೂ ಅತ್ಯಂತ ಸ್ಪಷ್ಟವಾಗಿ ಅದೇ ಹೆಸರಿನಿಂದ ಅಸ್ತಿತ್ವದಲ್ಲಿದ್ದುದು ಕಂಡುಬರುತ್ತದೆ. ಇತ್ತೀಚೆಗೆ ವಿಭಜಿತವಾದ ತೆಲಂಗಾಣ ರಾಜ್ಯಕ್ಕೆ ಸೇರಿದ ಪುಟ್ಟ ಗ್ರಾಮವಾಗಿದೆ. ಕರ್ನಾಟಕ ರಾಜ್ಯದ ಗಡಿಗೆ

ತುಂಬಾ ಹತ್ತಿರವಾಗಿದೆ. ಡಾ. ಫ.ಗು. ಹಳಕಟ್ಟಿ ಮತ್ತು ಡಾ. ಸಿದ್ಧಯ್ಯ ಪುರಾಣಿಕರು ಮಾಹಿತಿ ಒದಗಿಸುವಂತೆ ಈ ಗ್ರಾಮ ಆಂಧ್ರದೇಶ(ಪ್ರದೇಶ)ದ ವ್ಯಾಪ್ತಿಗೆ ಒಳಪಡುತ್ತದೆ. ಹೀಗಾಗಿ, ಈ ಎಲ್ಲಾ ಅಂಶಗಳನ್ನು ಆಧಾರವಾಗಿಟ್ಟುಕೊಂಡು "ಮೂಡೂರು" ಎಂಬ ಹೆಸರಿನ ಗ್ರಾಮವೇ ಆತನ ಜನ್ಮಸ್ಥಳ ಎಂದು ಅಂತಿಮವಾಗಿ ನಿರ್ಧಾರಕ್ಕೆ ಬರಲಾಗಿದೆ.

## ಕಿನ್ನರಿಬ್ರಹ್ಮಯ್ಯ ಸ್ಥಾವರ ದೈವದ ಆರಾಧಕನಾಗಿದ್ದನೇ?

ಜನಿಸಿದ ಮಗುವಿಗೆ ಅಂಗದ ಮೇಲೆ ಲಿಂಗವನ್ನು ಕರುಣಿಸುವುದೇ ಲಿಂಗಧಾರಣ (ಲಿಂಗದೀಕ್ಷೆ) ಕ್ರಿಯೆಯಾಗಿದೆ. ಕಿನ್ನರಿಬ್ರಹ್ಮಯ್ಯನಿಗೆ ಲಿಂಗದೀಕ್ಷೆಯಾದ ವಿಚಾರ ನೇರವಾಗಿ ಯಾವುದೇ ಕಾವ್ಯ-ಪುರಾಣಗಳಲ್ಲಿ ಕಂಡುಬರುವುದಿಲ್ಲ. ಆದರೆ, ಆತ ಒಬ್ಬ ಲಿಂಗಧಾರಿ ಶಿವಶರಣನಾಗಿದ್ದ ಎಂದು ನಿರ್ಧರಿಸಲು ಕೆಲವು ಉಲ್ಲೇಖಗಳು ವಚನಸಾಹಿತ್ಯ ಮತ್ತು ವೀರಶೈವ ಕಾವ್ಯ-ಪುರಾಣ ಸಾಹಿತ್ಯದಲ್ಲಿ ದೊರಕುತ್ತವೆ. ಮಡಿವಾಳ ಮಾಚಿದೇವರ ವಚನವೊಂದರಲ್ಲಿ ಮಾತ್ರ ಕಿನ್ನರಿಬ್ರಹ್ಮಯ್ಯನಿಗೆ ಗುರುವಿನಿಂದ ಇಷ್ಟಲಿಂಗವನ್ನು ಕರುಣಿಸಲ್ಪಟ್ಟ ವಿಚಾರ ಸ್ಪಷ್ಟವಾಗಿ ಉಲ್ಲೇಖವಾಗಿರುವುದನ್ನು ಕಾಣಬಹುದು.

ಮಡಿವಾಳ ಮಾಚಯ್ಯನ ವಚನದಲ್ಲಿ "ಕಿನ್ನರಯ್ಯಗಳ ಸ್ಥಾವರ ದೈವದ ಸೇವೆ, ಯಾಚಕತ್ವವ ಬಿಡಿಸಿ, ಗುರು ಕೊಟ್ಟ ಇಷ್ಟಲಿಂಗದಲ್ಲಿ ನಿಷ್ಠೆಯ ಗಟ್ಟಿಗೊಳಿಸಿ" ಎಂದು, "ಬಸವರಾಜದೇವರ ರಗಳೆಯಲ್ಲಿ "ಪಾದಂಗಳಂ ತೊಳೆದು ತೀರ್ಥಜಲಮಂ ತಳೆದು ಆದರಂ ಮಿಗೆ ಕಿಂಕರಾಕಾರದೊಳು ನೆರೆದು ಪನ್ನೆರಡುಸಾವಿರೊಡೆಯರ ನಡುವೆಯಾಡುತಂ ಕಿನ್ನರಯ್ಯಂಗೆ ಲಿಂಗಾರ್ಚನೆಗೆ ನೀಡುತಂ" ಎಂದು, ಬಸವಪುರಾಣದಲ್ಲಿ "ಘನತರೋತ್ಸುಕ ಚಿತ್ತದಿಂ ಮೇದಿನಿಯೊರಸಲಭಿವಂದಿಸುತ ತಾನನುನಯೋಚಿತ ಸತ್ಕ್ರಿಯಾದಿಗಳಿಂ ಪ್ರಿಯಂಬಡಿಸಿ" ಎಂದು, ಬಸವರಾಜ ವಿಜಯಂದಲ್ಲಿ "ಸುಜನಸ್ತೋಮಸ್ತುತಂ ಸತ್ಯಸಂಗರ ನಂಗೇಂದ್ರಿಯಲಿಂಗಸಂಗತನುದಾರಸ್ಫಾರ ವೀರವ್ರತಾಚರಣಂ ಕಿನ್ನರಬೊಮ್ಮಿ ದೇವನೆಸೆದಂ" ಎಂದು, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರದಲ್ಲಿ ".....ಕಿನ್ನರವೀಣೆಯ ರಚಿಸಿ ಲಿಂಗಕ್ಕೆ ಪಾಡಿ ಕೇಳಿಸಿ ಭಕ್ತರಿಂದ ಕಾಯಕವಂ ತಂದು....", ".... ಕಿನ್ನರಯ್ಯನು ಬಸವಣ್ಣನೊಡನೆ ಮುನಿದು ಪೋಗಿ ಲಿಂಗಕ್ಕೆ ಸಲುವಂತೆ ಉಳ್ಳಿಯನರ್ಪಿಸಿ ಬಸವಣ್ಣನ ಮನೆಗೆ ಬಂದು ಕಿನ್ನರಿ ವೀಣೆಯ ನುಡಿಸುತಂ ತಮ್ಮ ಲಿಂಗಕ್ಕೆ ಕೇಳಿಸಲಾಗ, ತ್ರಿಪುರಾಂತಕನೆಂಬ ಲಿಂಗವು ಲಾಲಿಸಿ ತಲೆದೂಗಿ ಸಾಕು ಸಾಕೆಂದು ನುಡಿಯಲು ಆಗಂ ಕಿನ್ನರಯ್ಯನು ಲಿಂಗವನರ್ಚಿಸಿ ಸುಖದಲ್ಲಿರ್ದರು", "..... ತಮ್ಮ ಮಠಕ್ಕೆಯ್ದಿ ಪೋಗಿ ತ್ರಿಪುರಾಂತಕನೆಂಬ ತಮ್ಮಿಷ್ಟಲಿಂಗದಲ್ಲಿ ಓಲಾಡುತಿರ್ದ ಕಿನ್ನರಬ್ರಹ್ಮಯ್ಯನು" ಎಂದು, ಬಸವೇಶ್ವರ ಕಾವ್ಯದಲ್ಲಿ "ಗುರುಭಕ್ತಿಯುಕ್ತನು ವರಲಿಂಗನಿಷ್ಠನು ಚರದಾಸೋಹ ಸಂಪನ್ನ ಅರಿವರ್ಗವಿಜಯ ಕಿನ್ನರಬೊಮ್ಮಿ ದೇವಯ್ಯ......" ಎಂದು,

ಬಸವೇಶ್ವರ ಷಟ್‌ಸ್ಥಲ ವಚನದ ಕಥಾಸಾರದಲ್ಲಿ "..... ಅದ ಕೇಳಿ ಶರಣರು ಅವರೆಂದಂತೆ ಇಷ್ಟಲಿಂಗದಲ್ಲಿ ಹಣವ ತೆಗೆದುಕೊಳ್ಳಿ ಎನಲು, ಹಾಗಾಗಲೆಂದು 'ಕರಸ್ಥಲದ ಲಿಂಗ'ದ ಮುಂದೆ ಕಿನ್ನರಯ್ಯ ನುಡಿಸಿ ಹನ್ನೊಂದು ಹಣ ಹಾಗವ ಪಡೆದು ಸುಖದಲ್ಲಿದ್ದರು" ಎಂದು, ಶ್ರೀ ಶರಣ ಲೀಲಾಮೃತದಲ್ಲಿ "ಕಿನ್ನರಿ ಬ್ರಹ್ಮನಂದು ಗುರುನಿರೂಪಣೆಯನಾಂತು ಭಕ್ತಿಯಲಿ ಇಷ್ಟಲಿಂಗದ ಪೂಜೆ ನಿಷ್ಠೆಯಿಂದಲಿ ಮಾಡೆ ಕೊಟ್ಟುದಾಲಿಂಗ ಹಾಗ........" ಎಂದು, ಶಿವಶರಣ ವಿಲಾಸದಲ್ಲಿ "ಗುರು'ಲಿಂಗ' ಜಂಗಮದ ಸೇವೆಯೊಳಗವನು ಪರಿಣಾಮದೊಳಗಿರ್ದನದ ಬಲ್ಲ ಶಿವನು" ಎಂದು, ಸಂಸ್ಕೃತ ಬಸವ ಪುರಾಣದಲ್ಲಿ "ಇಷ್ಟಲಿಂಗದಲ್ಲಿ ರಮಿಸುತ್ತಿದ್ದಂಥವನೇ" ಎಂದು, ಹಂತಿ ಹಾಡುಗಳಲ್ಲಿ "ಹೂಡೂರ ಹಳ್ಯಾಗೆ ಹೂಡಿದನು ಕಾಯಕವ ಮಾಡಿ ಜಂಗಮಕೆ ದಾಸೋಹ ಸಿರಿವಂತ ನೀಡಿ ಶಿವಭಕ್ತಿ ಶಿವಮತಕೆ"[31] ಎಂದು ಹೇಳಲಾಗಿದೆ.

ಮಡಿವಾಳ ಮಾಚಿದೇವರ ವಚನದಲ್ಲಿ ಬರುವ 'ಗುರು ಕೊಟ್ಟ ಇಷ್ಟಲಿಂಗದಲ್ಲಿ ನಿಷ್ಠೆಯ ಗಟ್ಟಿಗೊಳಿಸಿ' ಎಂಬ ಸಾಲು ಕಿನ್ನರಿಬ್ರಹ್ಮಯ್ಯನಿಗೆ ಆತನ ಗುರುವು ಇಷ್ಟಲಿಂಗವನ್ನು ಕರುಣಿಸಿದ್ದ ವಿಚಾರವನ್ನು ತಿಳಿಸುತ್ತದೆ. ಇದು ಆತ ಇಷ್ಟಲಿಂಗಧಾರಿಯಾಗಿದ್ದ ಎಂದು ತಿಳಿಸುವ ಅಧಿಕೃತ ದಾಖಲೆಯಾಗಿದೆ. ಜೊತೆಗೆ, ಅತ್ಯಂತ ಸ್ಪಷ್ಟವಾಗಿ ಈತನಿಗೆ ಗುರುವು ಇಷ್ಟಲಿಂಗವನ್ನು ಕೊಟ್ಟಿದ್ದಾನೆ (ಕರುಣಿಸು) ಎಂದು ಹೇಳಿರುವುದರಿಂದ ಆತ (ಕಿನ್ನರಯ್ಯ) ಇಷ್ಟಲಿಂಗಧಾರಿ ಶಿವಶರಣನಾಗಿದ್ದ ಎಂದು ಹೇಳಬೇಕಾಗುತ್ತದೆ. ಶಾಂತವೀರೇಶ್ವರಾ ಎಂಬ ಅಂಕಿತದಿಂದ ಕೂಡಿ ರಚಿತವಾದ ವಚನವೊಂದರಲ್ಲಿ "ಸೊಡ್ಡಳ ಬಾಚಯ್ಯ ಕಿನ್ನರಿ ಬೊಮ್ಮಯ್ಯ ಏಕಾಂತ ರಾಮಯ್ಯಂಗಲ್ಲದೆ ಲಿಂಗ ನಿಷ್ಠೆಯು ದೊರೆಯದು" ಎಂದು ಹೇಳಲಾಗಿದೆ. ಪ್ರಸ್ತುತ ವಚನದ ಸಾಲು ಕೂಡ ಕಿನ್ನರಿ ಬ್ರಹ್ಮಯ್ಯ ಒಬ್ಬ ಇಷ್ಟಲಿಂಗಧಾರಿಯಾಗಿದ್ದ, ಜೊತೆಗೆ ಇಷ್ಟಲಿಂಗದಲ್ಲಿ ನಿಷ್ಠೆ ಹೊಂದಿದ್ದ ಶರಣನಾಗಿದ್ದ ಎಂಬ ಅಂಶವನ್ನು ಎತ್ತಿ ಹಿಡಿಯುತ್ತದೆ. ಈ ವಚನ ಕೂಡ ಕಿನ್ನರಿ ಬ್ರಹ್ಮಯ್ಯ ಇಷ್ಟಲಿಂಗಧಾರಿಯಾಗಿದ್ದ ಎಂದು ತಿಳಿಸುವ ಅಧಿಕೃತ ದಾಖಲೆಯಾಗಿದೆ.

ಕಾವ್ಯ–ಪುರಾಣಗಳಲ್ಲಿ ಬಂದಿರುವ ಉಲ್ಲೇಖಗಳನ್ನು ಅವಲೋಕಿಸುವುದಾದರೆ, ಬಸವರಾಜದೇವರ ರಗಳೆಯಲ್ಲಿ ಹರಿಹರನೂ ಸಹ ಪೂಡೂರಿನಿಂದ ಬಸವಣ್ಣನನ್ನು ಅರಸಿಬಂದ ಕಿನ್ನರಿಬ್ರಹ್ಮಯ್ಯನನ್ನು ಬರಮಾಡಿಕೊಂಡು ಆತನಿಗೆ ಲಿಂಗಾರ್ಚನೆಯ ವ್ಯವಸ್ಥೆ ಮಾಡಿಕೊಡಲಾಯಿತು ಎಂಬ (ಕಿನ್ನರಯ್ಯಂಗೆ ಲಿಂಗಾರ್ಚನೆಗೆ ನೀಡುತಂ) ವಿಚಾರವನ್ನು ತಿಳಿಸುತ್ತಾನೆ. ಅಂದರೆ, ಆತ ಸಹ ಕಿನ್ನರಿಬ್ರಹ್ಮಯ್ಯ ಒಬ್ಬ ಲಿಂಗಧಾರಿ ಶಿವಶರಣನಾಗಿದ್ದ ಎಂದೇ ಅಭಿಪ್ರಾಯ ತಳೆದಿರುವುದನ್ನು ಗುರುತಿಸಬಹುದು.

ಬಸವಪುರಾಣದ ಸಾಲನ್ನು ನೋಡುವುದಾದರೆ, ಕಲ್ಯಾಣವನ್ನರಸಿ ಬಂದ ಕಿನ್ನರಿಬ್ರಹ್ಮಯ್ಯನನ್ನು ಮೊದಲು ಕಂಡವನಾದ ಬಸವಣ್ಣನು ಆತನನ್ನು ಬರಮಾಡಿಕೊಂಡು

ಮಾಡಿದ ಉಪಚಾರವನ್ನು ತಿಳಿಸುತ್ತದೆ. ಇಲ್ಲಿ ಕಿನ್ನರಿಬ್ರಹ್ಮಯ್ಯನಿಗೆ ಸತ್ಕ್ರಿಯಾದಿಗಳಿಗೆ ವ್ಯವಸ್ಥೆ ಮಾಡಿಕೊಡಲಾಯಿತು ಎಂದು ಹೇಳಲಾಗಿದೆ. ಸತ್ಕ್ರಿಯೆ ಎಂಬುದು ಬಹುಶಃ ಕಿನ್ನರಿಬ್ರಹ್ಮಯ್ಯನಿಗೆ ಬಸವಣ್ಣನು ಲಿಂಗಪೂಜಾದಿ ಕ್ರಿಯೆಗಳಿಗೆ ಮಾಡಿಕೊಟ್ಟ ವ್ಯವಸ್ಥೆಯನ್ನೇ ಸೂಚಿಸುತ್ತದೆ ಎಂದು ಹೇಳಬಹುದು. ಜೊತೆಗೆ, ಮುಂದೆ ಬರುವ ವರ್ಣನೆಯು ಸಹ ಕಿನ್ನರಿಬ್ರಹ್ಮಯ್ಯ ಒಬ್ಬ ಲಿಂಗವಂತ ಶಿವಶರಣನಾಗಿಯೇ ಕಲ್ಯಾಣಕ್ಕೆ ಬಂದ ಎಂಬ ಅಂಶವನ್ನೇ ಎತ್ತಿ ಹಿಡಿಯುತ್ತವೆ ಎನ್ನಲಡ್ಡಿಯಿಲ್ಲ. ಅದರೊಂದಿಗೆ 'ಲೋಕೈಕಪೂಜ್ಯಂ ಶರಣಮಾರ್ಗದಲಿ' ಎಂದೂ ಭೀಮಕವಿ ವರ್ಣಿಸಿರುವುದನ್ನು ಕಾಣಬಹುದು. ಇದೂ ಸಹ ಈ ಮೇಲಿನ ಊಹೆಯನ್ನು ಎತ್ತಿಹಿಡಿಯುತ್ತದೆ. ಬಸವರಾಜ ವಿಜಯಂ ಕಾವ್ಯದ ಸಾಲುಗಳನ್ನು ನೋಡುವುದಾದರೆ, ಕಿನ್ನರಿಬ್ರಹ್ಮಯ್ಯ ತನ್ನ ಜನ್ಮಸ್ಥಳವಾದ ಪೂಡೂರಿನಲ್ಲಿಯೇ ಲಿಂಗದೀಕ್ಷೆಯನ್ನು ಹೊಂದಿ, ಶಿವಭಕ್ತ (ಶರಣ)ನಾಗಿ ಬದುಕುತ್ತಿದ್ದ ಎಂಬ ಅಂಶವನ್ನು ಮನದಟ್ಟು ಮಾಡುತ್ತದೆ. ಇಲ್ಲಿ ಕವಿ ಷಡಕ್ಷರದೇವನು 'ಸಮಸ್ತ ಅಂಗಗಳಲ್ಲಿಯೂ ಇಂದ್ರಿಯಗಳಲ್ಲಿಯೂ ಲಿಂಗದ ಅರಿವಿನಿಂದ ಕೂಡಿದವನಾಗಿ ಕಿನ್ನರಿಬ್ರಹ್ಮಯ್ಯ ಇದ್ದನು' ಎಂದು ಹೇಳುವ ವರ್ಣನಪರ ನುಡಿಗಳು ಕಿನ್ನರಿಬ್ರಹ್ಮಯ್ಯ ಲಿಂಗಧಾರಿ ಶಿವಶರಣನಾಗಿದ್ದ ಎಂದೇ ಅರ್ಥ ನೀಡುತ್ತವೆ. ಆತ ಶರೀರದ ಮೇಲೆ ಇಷ್ಟಲಿಂಗವನ್ನು ಹೊಂದಿ ಸಾಧನಾಪಥದಲ್ಲಿ ಅತ್ಯುಚ್ಚ ನಿಲುವಿಗೆ ಏರಿದ್ದ ಎಂದರ್ಥ ವಾಗುತ್ತದೆ. ಜೊತೆಗೆ, ವೀರಶೈವಾಚರಣೆಯಿಂದ ಕೂಡಿದವನಾಗಿ ಕಿನ್ನರಿಬ್ರಹ್ಮಯ್ಯ ಶೋಭಿಸುತ್ತಿದ್ದನು ಎಂದು ಹೇಳುವ ಕವಿಯ ನುಡಿಯೂ ಸಹ ಆತ ಲಿಂಗಧಾರಿ ಶಿವಶರಣನಾಗಿದ್ದ ಎಂಬ ಅಂಶವನ್ನೇ ಎತ್ತಿಹಿಡಿಯುತ್ತವೆ. ಏಕೆಂದರೆ ವೀರಶೈವನಾದವನು ಇಷ್ಟಲಿಂಗವನ್ನು ಧರಿಸಲೇಬೇಕು. ಹೀಗಾಗಿ ಕವಿಯು ಹೇಳುವ "ವೀರಶೈವಾಚರಣೆ" ಎಂಬುದು ಕಿನ್ನರಿಬ್ರಹ್ಮಯ್ಯ ತನ್ನಲ್ಲಿ ಇಷ್ಟಲಿಂಗವನ್ನು ಹೊಂದಿ, ನಿತ್ಯವೂ ಅರ್ಚಿಸಿ ಆರಾಧಿಸುತ್ತಿದ್ದ ಎಂಬ ಅರ್ಥವನ್ನು ನೀಡುತ್ತದೆ ಎನ್ನಬಹುದು. ಒಟ್ಟಾರೆ ಪ್ರಸ್ತುತ ಕಾವ್ಯ ಸಹ ಆತ ಲಿಂಗಧಾರಿ ಶಿವಶರಣನಾಗಿದ್ದ ಎಂದೇ ತಿಳಿಸುತ್ತದೆ ಎನ್ನಲು ಅಡ್ಡಿಯಿಲ್ಲ. ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರದಲ್ಲಿ ಶಾಂತಲಿಂಗದೇಶಿಕನು ಕಿನ್ನರಿಬ್ರಹ್ಮಯ್ಯನ ಭಕ್ತಿಯ ವಿಚಾರವಾಗಿ ಹೇಳುತ್ತ, ಕಿನ್ನರ ವೀಣೆಯನ್ನು ರಚಿಸಿ ಅದನ್ನು ತೆಗೆದುಕೊಂಡು ಲಿಂಗದೆದುರು ಹಾಡಿ ಕೇಳಿಸುತ್ತಿದ್ದ ಎಂದೂ, ಬಸವಣ್ಣನೊಡನೆ ಮುನಿದುಹೋಗಿ (ತ್ರಿಪುರಾಂತಕ ಲಿಂಗದೆಡೆಗೆ?) ಭಕ್ತಿ ಮಾಡಿದ ವಿಚಾರ ತಿಳಿದುಬರುತ್ತದೆ. ಈ ಎರಡೂ ವಿಚಾರಗಳು ಕಿನ್ನರಯ್ಯ ಇಷ್ಟಲಿಂಗ ಮತ್ತು ಸ್ಥಾವರಲಿಂಗ (ತ್ರಿಪುರಾಂತಕ ಲಿಂಗ) ಎರಡನ್ನೂ ಅರ್ಚಿಸಿ ಆರಾಧಿಸುತ್ತಿದ್ದ ಎಂಬಂತೆ ಮಾಹಿತಿ ನೀಡುತ್ತವೆ. "ಮನೆಗೆ ಬಂದು ಕಿನ್ನರ ವೀಣೆಯ ನುಡಿಸುತಂ ತಮ್ಮ ಲಿಂಗಕ್ಕೆ ಕೇಳಿಸಲಾಗ" ಎಂಬ ಸಾಲು ಮತ್ತು "ತ್ರಿಪುರಾಂತಕನೆಂಬ ಲಿಂಗವು ಲಾಲಿಸಿ ತಲೆದೂಗಿ ಸಾಕು ಸಾಕೆಂದು ನುಡಿಯಲು ಆಗಂ ಕಿನ್ನರಯ್ಯನು ಲಿಂಗವನರ್ಚಿಸಿ ಸುಖದಲ್ಲಿರ್ದರು" ಎಂಬ ಸಾಲು ಈ ಎರಡೂ

ಸಾಲುಗಳು ಆತ ಇಷ್ಟಲಿಂಗಧಾರಿಯಾಗಿದ್ದ ಎಂಬ ಅರ್ಥವನ್ನೇ ನೀಡುತ್ತವೆ. "ಮನೆಗೆ ಬಂದು ತಮ್ಮ ಲಿಂಗಕ್ಕೆ" ಎಂಬ ಮಾತು ಇದನ್ನು ಮತ್ತಷ್ಟು ಸ್ಪಷ್ಟಪಡಿಸುತ್ತದೆ. ಬಸವೇಶ್ವರನ ಕಾವ್ಯದಲ್ಲಿ ಕವಿ ಗರಣಿಯ ಬಸವಲಿಂಗದೇವನು 'ವರಲಿಂಗ ನಿಷ್ಠನು' ಎಂದು ತಿಳಿಸಿದ್ದಾನೆ. ಇಲ್ಲಿ ವರಲಿಂಗ ಎಂಬುದು ಅನುಗ್ರಹದಿಂದ ಪಡೆದ ಲಿಂಗ ಎಂದು ಅರ್ಥವಾಗುತ್ತದೆ. ಹೀಗಾಗಿ, ಕಿನ್ನರಯ್ಯ ಗುರುವಿನಿಂದ ಅನುಗ್ರಹಿಸಲ್ಪಟ್ಟ ಲಿಂಗದಲ್ಲಿ ನಿಷ್ಠನಾಗಿ ಬದುಕುತ್ತಿದ್ದನು ಎಂದೇ ಕವಿ ವರ್ಣಿಸಿದ್ದಾನೆ ಎನ್ನಬಹುದು. ಆದ್ದರಿಂದ, ಬಸವೇಶ್ವರನ ಕಾವ್ಯವೂ ಸಹ ಕಿನ್ನರಿಬ್ರಹ್ಮಯ್ಯ ಲಿಂಗದ ಪೂಜಕನಾಗಿದ್ದ, ಇಷ್ಟಲಿಂಗಧಾರಿಯಾಗಿದ್ದ ಎಂದೇ ಹೇಳುತ್ತದೆ ಎನ್ನಲಡ್ಡಿಯಿಲ್ಲ. ಬಸವೇಶ್ವರ ಷಟ್‌ಸ್ಥಲ ವಚನದ ಕಥಾಸಾರವನ್ನು ಅವಲೋಕಿಸುವುದಾದರೆ, 'ಕರಸ್ಥಲದ ಲಿಂಗದ ಮುಂದೆ ಕಿನ್ನರಯ್ಯ ನುಡಿಸಿ ಹನ್ನೊಂದು ಹಣ ಹಾಗವ ಪಡೆದು' ಎಂದು ಹೇಳಲಾಗಿದೆ. ಈ ಸಾಲು ಸಹ ಕಿನ್ನರಿಬ್ರಹ್ಮಯ್ಯ ಇಷ್ಟಲಿಂಗಧಾರಿಯಾಗಿದ್ದ ಎಂಬುದನ್ನೇ ಎತ್ತಿಹಿಡಿಯುತ್ತದೆ ಎನ್ನಬಹುದು. ಇಲ್ಲಿ 'ಕರಸ್ಥಲದ ಲಿಂಗ' ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಅದು ಅಂಗೈ ಮಧ್ಯೆ ಪ್ರತಿಷ್ಠಾಪಿಸಿ ಪೂಜಿಸುವ ಇಷ್ಟಲಿಂಗ ಎಂದೇ ಅರ್ಥವಾಗುತ್ತದೆ. ಆದ್ದರಿಂದ, ಅಜ್ಞಾತ ಕವಿಯ ಅಭಿಪ್ರಾಯವೂ ಕಿನ್ನರಯ್ಯ ಲಿಂಗವಂತ ಶಿವಶರಣನಾಗಿದ್ದ ಎಂದೇ ಹೇಳುತ್ತದೆ. ಶ್ರೀ ಶರಣ ಲೀಲಾಮೃತದಲ್ಲಿ 'ಇಷ್ಠಲಿಂಗದ ಪೂಜೆ ನಿಷ್ಠೆಯಿಂದಲಿ ಮಾಡೆ ಕೊಟ್ಟುದಾ ಲಿಂಗ ಹಾಗ' ಎಂದು ವರ್ಣಿಸಲ್ಪಟ್ಟಿದ್ದು, ಇಲ್ಲಿ ಸ್ಪಷ್ಟವಾಗಿ 'ಇಷ್ಠಲಿಂಗ' ಎಂದು ಹೇಳಲಾಗಿದ್ದು, ಕಿನ್ನರಿಬ್ರಹ್ಮಯ್ಯ ಆ ಇಷ್ಠಲಿಂಗವನ್ನೇ ನಿಷ್ಠೆಯಿಂದ ಪೂಜಿಸುತ್ತಿದ್ದ ಎಂದು ತಿಳಿಸಿದಂತಾಗುತ್ತದೆ. ಶಿವಶರಣ ವಿಲಾಸ ಕೃತಿಯು ಕಿನ್ನರಿಬ್ರಹ್ಮಯ್ಯ ಗುರುಲಿಂಗಜಂಗಮ ಸೇವೆಯಲ್ಲಿದ್ದ ಎಂದು ತಿಳಿಸುತ್ತದೆ. ಈ ವರ್ಣನೆ ಸಹ ಸ್ಪಷ್ಟವಾಗಿ ಆತ ಲಿಂಗಧಾರಿಯಾಗಿದ್ದ ಎಂದು ತಿಳಿಸುತ್ತದೆ.

ಸಂಸ್ಕೃತ ಬಸವ ಪುರಾಣದಲ್ಲಿ ಕವಿ ಶಂಕರಾರಾಧ್ಯನು ಕಿನ್ನರಿಬ್ರಹ್ಮಯ್ಯನು ಲಿಂಗದೀಕ್ಷೆ ಹೊಂದಿ, ಲಿಂಗಾರ್ಚನೆ ಮಾಡುತ್ತ, ಲಿಂಗವಂತ ಶಿವಭಕ್ತನಾಗಿ ಬದುಕುತ್ತಿದ್ದ ಎಂಬುದಾಗಿ ಸ್ವಲ್ಪ ನೇರವಾಗಿಯೇ ಹೇಳಿದ್ದಾನೆ. ಅರ್ಥಾತ್, ಆತನನ್ನು ಕುರಿತು ಕವಿ ಮಾಡುವ ವರ್ಣನೆ ಆತ ಶಿವಭಕ್ತನಾಗಿದ್ದುದರ ಮಾಹಿತಿ ಒದಗಿಸುತ್ತದೆ. ಕಿನ್ನರಿಬ್ರಹ್ಮಯ್ಯನನ್ನು ಕುರಿತು ವರ್ಣಿಸುತ್ತ ಆತನು ತಪೋನಿಧಿಯು, ಶ್ರೇಷ್ಠ ಯೋಗಿಗಳಿಂದ ಪೂಜಿಸಲ್ಪಡುವವನೂ, ತನ್ನ ಶರೀರ ಶಿವನ ಶರೀರವನ್ನಾಗಿ ಮಾಡಿಕೊಂಡವನು (ಅಂಗ ಶರೀರವಳಿದು ಲಿಂಗ ಶರೀರವಾಗಿ ಮಾರ್ಪಟ್ಟಿರುವ ಸ್ಥಿತಿ/ಹಂತವೆಂದರ್ಥ), ವೀರಶೈವಾಚಾರ ಮಾರ್ಗದಲ್ಲಿ ಆದರ ಉಳ್ಳವನು, ನಿಸ್ಸೀಮ ಭಕ್ತಿಯುಳ್ಳವನು ಆಗಿದ್ದನು ಎಂದು ಕಿನ್ನರಿಬ್ರಹ್ಮಯ್ಯನ ವರ್ಣನೆಯನ್ನು ಮಾಡಿರುವುದನ್ನು ಗಮನಿಸುವುದಾದರೆ, ಆತ ಒಬ್ಬ ಲಿಂಗವಂತ ಶಿವಭಕ್ತನಾಗಿ ನಿತ್ಯವೂ ಅರ್ಚನೆ ಆರಾಧನೆಗಳನ್ನು ಮಾಡುತ್ತ, ಜಂಗಮ ದಾನದಾಸೋಹಾದಿಗಳನ್ನು ಮಾಡಿಕೊಂಡು ಪೂಡೂರಿನಲ್ಲಿ ಬದುಕು

ನಡೆಸಿದ್ದನು ಎಂಬಂತೆ ಕವಿ ಅಭಿಪ್ರಾಯಪಟ್ಟಿರುವ ಹಾಗೆ ಊಹಿಸಬಹುದಾಗಿದೆ. 'ವೀರಶೈವಾಚಾರ ಮಾರ್ಗದಲ್ಲಿ ಆದರ ಉಳ್ಳವನು' ಎಂಬ ವರ್ಣನೆಯಂತೂ ಕಿನ್ನರಿಬ್ರಹ್ಮಯ್ಯ ವೀರಶೈವ ಶಿವಭಕ್ತನಾಗಿದ್ದ ಎಂದೇ ಹೇಳುತ್ತಿದೆ ಎಂದು ತಿಳಿದುಬರುತ್ತದೆ. ಹೀಗಾಗಿ, ಪ್ರಸ್ತುತ ಕಾವ್ಯ ಸಹ ಕಿನ್ನರಿಬ್ರಹ್ಮಯ್ಯನು ಇಷ್ಟಲಿಂಗಧಾರಿಯಾಗಿದ್ದ ಎಂಬುದನ್ನು ಎತ್ತಿಹಿಡಿಯುತ್ತದೆ. ಹಂತಿ ಹಾಡುಗಳು ಸಹ ಆತನ ಭಕ್ತಜೀವನವನ್ನು ಎತ್ತಿ ಹಿಡಿಯುತ್ತವೆ. ಶಿವಭಕ್ತಿ, ಜಂಗಮಾರ್ಚನೆ, ದಾಸೋಹದಂತಹ ವಿಚಾರಗಳನ್ನು ಅವಲೋಕಿಸುವುದಾದರೆ, ಬಹುಶಃ ಆತ ಲಿಂಗವಂತ ಶಿವಭಕ್ತನಾಗಿದ್ದ ಹಾಗೆ ತ್ರಿಪದಿಕಾರರೂ ಅಭಿಪ್ರಾಯಪಟ್ಟಿರುವಂತೆ ಕಂಡುಬರುತ್ತದೆ.

ಮುಖ್ಯವಾದ ಸಂಗತಿಯೆಂದರೆ, ಕಿನ್ನರಿಬ್ರಹ್ಮಯ್ಯ ಇಷ್ಟಲಿಂಗದ ಜೊತೆಜೊತೆಗೆ ಸ್ಥಾವರದೈವ (ಲಿಂಗ)ದ ಆರಾಧಕನಾಗಿದ್ದ ಹಾಗೆಯೂ ವಚನಸಾಹಿತ್ಯ ಮತ್ತು ಕಾವ್ಯ–ಪುರಾಣಗಳಲ್ಲಿ ಉಲ್ಲೇಖಗಳು ಕಂಡುಬರುತ್ತವೆ. ಮಡಿವಾಳ ಮಾಚಿದೇವರ ವಚನವೊಂದು ಇದನ್ನು ದೃಢಪಡಿಸುತ್ತದೆ. "ಕಿನ್ನರಯ್ಯಗಳ ಸ್ಥಾವರ ದೈವದ ಸೇವೆ, ಯಾಚಕತ್ವವ ಬಿಡಿಸಿ" ಎಂಬ ವಚನವೊಂದರ ಸಾಲು ಕಿನ್ನರಿಬ್ರಹ್ಮಯ್ಯ ಮಾಡುತ್ತಿದ್ದ ಸ್ಥಾವರಲಿಂಗದ ಸೇವೆ (ಪೂಜೆ)ಯನ್ನು ಬಿಡಿಸಲಾಯಿತು ಎಂದು ತಿಳಿಸುತ್ತದೆ. ಇದು ಆತ ಈ ಮೊದಲು ಸ್ಥಾವರಲಿಂಗ (ತ್ರಿಪುರಾಂತಕಲಿಂಗ)ದ ಆರಾಧಕನಾಗಿದ್ದ ಎಂಬುದನ್ನು ಮನವರಿಕೆ ಮಾಡಿಕೊಡುತ್ತದೆ.

ಸಿಂಗಿರಾಜ ಪುರಾಣ ಮತ್ತು ಬಸವೇಶ್ವರ ಷಟ್‌ಸ್ಥಲ ವಚನದ ಕಥಾಸಾರ ಕೃತಿಗಳು ಕಿನ್ನರಿಬ್ರಹ್ಮಯ್ಯ ಸ್ಥಾವರಲಿಂಗದ ಆರಾಧಕನೂ ಆಗಿದ್ದ ಎಂದು ಮಾಹಿತಿಯನ್ನೊದಗಿಸುತ್ತವೆ. ಸಿಂಗಿರಾಜ ಪುರಾಣದಲ್ಲಿ "ಹೊಂಗಾಯಕವ ಕೈಗೆ ಮಱೆಯೊಡ್ಡಿ ತ್ರಿಪುರಾಂತಕಂಗೆ ಕಂದೆಱವಾಗಿ ಚರಲಿಂಗ ಭಕ್ತಿ ಮನಸಿಂಗೆ ತನುವಾಗಿಯಾ ಪುರದರಸುಗೆಲಸಕರುಹತೆವಡೆದಿರಲ್ಕೆ...." ಎಂದು ಹೇಳಲಾಗಿರುವ ಸಾಲು ಕಿನ್ನರಿ ಬ್ರಹ್ಮಯ್ಯ ತ್ರಿಪುರಾಂತಕಲಿಂಗದ ಆರಾಧಕನಾಗಿರುವುದರ ಜೊತೆಜೊತೆಗೆ ಇಷ್ಟಲಿಂಗ (ಚರಲಿಂಗ)ದ ಆರಾಧಕನೂ ಆಗಿದ್ದ ಎಂದು ತಿಳಿಸುತ್ತದೆ.

ಬಸವೇಶ್ವರ ಷಟ್‌ಸ್ಥಲ ವಚನದ ಕಥಾಸಾರ ಕೃತಿಯಲ್ಲಿ ಕಿನ್ನರಿಬ್ರಹ್ಮಯ್ಯನಿಗೆ ಸಂಬಂಧಿಸಿದಂತೆ ಕಥೆಯೊಂದು ಬಂದಿದ್ದು, ಮೋಳಿಗೆ ಮಾರಯ್ಯನ ಮಡದಿ ಕಿನ್ನರಿಬ್ರಹ್ಮಯ್ಯ ಇಷ್ಟಲಿಂಗವನ್ನು ಬಿಟ್ಟು ಸ್ಥಾವರಕ್ಕೆ ಹೋಗುವವನಾದ ಕಾರಣ ಅವರ ವಸ್ತ್ರ ನಮಗೆ ಬೇಡವೆಂದು ಮರಳಿ ಕಳುಹಿಸಿದ ವಿಚಾರವನ್ನು ತಿಳಿಸುತ್ತದೆ. ಈ ಕಥೆ ಸಹ ಕಿನ್ನರಿಬ್ರಹ್ಮಯ್ಯ ಸ್ಥಾವರದೈವದ ಆರಾಧಕನಾಗಿದ್ದುದನ್ನು ತಿಳಿಸುತ್ತದೆ.

ಕಿನ್ನರಿಬ್ರಹ್ಮಯ್ಯ ಕೆಲವು ಶರಣರಂತೆ ಕಲ್ಯಾಣಕ್ಕೆ ಬಂದನಂತರ ಲಿಂಗದೀಕ್ಷೆಯನ್ನು ಪಡೆದ ಹಾಗೆ ನಮಗೆ ಎಲ್ಲಿಯೂ ಉಲ್ಲೇಖಗಳು ಕಂಡುಬರುವುದಿಲ್ಲ. ಮಡಿವಾಳ

# ಸಾಂಸ್ಕೃತಿಕ ನಾಯಕರಾಗಿ ಬಸವಣ್ಣನವರು

**ಸಂಗಮೇಶ ಎನ್. ಜವಾದಿ**

**ಸಾ**ಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಮಾನತೆ, ಕಾಯಕ, ದಾಸೋಹ, ದಯೆ ಸೇರಿದಂತೆ ಮೊದಲಾದ ವೈಚಾರಿಕತೆಯ ಚಿಂತನೆಗಳನ್ನು ಅಳವಡಿಸಿಕೊಂಡು ಅದರಂತೆ ಬಾಳಿದವರು, ಸಮರ್ಪಿಸಿಕೊಂಡವರು ಬಸವಣ್ಣನವರು. ಸಮಾನತೆಯ ಉನ್ನತಿಗಾಗಿ, ಶೈಕ್ಷಣಿಕ ಅಭಿವೃದ್ಧಿಗಾಗಿ ಟೊಂಕ ಕಟ್ಟಿಕೊಂಡು ಕೆಲಸ ಮಾಡಿ, ಸರ್ವರಿಗೂ ಸಮಬಾಳು ಸಮಪಾಲು ಎನ್ನುವುದನ್ನು ಜಾರಿಗೆ ತಂದು ಬಸವಣ್ಣನವರು ಈ ನಾಡಿನ ಅಭ್ಯುದಯಕ್ಕಾಗಿ ಹಗಲಿರುಳು ದುಡಿದಿದ್ದಾರೆ.

ಇಂಥ ಸಾವಿರಾರು ಸಾಮಾಜಿಕ ಕೆಲಸಗಳನ್ನು ಮಾಡಿ ಈ ನಾಡನ್ನು ಪವಿತ್ರ ಪುಣ್ಯ ನಾಡಾಗಿ ಬಸವಣ್ಣನವರು ಮಾಡಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಅಮರವಾಗಿದೆ. ಇಂತಹ ಅದೆಷ್ಟು ಕೊಡುಗೆಗಳನ್ನು ನೀಡಿದ ವಿಶ್ವದ ಮೊಟ್ಟಮೊದಲ ಪ್ರಜಾಪ್ರಭುತ್ವವಾದಿ ಅಣ್ಣ ಬಸವಣ್ಣ ಎಂದರೆ ತಪ್ಪಾಗಲಾರದು. ಇನ್ನು ಈ ಕಲ್ಪನೆಯನ್ನು ಕೆಳ ಸಮುದಾಯದಲ್ಲಿ ಮೊದಲು ಆಚರಣೆಗೆ ತಂದು ಸಹಕಾರಗೊಳಿಸಿದ ಕೀರ್ತಿ ಮೇಧಾವಿ ಅಣ್ಣ ಬಸವಣ್ಣನವರಿಗೆ ಸಲ್ಲುತ್ತದೆ. ಇಂದಿನ ಸಮಾಜ ಮತ್ತು ಸರ್ಕಾರ ಇದನ್ನು ಮರೆಯುವಂತಿಲ್ಲ. ಹಾಗಾಗಿ 12ನೇ ಶತಮಾನದ ಸಂದರ್ಭದ ಹಲವು ಸಂಕೋಲೆಗಳ ಮಧ್ಯೆ, ವೈಚಾರಿಕ ಕ್ರಾಂತಿಯ ಬೀಜ ಬಿತ್ತಿ, ಆಚಾರ ಕ್ರಾಂತಿಗೆ ಮುನ್ನುಡಿ ಬರೆದು, ವೈಜ್ಞಾನಿಕ ಕ್ರಾಂತಿಗೆ ಕಾರಣೀಭೂತರಾದವರು ಬಸವಣ್ಣನವರು. ಈ ಹಿನ್ನೆಲೆಯಲ್ಲಿ ಬಸವಣ್ಣನವರ ವಿಚಾರಗಳ ಮೌಲ್ಯಾಧಾರಿತ ನೀತಿಗಳ ಸಿದ್ಧಾಂತಗಳನ್ನು ಇಂದು ನಾವೆಲ್ಲರೂ ಪಾಲಿಸಿಕೊಂಡು ಬರುವುದು ಬಹಳ ಅವಶ್ಯಕತೆ ಇದೆ. ಪ್ರಯುಕ್ತ ನಾವು ಸರ್ಕಾರಕ್ಕೆ ಈ ಲೇಖನದ ಮೂಲಕ ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕನೆಂದು ಘೋಷಿಸಬೇಕೆಂದು ಆಗ್ರಹಿಸುತ್ತಾ, ಕೆಲ ವಿಚಾರಗಳು ತಮ್ಮೆಲ್ಲರ ಮುಂದೆ ಪ್ರಸ್ತುತ ಪಡಿಸುತ್ತಿದ್ದೇವೆ.

ಸೇವೆಯೇ ಶ್ರೇಷ್ಠ ಜೀವನವೆಂದು ತಿಳಿದು ಬದುಕಿನುದ್ದಕ್ಕೂ, ಬದುಕನ್ನು ಸಮಾಜದ ಉನ್ನತಿಗಾಗಿ ಸಮರ್ಪಿಸಿದ ಸೇವಕ ಬಸವಣ್ಣನವರು. ಅಂದು ಸಮಾಜದಲ್ಲಿ ಬೇರೂರಿದ್ದ ಹತ್ತು ಹಲವು ಸಮಸ್ಯೆಗಳನ್ನು ಕಿತ್ತೆಸೆದು ಸಮಾನತೆಯ ಮಹಾನ್ ಕ್ರಾಂತಿ ಮಾಡಿದ ಮೊಟ್ಟಮೊದಲ ಪರಿವರ್ತಕ ಅಣ್ಣ ಬಸವಣ್ಣ. ನೊಂದು ಬೆಂದವರ ಅನಾಥರ ಸೇವೆಯನ್ನು ಮಾಡಿ ಅಣ್ಣ ಜೀವನ ತ್ಯಾಗ ಮಾಡಿರುವುದು ನಾವೆಲ್ಲರೂ ಕಾಣುತ್ತೇವೆ. ಹೀಗೆ

ನುಡಿದಂತೆ ನಡೆಯುವ ಮೂಲಕ ಜಗತ್ತಿನಲ್ಲಿ ಇಲ್ಲಿಯವರೆಗೆ ಎಲ್ಲೂ ನಡೆಯದ ಸ್ವಾಭಿಮಾನದ, ನೈಜತೆಯ – ಸತ್ಯ ಪ್ರತಿಪಾದಿಸುವ ವೈಜ್ಞಾನಿಕ – ವೈಚಾರಿಕ ಕ್ರಾಂತಿ ಈ ನಾಡಿನಲ್ಲಿ ನಡೆದುಹೋಗಿದೆ. ಈ ಕ್ರಾಂತಿಯ ಮೂಲಕ ಸಮಸ್ತ ಮನುಕುಲದ ಹಾಗೂ ಸಕಲ ಜೀವಾತ್ಮರಿಗು ಲೇಸನ್ನು ಬಯಸಿ, ಶ್ರೇಷ್ಠ ಮೌಲ್ಯಾಧಾರಿತ ವಿಚಾರಗಳು ಜಾರಿಗೆ ತಂದಿದ್ದು ಐತಿಹಾಸಿಕವಾಗಿದೆ. ಇದುವೇ ಪರಿವರ್ತೆಯ ಜಗದ ನಿಯಮ, ಇದುವೇ ಸೃಷ್ಟಿಯ ಸಂಕೇತ, ಇದುವೇ ಶರಣರು ಕೊಟ್ಟ ಸಾಮಾಜಿಕ, ಧಾರ್ಮಿಕ – ಆಧ್ಯಾತ್ಮಿಕ ಶುಚಿತ್ವದ ಬದಲಾವಣೆಯ ನೀತಿ. ಹೀಗೆ ಪ್ರಜಾಪ್ರಭುತ್ವ ಜಾರಿಗೆ ತಂದು ಅನುಭವ ಮಂಟಪ ಸ್ಥಾಪಿಸಿ, ವಚನ ಸಾಹಿತ್ಯ ರಚನೆ ಮತ್ತು ಅವುಗಳು ನಮ್ಮನ್ನೆಲ್ಲಾ ಪ್ರೇರೇಪಿಸುವಂತೆ ಕಾಣಿಕೆ ನೀಡಿದ ಕಾರಣಿಕ ಮಹಾಪುರುಷ. ಸಮಾನತೆ ಮತ್ತು ಸಹೋದರತೆಯ ಸಹಬಾಳ್ವೆ, ವೈಚಾರಿಕ ವೈಜ್ಞಾನಿಕ ತಳಹದಿ ಮೇಲೆ ವಿಚಾರ ಮಂಥನವನ್ನು ಮಾಡಿ ಶರಣ ಧರ್ಮವನ್ನು ವಿಶ್ವ ಧರ್ಮವಾಗಿಸಿದ ಅಪ್ಪ ಬಸವಣ್ಣನವರ ವಿಚಾರಗಳ ಕ್ರಾಂತಿಯ ಮುನ್ನುಡಿಯಿಂದ ಸಾಂಸ್ಕೃತಿಕ ಲೋಕ ಆ ದಿನಗಳಲ್ಲಿ ವೈಭವದಿಂದ ಬೆಳಗಿದೆ. ಜೊತೆಗೆ ಇಂದಿನ ದಿನಗಳಲ್ಲಿ ಸಹ ಬೆಳಗುತ್ತಿದೆ.

**ಬಸವಣ್ಣ ವಿಶ್ವ ಸಂವಿಧಾನ ಶಿಲ್ಪಿ :** ಅಂದು ಬಸವಣ್ಣನವರ ಆಗಮನಕ್ಕೆ ಕಾಯ್ದುಕೊಂಡಿದ್ದ ಸಮಯವದು. ದಲಿತರು, ಅಸ್ಪೃಶ್ಯರು ಮಹಿಳೆಯರಿಗೆ ಸೇರಿದಂತೆ ಕೆಳ ಸಮುದಾಯದವರನ್ನು ಅಂದಿನ ದಿನಗಳಲ್ಲಿ ಬಹಳ ಕೇವಲವಾಗಿ ನೋಡುತ್ತಿರುವ ಕಾಲವಾಗಿತ್ತು. ಇನ್ನು ಇವರೆಲ್ಲರಿಗೂ ದೇವರ ದರ್ಶನ ಪಡೆಯುವುದಂತು ದೂರದ ಮಾತಾಗಿತ್ತು. ಅಲ್ಲದೆ ದೇವರ ಪೂಜೆ ಮಾಡುವ ಮತ್ತು ದೇವಸ್ಥಾನಕ್ಕೆ ಪ್ರವೇಶ ಕೊಡದೇ ಇದ್ದ ಸಮಯದಲ್ಲಿ ಬಸವಣ್ಣನವರು ಇದನ್ನು ನೋಡಿ ಬಹಳ ಸಂಕಷ್ಟಪಟ್ಟರು, ಹೇಗಾದರೂ ಮಾಡಿ ಸರಿಪಡಿಸಿ, ಸರ್ವರಿಗೂ ದೇವರ ಧ್ಯಾನ, ದರ್ಶನ ಪಡೆಯು ವಂತಾಗಬೇಕೆಂದು ನಿಶ್ಚಯ ಮಾಡುವ ಮೂಲಕ ವೈಚಾರಿಕವಾಗಿ ಚಿಂತಿಸಿ, ವಿಶ್ವಾತ್ಮನ ಕುರುಹಾದ ಇಷ್ಟಲಿಂಗವನ್ನು ಅಂಗದ ಮೇಲೆ ಇಟ್ಟು ಪೂಜಿಸುವ ಶಿವಯೋಗವನ್ನು ಕರುಣಿಸಿ ಕೊಟ್ಟು, ಸರ್ವರಿಗೂ ಇಷ್ಟಲಿಂಗಧಾರಣೆ ಮಾಡಿದರು. ಹೀಗೆ ನೊಂದವರ ಪರವಾಗಿ ಹತ್ತು ಹಲವು ಕ್ರಾಂತಿಕಾರಿ ನಡೆಯ ಮೂಲಕ ಅವರುಗಳನ್ನು ಸಮಾಜದ ಮುಖ್ಯವಾಹಿನಿಗೆ ತಂದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ. ಇನ್ನು ಕೆಳ ಸಮುದಾಯಕ್ಕೆ ಅನುಭವ ಮಂಟಪದಲ್ಲಿ ಅವಕಾಶ ನೀಡಿದ ಪ್ರಯುಕ್ತ, ಅವರೆಲ್ಲರೂ ವಚನ ರಚನೆಗಳಲ್ಲಿ ತೊಡಗುವಂತೆ ಪ್ರೇರೇಪಿಸಿ, ವಚನಗಳನ್ನು ಬರೆಯುವಂತೆ ಮಾಡಿದವರು. ಜೊತೆಗೆ ಅಂತರ್ಜಾತಿ ವಿವಾಹವನ್ನು ಮಾಡಿ ಮಾನವರೆಲ್ಲರೂ ದೇವರ ಮಕ್ಕಳು ಎಂಬ ನಿಲುವು ಪ್ರತಿಪಾದಿಸಿ, ಸರ್ವರೂ ಸಮಾನರು ಎಂದು ಜಾಗತಿಕ ಪ್ರಪಂಚಕ್ಕೆ ಬಸವಣ್ಣನವರು ಸಾರಿದ್ದಾರೆ. ಹೀಗೆ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಈ

ಸಮಾಜದಲ್ಲಿ ನೆಮ್ಮದಿಯಿಂದ ಬಾಳುವಂತಾಗಬೇಕೆಂದು ಹೋರಾಟ ಮಾಡಿದ್ದು ಕಾಣುತ್ತೇವೆ. ಇನ್ನು ವಿಶ್ವಕ್ಕೆ ಪ್ರಜಾಪ್ರಭುತ್ವದ ಕಲ್ಪನೆ ನೀಡುವ ಮೂಲಕ ಸಮಾಜವನ್ನು ಸರಿ ದಾರಿಯಲ್ಲಿ ಕೊಂಡೊಯ್ಯುವ ಕೆಲಸ ಪ್ರಮಾಣಿಕವಾಗಿ ಮಾಡಿದ್ದಾರೆ. ಅಂದು ಬಸವಣ್ಣನವರು ಕೆಳಗೆ ಬಿದ್ದವರನ್ನು ಯಾವ ರೀತಿ ಅಪ್ಪಿಕೊಂಡರು ಎಂಬುದಕ್ಕೆ ನಮಗಿಲ್ಲಿ ಅವರ ವಚನಗಳೆ ಸಾಕ್ಷಿಪ್ರಜ್ಞೆಯಾಗಿವೆ. ಬಸವಣ್ಣನವರು ತಮ್ಮನ್ನು ತಾವು ಕನಿಷ್ಠ ಮಟ್ಟದಲ್ಲಿ ಇಳಿದುಕೊಂಡು ಬಹು ಎತ್ತರಕ್ಕೆ ಬೆಳೆದ ಮಹಾನ್ ಚೇತನರಾಗಿದ್ದರು, ಅದಕ್ಕೆ ಅವರ ವಚನವೇ ಸಾಕ್ಷಿ. ಅವರ ಸಂಪೂರ್ಣ ವ್ಯಕ್ತಿತ್ವವನ್ನೂ ನಿರೂಪಿಸುತ್ತದೆ.

> ಎನ್ನಿಂದ ಕಿರಿಯರಿಲ್ಲ, ಶಿವಭಕ್ತರಿಂದ ಹಿರಿಯರಿಲ್ಲ.
> ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ.
> ಕೂಡಲಸಂಗಮದೇವಾ, ಎನಗಿದೇ ದಿಬ್ಯ.

ಎಂಬುದಾಗಿ ಹೇಳುತ್ತಾರೆ. ಅಂದರೆ ಅಂದಿನ ಎಲ್ಲ ಜನಾಂಗವನ್ನು ಯಾವ ರೀತಿ ಒಲಿಸಿಕೊಂಡು ಅವರನ್ನು ಉನ್ನತಮಟ್ಟಕ್ಕೆ ಕರೆದುಕೊಂಡು ಹೋಗಬೇಕು ಎಂಬ ಸತ್ಯದ ದಾರಿ ಅಪ್ಪ ಬಸವಣ್ಣನವರಿಗೆ ಚೆನ್ನಾಗಿ ತಿಳಿದಿತ್ತು. ಹಾಗಾಗಿ ಅವರು ಪ್ರತಿಯೊಬ್ಬರನ್ನು ಸಂಪರ್ಕಿಸಿ ನಿಮ್ಮ ಮನೆಯ ಮಗನೆಂದು ಹೇಳಿಕೊಳ್ಳುತ್ತ ಅವರನ್ನು ಆಲಿಂಗಿಸಿಕೊಂಡು, ಯಾರು ಮಾಡದಂತ ಸಾಮಾಜಿಕ ಕ್ರಾಂತಿಯನ್ನು 12ನೇ ಶತಮಾನದಲ್ಲಿ ಮಾಡಿ ತೋರಿಸಿದ್ದಾರೆ. ಅವರ ಹಲವು ವಚನಗಳಲ್ಲಿ ಕಾಣಬಹುದಾಗಿದೆ.

> ಚೆನ್ನಯ್ಯನ ಮನೆಯ ದಾಸನ ಮಗನು,
> ಕಕ್ಕಯ್ಯನ ಮನೆಯ ದಾಸಿಯ ಮಗಳು,
> ಇವರಿಬ್ಬರು ಹೊಲದಲು ಹೋಗಿ, ಸಂಗವ ಮಾಡಿದರು.
> ಇವರಿಬ್ಬರಿಗೆ ಹುಟ್ಟಿದ ಮಗ ನಾನು,
> ಕೂಡಲಸಂಗಮದೇವ ಸಾಕ್ಷಿಯಾಗಿ.

ಕೂಡಲಸಂಗಮದೇವನ ಸಾಕ್ಷಿಯಾಗಿ ಎನ್ನಬೇಕಾದರೆ ಬಸವಣ್ಣನವರಿಗೆ ಅದೆಂಥ ತ್ಯಾಗದ ಮನೋಭಾವ, ನಾನು ಸಣ್ಣವ, ನಾನು ಅತ್ಯಂತ ಕೆಳ ಸಮಾಜದವ, ನಾನು ದಾಸ – ದಾಸಿಯ ಮಗ ಎಂದು ಹೇಳುವ ಈ ವಚನ ಅವರ ಎತ್ತರದ ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತದೆ ಅಲ್ಲವೇ. ಇನ್ನು ನಾನು ಕೆಳಸ್ತರದ ಜನಾಂಗದಲ್ಲಿ ಹುಟ್ಟಿದ ಮಗ ಎಂದು ಗೌರವದಿಂದ ಹೇಳುವ ಅವರ ಮಾತು ನಿಜಕ್ಕೂ ದೊಡ್ಡದು, ಮಾನವೀಯ ನಡೆಗೆ ಇದು ಸಾಕ್ಷಿಯಾಗಿದೆ. ಇದೇ ತೆರನಾಗಿ ಎಲ್ಲ ಸಮುದಾಯದ ಜನರಲ್ಲಿ ಹೋಗಿ ಅವರೆಲ್ಲರನ್ನೂ ಒಂದೆಡೆ ಸೇರಿಸುವ ಅವರ ಪ್ರಯತ್ನ ನಿಜಕ್ಕೂ ಅಚ್ಚರಿಯನ್ನುಂಟು ಮಾಡುತ್ತದೆ. ಅವರನ್ನು ಗೌರವದಿಂದ ಕಾಣುವ ಮನೋಧರ್ಮ ಬಸವಣ್ಣನವರದಾಗಿತ್ತು. ನಡೆನುಡಿಗೆ, ಅವರ ಸಿದ್ಧಾಂತಕ್ಕೆ ಎಲ್ಲರು ಮಣಿದು ಒಂದೆಡೆ ಸೇರಬೇಕೆಂದರೆ ಬಸವಣ್ಣನವರು ಬಹಳಷ್ಟು ಕಷ್ಟಪಟ್ಟಿದ್ದಾರೆ. ಅವರೆಲ್ಲರಿಗೆ ತಿಳಿ ಹೇಳುತ್ತ, ಸಂತೈಸುತ್ತ,

ಸಕಾರಾತ್ಮಕವಾದ ಭಾವನೆಗಳನ್ನು ಜನರಲ್ಲಿ ತುಂಬಿ ಸತ್ಯದ ಕಡೆಗೆ ಅಂದರೆ ಸನ್ಮಾರ್ಗದ ಕಡೆಗೆ ಸೆಳೆದುಕೊಳ್ಳುತ್ತಾರೆ. ಅದಕ್ಕೆ ಅವರ ಈ ವಚನ ಸಹ ನಮಗೆ ಸಾಕ್ಷೀಕರಿಸುತ್ತದೆ.

ಆನು ಭಕ್ತನಲ್ಲಯ್ಯಾ, ಆನು ವೇಷಧಾರಿಯಯ್ಯಾ.
ಕಾಟುಗ, ಕೇತುಗ, ಪೋಲುಗ ಎಂಬುದು ಎನ್ನ ಹೆಸರು.
ಕೂಡಲಸಂಗಮದೇವಾ ನಿಮ್ಮ ಶರಣರ ಮನೆಯ ಮಗ ನಾನಯ್ಯಾ.

ನಿಮ್ಮ ಶರಣರ ಮನೆಯ ಮಗನು ನಾನಾಗಿದ್ದೇನೆ ಎಂದು ಈ ವಚನದಲ್ಲಿ ಇಡೀ ಮಾನವ ಸಮಾಜದ ಮಗುವಾಗಿದ್ದೇನೆ ಎಂಬರ್ಥದಲ್ಲಿ ಹೇಳುತ್ತ ಅವರಲ್ಲಿ ಉತ್ಸಾಹ ಹುರುಪು ತುಂಬಿ, ನವ ಚೈತನ್ಯವನ್ನೆ ಬರುವಂತೆ ಮಾಡುತ್ತಾರೆ ಬಸವಣ್ಣನವರು. ಕೊನೆಯಲ್ಲಿ ಅವರು ತಮ್ಮ ವಚನದ ಮೂಲಕ ಶೋಷಿತ ಸಮುದಾಯಕ್ಕೆ ತಮ್ಮನ್ನು ಅವರೆಲ್ಲ ಅಪ್ಪಿಕೊಳ್ಳಲಿ ಎಂಬ ಮನೋಭಾವದಿಂದ ಅವರಿಗೆ ಈ ರೀತಿಯಾಗಿ ನಿವೇದನೆ ಮಾಡಿಕೊಳ್ಳುತ್ತಾರೆ.

ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ.
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ.
ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ.

ಈ ರೀತಿಯಾಗಿ ಅಪ್ಪ ಬಸವಣ್ಣನವರು ವಚನ ಚಳುವಳಿಯನ್ನು ಆರಂಭಿಸಿ ಸಮಾನತೆಗೆ ಮುನ್ನುಡಿ ಬರೆದಿದ್ದಾರೆ. ಅಂದು ಅಪ್ಪ ಬಸವಣ್ಣನವರು ಅಸಮಾನತೆಯನ್ನು ಹೋಗಲಾಡಿಸಲು ಅವರು ಪಟ್ಟ ಪರಿಶ್ರಮ ಬಹಳ ದೊಡ್ಡದು. ಅದು ಇಂದಿಗೂ ಯಾರು ಪಟ್ಟಿಲ್ಲಾ ಎನ್ನುವುದು ನಿಮ್ಮ ಗಮನಕ್ಕೆ ಇರಲಿ.

ಇನ್ನು ಒಂದು ಸಂಘಟನೆ, ಒಂದು ಚಳುವಳಿಯನ್ನು ಮಾಡಬೇಕಾದರೆ ಸಣ್ಣ ಕೆಲಸವಲ್ಲವದು. ಅದಕ್ಕೆ ಬೇಕಾದ ತಯಾರಿ, ಸಿದ್ಧಿಗಳನ್ನು ನಾವು ಮಾಡಿಕೊಂಡಿರಬೇಕಾಗುತ್ತದೆ ಎಂಬುದಕ್ಕೆ ಬಸವಣ್ಣನವರೆ ನಮಗೆ ಮಾದರಿ. ಹಾಗಾಗಿ ಅವರು ಬರೆದ ವಚನಗಳನ್ನ ಅರ್ಥಮಾಡಿಕೊಂಡು ಹೋದಾಗ ಮಾತ್ರ ನಮ್ಮ ಬದುಕು ಸುಂದರ ಮತ್ತು ನೆಮ್ಮದಿಯದಾಗುತ್ತದೆ. ಪ್ರತಿ ಸಮಾಜಪರ ಹೋರಾಟಗಳು ಇದೇ ರೀತಿಯಲ್ಲಿದ್ದರೆ ನಾವು ಹಮ್ಮಿಕೊಂಡ ಹೋರಾಟ ಸಾರ್ಥಕತೆಯನ್ನು ಪಡೆಯುತ್ತದೆ.

ಹೀಗಾಗಿಯೇ ವಿಶ್ವಸಮುದಾಯವು ಇವರನ್ನು ವಿಶ್ವದ ಸಂವಿಧಾನ ಶಿಲ್ಪಿ ಎಂದು ಹೆಮ್ಮೆಯಿಂದ ಕರೆಯುತ್ತಾರೆ.

**ಜಾತಿಯ ಸಂಕೋಲೆಯನ್ನು ತೊಲಗಿಸಿದ ಬಸವಣ್ಣ:** ಬಸವಣ್ಣನವರನ್ನು ವಿಶ್ವವೇ ಒಪ್ಪಿಕೊಂಡರೂ ದೇಶದಲ್ಲಿರುವ ಕೆಲ ಮೂಲಭೂತವಾದಿಗಳು, ಸಂಪ್ರದಾಯವಾದಿಗಳು ಇನ್ನೂ ಒಪ್ಪಿಕೊಳ್ಳದಿರುವುದು ದುರಂತ. ಸತ್ಯವನ್ನು ಮರೆಮಾಚಿ ಸುಳ್ಳನ್ನು ವೈಭವೀಕರಿಸುವ

ಇಂದಿನ ಕುತಂತ್ರವಾದಿಗಳ ಆಟ ಬಸವಣ್ಣನವರ ತತ್ವಗಳ ತಳಹದಿ ಮೇಲೆ ನಡೆಯುವುದಿಲ್ಲ. ಅದಕ್ಕಾಗಿ ಇವರು ಬಸವಣ್ಣನವರ ಆಶಯಗಳ ವಿರುದ್ಧವಾಗಿ ಹಾರಾಟ, ಚೀರಾಟ ಮಾಡುತ್ತಿರುವುದು ನಾವೆಲ್ಲರೂ ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಇನ್ನು ಬಸವಣ್ಣನವರು ಅಂದೇ 12ನೇ ಶತಮಾನದಲ್ಲಿ ಜಾತಿಯ ಸಂಕೋಲೆಗಳನ್ನು ಬಿಚ್ಚಿ ಬಿಸಾಡಿ, ಮಾನವರೆಲ್ಲರೂ ಸಮಾನರು ಎಂಬುದು ಸಾರಿದ್ದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಇದನ್ನು ಹೇಗಾದರೂ ಮಾಡಿ ತಡೆಗಟ್ಟಬೇಕೆಂಬ ಉದ್ದೇಶದಿಂದ ಇಂದಿನ ವೈದಿಕಶಾಹಿಗಳ ಮನಸ್ಥಿತಿ ಬಸವತತ್ವ ವಿರುದ್ಧ ನಿರಂತರವಾಗಿ ಕೆಲಸ ಮಾಡುತ್ತಿರುವುದು ಕಾಣುತ್ತೇವೆ. ಇದು ಹೇಡಿತನದ ಕೆಲಸವಲ್ಲದೇ ಮತ್ತೇನೂ ಇಲ್ಲವೇ ಇಲ್ಲ. ಇನ್ನು ಹೇಳಬೇಕೆಂದರೆ 12ನೇ ಶತಮಾನಕ್ಕಿಂತ ಮೊದಲು ನಾವೆಲ್ಲ ಅಸ್ಪೃಶ್ಯರಾಗಿದ್ದೆವು. ಬಸವಣ್ಣ ಎಲ್ಲರಿಗೂ ಇಷ್ಟಲಿಂಗದೀಕ್ಷೆ ನೀಡಿ ಶ್ರೇಷ್ಠರನ್ನಾಗಿಸಿದರು. ಈ ಬಗ್ಗೆ ಇತಿಹಾಸದಲ್ಲಿಯೂ ಉಲ್ಲೇಖವಿದೆ. ಎಲ್ಲರನ್ನೂ ಅಪ್ಪಿಕೊಂಡು ಲಿಂಗ, ವರ್ಣ, ಜಾತಿ, ವಯೋಭೇದ ಮಾಡದೇ ಎಲ್ಲರನ್ನು ಸಮಾನರಾಗಿ ಕಂಡು, ಸಮಾನತೆಯ ಸಮಾಜವನ್ನು ನಿರ್ಮಾಣ ಮಾಡಿದರು ಬಸವಣ್ಣನವರು. ಅಲ್ಲದೆ ಇನ್ನೊಂದು ವಿಚಾರ ಈ ಸಮಯದಲ್ಲಿ ಪ್ರಸ್ತಾಪ ಮಾಡುತ್ತಿರುವೆ. ಅದು ಏನೆಂದರೆ ಇಂದಿನ ಲಿಂಗಾಯತರು ಸಹ 12ನೇ ಶತಮಾನದಲ್ಲಿ ಕೆಳವರ್ಗದ ಜನರೇ ಆಗಿದ್ದರೂ, ಇವರಾಗಿದ್ದರೂ ಎಂಬ ವಿಷಯ ಇತ್ತೀಚೆಗೆ ಬಳಕಿಗೆ ಬರುತ್ತಿದೆ. ಅದು ಏನೇ ಇರಲಿ, ಸಧ್ಯ ನಮಗೆ ಬಸವಣ್ಣನವರು ಕೊಟ್ಟ ಕಾಯಕದ ಗುಣಗಳನ್ನು ಅರಿತು ಅವುಗಳನ್ನು ಅಳವಡಿಸಿಕೊಂಡು ಹೆಜ್ಜೆ ಹಾಕುವುದು ಉತ್ತಮ ಮಾರ್ಗವಾಗಿದೆ. ಮೇಲು ಕೀಳು ಎಂಬ ಭಾವನೆ ತೊಡೆದುಹಾಕಿ, ಸರ್ವರಿಗೂ ಸಮಪಾಲು, ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ ಇವು ಬಸವತತ್ವದ ಅನುಷ್ಠಾನದಿಂದ ಮಾತ್ರ ಸಾಧ್ಯವಾಗುತ್ತದೆ. ನಮ್ಮ ಶರಣರು ಹನ್ನೆರಡನೇ ಶತಮಾನದಲ್ಲಿ ಬದುಕಿನ ಸಂಕಷ್ಟಗಳಿಗೆ ಮಾನವೀಯ ನೆಲೆಯಲ್ಲಿ ಪರಿಹಾರಗಳನ್ನು ಸೂಚಿಸಿದ್ದಾರೆ. ಬನ್ನಿ ನಾವೆಲ್ಲರೂ ಜೊತೆಯಾಗಿ ಮತ್ತೆ ಶರಣರ ವೈಚಾರಿಕ ವಿಚಾರಗಳನ್ನು ಜಾರಿಗೆ ತಂದು, ಬಸವಣ್ಣನವರ ಮಾರ್ಗದರ್ಶನದಲ್ಲಿ ನಡೆದು, ಸಮಾಜದಲ್ಲಿ ಬೇರೂರಿದ ಅಸಮಾನತೆಯ ಸಂಕೋಲೆ ತೊಲಗಿಸಲು ಸದಾ ಪ್ರಯತ್ನ ಮಾಡೋಣ.

**ಕರ್ನಾಟಕ ಸರ್ಕಾರ / ಕೇಂದ್ರ ಸರ್ಕಾರ:** ಬಸವಣ್ಣನವರು ಮಾಡಿದ ಸಮಾಜಿಕ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಲ್ಲಿಸಿದ ಅನುಪಮ ಸೇವೆಯನ್ನು ಪರಿಗಣಿಸಿ, ಇವರ ಅನನ್ಯ ನಿಸ್ವಾರ್ಥ ಸೇವಾಕೈಂಕರ್ಯಗಳನ್ನು ಗಂಭೀರವಾಗಿ ಪರಿಗಣಿಸುವ ಮೂಲಕ ಕರ್ನಾಟಕ ಸರಕಾರ ಸೇರಿದಂತೆ ಕೇಂದ್ರ ಸರ್ಕಾರವು ಬಸವಣ್ಣನವರನ್ನು ಭಾರತದ ಸಾಂಸ್ಕೃತಿಕ ನಾಯಕನೆಂದು ಘೋಷಿಸಬೇಕೆಂದು ಸರಕಾರಗಳಿಗೆ ಒತ್ತಾಯಿಸುತ್ತೇನೆ. ಅಲ್ಲದೆ ಕೇಂದ್ರ ಸರ್ಕಾರದಿಂದ ಬಸವಣ್ಣನವರ ಜಯಂತಿ ಆಚರಣೆ ಮಾಡಲೇಬೇಕು. ಜೊತೆಗೆ ಬಸವಣ್ಣನವರ ಹೆಸರಿನಲ್ಲಿ ಪ್ರಶಸ್ತಿ

ಪ್ರಧಾನ ಮಾಡಬೇಕು ಮತ್ತು ದೇಶದ ಎಲ್ಲಾ ಇನ್ನಿತರ ರಾಜ್ಯ ಸರ್ಕಾರಗಳು ಸಹ ಬಸವ ಜಯಂತಿ ಆಚರಣೆ ಮಾಡುವ ದಿಕ್ಕಿನಲ್ಲಿ ಚಿಂತಿಸಬೇಕು. ಹಾಗೂ ವಿಶ್ವದ ಎಲ್ಲಾ ಭಾಷಗಳಿಗೆ ವಚನಗಳ ತುರ್ಜಮೆ ಮಾಡುವ ಕೆಲಸ ಮಾಡಬೇಕು. ಶರಣರ ಹೆಸರಿನಲ್ಲಿ ವಿಶ್ವವಿದ್ಯಾಲಯ ಪ್ರಾರಂಭಿಸಬೇಕು, ಬಸವಕಲ್ಯಾಣ ಮತ್ತು ಕೂಡಲಸಂಗಮ ಅಭಿವೃದ್ಧಿಗೆ (ರೂ. 2000 ಕೋಟಿಗಿಂತಲೂ ಅಧಿಕ) ಅನುದಾನ ಬಿಡುಗಡೆ ಮಾಡಬೇಕು. ಅಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿತಾಣವಾಗಿ ಅಭಿವೃದ್ಧಿ ಮಾಡಲೇಬೇಕು ಎಂಬುದೇ ಇಡಿ ಬಸವಾಭಿಮಾನಿಗಳ ಒಕ್ಕೊರಲಿನ ಆಗ್ರಹವಾಗಿದೆ. ಈ ದಿಸೆಯಲ್ಲಿ ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರ ಈ ನಿಟ್ಟಿನಲ್ಲಿ ಹೆಜ್ಜೆ ಶೀಘ್ರವಾಗಿ ಇಡುವ ಮೂಲಕ ವಿಶ್ವಕ್ಕೇ ಮಾದರಿಯಾಗಬೇಕು ಎಂಬುದೇ ನಮ್ಮೆಲ್ಲರ ಕಳಕಳಿ.

**ಆಶಯ ಮಾತು:** ಅಣ್ಣ ಬಸವಣ್ಣನವರು ವಿಶ್ವದ ಮೊದಲ ವೈಚಾರಿಕಪ್ರಜ್ಞೆಯ ಮಾಹಾನಾಯಕ, ಮೌಲ್ಯಾಧಾರಿತ ವಿಚಾರವಾದಿ ಪ್ರತಿಪಾದಕ, ಜಾಗತಿಕ ಸಮುದಾಯದ ಮಹಾನ್ ನಾಯಕ. ಶೋಷಿತ ವರ್ಗದವರನ್ನು, ನಿರ್ದೋಷಿಗಳನ್ನು ರಕ್ಷಿಸಲಿಕ್ಕಾಗಿಯೆ ಈ ಮರ್ತ್ಯಲೋಕಕ್ಕೆ ಬಂದ ಮಹಾಕಾರಣಿಕ ವಿಶ್ವಗುರು ಬಸವಣ್ಣನವರು. ಬಸವಣ್ಣನವರು ಯಾವುದೇ ಒಂದು ಜನಾಂಗದ ಸೊತ್ತಾಗಿರದೆ, ಸಕಲ ಜೀವರಾಶಿಗಳ ಜೀವಾಳವಾಗಿದ್ದರು. ಹಾಗಾಗಿ ಅವರು ಎಲ್ಲರನ್ನೂ ಅಪ್ಪಿಕೊಂಡು ಸಾಮೂಹಿಕ ನಾಯಕತ್ವದಿಂದ ವೈಚಾರಿಕ ಚಳುವಳಿಯನ್ನು ಆರಂಭಿಸಿದರು. ಅದಕ್ಕಾಗಿಯೇ ಬಸವಾದಿ ಶರಣರು ಸುಂದರ, ಸರಳವಾದ ಭಾಷೆಯಲ್ಲಿ ಎಲ್ಲಾ ಜನಾಂಗಕ್ಕೆ ತಿಳಿಯುವಂತೆ ಮನ – ಮನಸ್ಸುಗಳಿಗೆ ನಾಟುವಂತೆ ವಚನಗಳು ಕನ್ನಡದಲ್ಲಿ ರಚನೆ ಮಾಡಿದ್ದಾರೆ. ಜೊತೆಗೆ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ್ದಾರೆ. ವಿಶೇಷವಾಗಿ ಹೇಳಬೇಕೆಂದರೆ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಗಲು ಪ್ರಮುಖ ಕಾರಣ ವಚನ ಸಾಹಿತ್ಯದ ಅಮೂಲ್ಯ ಕೊಡುಗೆ ಎನ್ನಬಹುದಾಗಿದೆ. ಹಾಗಾಗಿಯೇ ಬಸವಾದಿ ಶಿವಶರಣರು ಕರ್ನಾಟಕ ಸೇರಿದಂತೆ ಭಾರತದ ಹೆಮ್ಮೆಯ ಸಾಂಸ್ಕೃತಿಕ ನಾಯಕ ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಈ ಮೂಲಕ ದೇಶದ ಕೀರ್ತಿಯನ್ನು ಬಸವಣ್ಣನವರು ಜಾಗತಿಕ ಮಟ್ಟದಲ್ಲಿ ಪಸರಿಸಿದ್ದಾರೆ. ಹೀಗಾಗಿಯೇ ಜನಸಾಮಾನ್ಯರು ಬಸವಣ್ಣನವರ ವಿಚಾರಗಳನ್ನು ಮನಗಂಡು ಹನ್ನೆರಡನೆಯ ಶತಮಾನವು ವಿಶ್ವದ ಮಹಾ ದಿವ್ಯಜ್ಯೋತಿಯನ್ನು ಬೆಳಗಿದ ಕಾಲಘಟ್ಟವದು ಎಂದು ಸ್ಮರಿಸುತ್ತಾರೆ. ಅದೇ ರೀತಿ ವಿಶ್ವಮಾನ್ಯರಾದ ಬಸವಣ್ಣ ಹಾಗೂ ಬಸವಾದಿ ಶಿವಶರಣರ ತ್ಯಾಗ, ಬಲಿದಾನ ವ್ಯರ್ಥವಾಗದಂತೆ ನಾವೆಲ್ಲ ನೋಡಿಕೊಳ್ಳಬೇಕಾಗಿದೆ ಹಾಗೂ ಕಾರ್ಯ ನಿರ್ವಹಿಸಬೇಕಾಗಿದೆ. ಈ ದಿಸೆಯಲ್ಲಿ ಎಲ್ಲಾ ಬಸವಾಭಿಮಾನಿಗಳು ಸ್ವಾರ್ಥ ಬಿಟ್ಟು, ನಿಸ್ವಾರ್ಥಿಯಾಗಿ ದುಡಿಯಲು ಮುಂದೆ ಬರಬೇಕಾಗಿದೆ. ಅಂದಾಗಲೇ ನಾವು ಬಸವಣ್ಣ ನವರನ್ನು ವಿಶ್ವದ ಸಾಂಸ್ಕೃತಿಕ ನಾಯಕನಾಗಿ ನೋಡಬಹುದಾಗಿದೆ.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

### ಯಾವುದು ಮನುಷ್ಯನಿಗೆ ಆಧಾರವೋ ಅದು ತಾಯಿಗೆ ಸಮಾನ

ಯಾವುದು ಮನುಷ್ಯನಿಗೆ ಆಧಾರವೋ ಅದು ತಾಯಿಗೆ ಸಮಾನ ಎಂದು ಪರಮಪೂಜ್ಯ ಜಗದ್ಗುರುಗಳು ಮಾರ್ಚ್ 6ರಂದು ಯಳಂದೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಜತ ಮಹೋತ್ಸವ ಹಾಗೂ ಜ್ಞಾನದೀಪ ಭವನ – ನೂತನ ಕಟ್ಟಡದ ಉದ್ಘಾಟನಾ ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು.

ಭಾರತ ದೇಶದಲ್ಲಿ ತಾಯಿಗೆ ಮಹತ್ವದ ಮೊದಲ ಸ್ಥಾನ ನೀಡಲಾಗಿದೆ. ತಾಯಿಯನ್ನು ದೇವರೆಂದು ಪೂಜಿಸಲಾಗಿದೆ. ಪ್ರಕೃತಿಯ ಪ್ರತಿಯೊಂದನ್ನು ತಾಯಿಯ ರೂಪದಲ್ಲಿ ಕಾಣಲಾಗುತ್ತದೆ. ಭಗವಂತ ಮನುಷ್ಯನಿಗೆ ಎಲ್ಲವನ್ನು ನೀಡಿದ್ದಾನೆ. ಭಗವಂತನ ಸ್ಮರಣೆಯಿಂದ ಜಗತ್ತಿನಲ್ಲಿ ಶಾಂತಿ ಮತ್ತು ನೆಮ್ಮದಿ ನೆಲೆಸಲು ಸಾಧ್ಯ. ಇಂದು ರಷ್ಯಾ ಮತ್ತು ಉಕ್ರೇನ್ ದೇಶಗಳು ಒಂದು ಕ್ಷಣ ಯೋಚಿಸಿ, ಧ್ಯಾನಿಸಿದ್ದರೆ ಇಂತಹ ಘೋರ ಯುದ್ಧವಾಗುತ್ತಿರಲಿಲ್ಲ. ಮನುಷ್ಯ ಸದಾ ಸದ್ಭಾವನೆಯಿಂದ ಬಾಳಬೇಕು. ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಆಧ್ಯಾತ್ಮ ಸಿಂಚನದ ಕಾರ್ಯ ಆದರ್ಶಮಯವಾದುದು. ಬ್ರಹ್ಮಕುಮಾರ ಬಾಬಾರವರ ತ್ಯಾಗದ ಫಲದಿಂದ ಇಂದು ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಒಂದು ಬೃಹತ್ ವೃಕ್ಷವಾಗಿ ಬೆಳೆದಿದೆ ಎಂದರು.

ಶಾಸಕರಾದ ಶ್ರೀ ಎನ್. ಮಹೇಶ್‌ರವರು ನಮ್ಮದು ಮಾತೃಪ್ರಧಾನ ದೇಶ. ಸ್ತ್ರೀಶಕ್ತಿ ಏನು ಬೇಕಾದರೂ ಸಾಧಿಸಬಹುದು ಎನ್ನುವುದಕ್ಕೆ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ವಿಶ್ವಕ್ಕೆ ತೋರಿಸಿಕೊಟ್ಟಿದೆ. ಈ ದೇಶದ ಸಂಕಷ್ಟದ ಸಂದರ್ಭದಲ್ಲಿ ಅಭಿವೃದ್ಧಿಗಾಗಿ ಸ್ತ್ರೀಯರು ಕೈಜೋಡಿಸಿದ್ದಾರೆ. ಸ್ತ್ರೀಯರನ್ನು ಪೂಜನೀಯ ದೃಷ್ಟಿಯಿಂದ ನೋಡುವುದು ಭಾರತದ ಸಂಸ್ಕೃತಿ ಎಂದು ತಿಳಿಸಿದರು.

ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜಿ, ಮಾಜಿ ಶಾಸಕರುಗಳಾದ ಶ್ರೀ ಜಿ.ಎನ್. ನಂಜುಂಡಸ್ವಾಮಿ, ಶ್ರೀಮತಿ ಪರಿಮಳ ನಾಗಪ್ಪ, ಬ್ರಹ್ಮಕುಮಾರಿ ಶಾರದಾಜಿ ಮಾತನಾಡಿದರು. ತಹಶೀಲ್ದಾರ್ ಶ್ರೀ ಕೆ.ಬಿ. ಆನಂದಪ್ಪ ನಾಯ್ಕ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ

ಶ್ರೀ ಮಲ್ಲೇಶ್, ಡಾ. ಎಸ್. ದತ್ತೇಶ್ ಶ್ರೀ ಎಂ. ಶಿವಮಾದಯ್ಯ, ಶ್ರೀ ಯೋಗೇಶ್ ಮೊದಲಾದವರು ಉಪಸ್ಥಿತರಿದ್ದರು.

ಡಾ. ಶಿಲ್ಪ ಹೆಗ್ಗಡೆ ಪ್ರಾರ್ಥಿಸಿದರು. ಶ್ರೀ ಬಿ.ಕೆ. ರಾಮಚಂದ್ರಣ್ಣ ಸ್ವಾಗತಿಸಿದರು. ಬ್ರಹ್ಮಕುಮಾರಿ ಪ್ರಭಾಮಣೀಜಿ ಈಶ್ವರೀಯ ಸಂದೇಶ ನೀಡಿದರು. ಬ್ರಹ್ಮಕುಮಾರಿ ಶಾರದಾಜಿ ರಾಜಯೋಗ ಅಭ್ಯಾಸ ಮಾಡಿಸಿದರು. ಶ್ರೀ ಬ್ರಹ್ಮಕುಮಾರ ರಂಗನಾಥ್ ಕಾರ್ಯಕ್ರಮ ನಿರೂಪಿಸಿದರು.

**ಗುರು ಸ್ಮರಣೆ ಬಹಳ ಮುಖ್ಯ**

ಜೀವನದಲ್ಲಿ ಮಾರ್ಗದರ್ಶನ ಮಾಡುವ ಗುರುಗಳನ್ನು ಸದಾ ಸ್ಮರಿಸುವುದು ಅತ್ಯಗತ್ಯ ಎಂದು ಪರಮಪೂಜ್ಯ ಜಗದ್ಗುರುಗಳು ಮಾರ್ಚ್ 5ರಂದು ಮೈಸೂರಿನ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ನಡೆದ ಪ್ರೊ. ನೀಲಗಿರಿ ತಳವಾರ ಅಭಿನಂದನಾ ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ತಳವಾರ್‌ರವರು ಅವರ ಯಶಸ್ಸಿಗೆ ಕಾರಣರಾದ ಗುರುಗಳನ್ನು ಗೌರವಿಸುತ್ತಿರುವುದು ಮಾದರಿಯಾದುದು. ತಳವಾರ್‌ರವರು ಬಹಳ ಸಾತ್ವಿಕ ಸ್ವಭಾವದವರು. ಎಷ್ಟೇ ಉನ್ನತ ಮಟ್ಟಕ್ಕೆ ಹೋಗಿದ್ದರು ಎಂದೂ ತಮ್ಮ ವಿನಯತೆಯನ್ನು ತೊರೆದವರಲ್ಲ. ಎಲ್ಲರನ್ನು ಭ್ರಾತೃತ್ವ ಭಾವನೆಯಿಂದ ಕಂಡವರು. ಅವರ ಈ ಎಲ್ಲ ಗುಣಗಳಿಂದಲೇ ಅವರು ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಾಗಿದೆ ಎಂದರು.

ಸಂಸದರಾದ ಶ್ರೀ ವಿ. ಶ್ರೀನಿವಾಸಪ್ರಸಾದ್‌ರವರು ಪಾಲಕರು ತಮ್ಮ ಮಕ್ಕಳು ಶಿಕ್ಷಕರು ಹಾಗೂ ವಿಜ್ಞಾನಿಗಳು ಆಗಬೇಕು ಎಂದು ಬಯಸಬೇಕು. ಕೇವಲ ವೈದ್ಯ, ಇಂಜಿನಿಯರ್ ವೃತ್ತಿಯ ಬಗ್ಗೆ ಮೋಹ ಬೆಳೆಸಿಕೊಳ್ಳಬಾರದು. ಇಂತಹ ಮೋಹದಿಂದಲೇ ದೂರದ ದೇಶಕ್ಕೆ ಹೋಗಿ ಮಕ್ಕಳು ಬಲಿಯಾಗುತ್ತಿದ್ದಾರೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಡಾ. ಮನು ಬಳಿಗಾರ್‌ರವರು ಕುಲಪತಿಗಳಾಗುವ ಸಾಮರ್ಥ್ಯ ತಳವಾರ್‌ರವರಲ್ಲಿದೆ. ಸರ್ಕಾರ ಹಾಗೂ ಸಂಘಸಂಸ್ಥೆಗಳು ಅವರ ಸೇವೆಯನ್ನು ಬಳಸಿಕೊಳ್ಳಬೇಕು. ಬಡತನದಲ್ಲಿ ಹುಟ್ಟಿ ಬೆಳೆದು ಓದುವ ಹುಚ್ಚು ಬೆಳೆಸಿಕೊಂಡು ಕನ್ನಡವನ್ನು ಅಧ್ಯಯನ ಮಾಡಿದ್ದಾರೆ. ಅವರ ಸಾಹಿತ್ಯ ಸೇವೆಯೂ ಅಪಾರವಾದುದು. ಮೃದು ಮನಸ್ಸು ಉಳ್ಳವರು. ಆದರೆ ಅವರು ಕೆಲಸದ ವಿಚಾರದಲ್ಲಿ ಎಂದೂ ರಾಜಿಯಾಗುವುದಿಲ್ಲ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ 'ನೀಲಪಥ' ಅಭಿನಂದನಾ ಗ್ರಂಥ ಬಿಡುಗಡೆಗೊಳಿಸಲಾಯಿತು. ಪ್ರೊ. ನೀಲಗಿರಿ ತಳವಾರ ಹಾಗೂ ಶ್ರೀಮತಿ ಮಹಾದೇವಿ ತಳವಾರ ದಂಪತಿಗಳನ್ನು ಅಭಿನಂದಿಸಿ ಸನ್ಮಾನಿಸಲಾಯಿತು. ಪ್ರೊ. ಹಂಪನಾ, ಪ್ರೊ. ಎನ್.ಎಸ್. ತಾರಾನಾಥ, ಶ್ರೀ ಮ. ವೆಂಕಟರಾಮು, ಪ್ರೊ. ನೀಲಗಿರಿ ತಳವಾರ, ಪ್ರೊ. ಕೃಷ್ಣಮೂರ್ತಿ ಹನೂರು

ಮಾತನಾಡಿದರು. ಡಾ. ಶಿಲ್ಪಾ ಅರವು ಅಭಿನಂದನಾ ಪತ್ರ ವಾಚನ ಮಾಡಿದರು. ಪ್ರೊ. ನೀಲಗಿರಿ ತಳವಾರ್‌ರವರ ಗುರುಗಳಾದ ಪ್ರೊ. ಆರ್.ಎನ್. ಪಾಟೀಲ, ಪ್ರೊ. ಶಿವಪ್ರಕಾಶ ಶಿಗ್ಲಿ, ಶ್ರೀ ಎನ್.ಎನ್. ಪಾಟೀಲ ಹಾಗೂ ಶ್ರೀ ಎಚ್.ಎನ್. ಹೂಗಾರರವರುಗಳನ್ನು ಸನ್ಮಾನಿಸಲಾಯಿತು. ಲಲಿತಕಲಾ ಕಾಲೇಜು ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಡಾ. ನೀ.ಗೂ. ರಮೇಶ್ ಸ್ವಾಗತಿಸಿದರು. ಡಾ. ಚಿಕ್ಕಮಗಳೂರು ಗಣೇಶ್ ಕಾರ್ಯಕ್ರಮ ನಿರೂಪಿಸಿದರು.

**ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಸುತ್ತೂರು ಶ್ರೀಮಠ – ಗುರುಪರಂಪರೆ ಚಿತ್ರ ಪ್ರದರ್ಶನ**

ರೇಖೆಗಳಲ್ಲಿ ಮೂಡಿದ ಅದ್ಭುತವಾದ ಅನಿಮೇಶನ್ ಚಿತ್ರ ಸುತ್ತೂರು ಶ್ರೀಮಠ – ಗುರುಪರಂಪರೆ ಎಂದು ಪರಮಪೂಜ್ಯ ಜಗದ್ಗುರುಗಳು ಮಾರ್ಚ್ 8ರಂದು ಬೆಂಗಳೂರಿನ ಒರಾಯಿನ್ ಮಾಲ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಗೊಂಡಿದ್ದ ಸುತ್ತೂರು ಶ್ರೀಮಠ – ಗುರುಪರಂಪರೆ ಅನಿಮೇಷನ್ ಚಿತ್ರ ಪ್ರದರ್ಶನದ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು.

ಅನಿಮೇಶನ್ ಚಿತ್ರಗಳನ್ನು ನಿರ್ಮಿಸುವುದು ಅತ್ಯಂತ ಕಷ್ಟದ ಕೆಲಸ. ಈ ಚಿತ್ರ ನಿರ್ಮಾಣದ ಹಿಂದೆ ಬಹಳಷ್ಟು ಜನರ ಶ್ರಮವಿದೆ. ರೇಖೆಗಳಲ್ಲಿಯೇ ಎಲ್ಲವನ್ನೂ ನಿರ್ಮಿಸಬೇಕು. ಸುತ್ತೂರು ಶ್ರೀಮಠ–ಗುರುಪರಂಪರೆ ಅನಿಮೇಷನ್ ಚಿತ್ರ ಈಗಾಗಲೇ ವಿದೇಶಗಳಲ್ಲಿ ಪ್ರದರ್ಶನಗೊಂಡು ಹಲವಾರು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ಇಂದು ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಗೊಂಡು ಪ್ರದರ್ಶನಗೊಳ್ಳುತ್ತಿರುವುದು ಸಂತಸದ ಸಂಗತಿ ಎಂದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು ಈ ಅನಿಮೇಶನ್ ಚಿತ್ರ ಕೇವಲ ಸುತ್ತೂರು ಮಠದ ಪರಂಪರೆಯ ಚಿತ್ರಣವಾಗಿರದೆ ಶರಣ ಸಂಸ್ಕೃತಿ, ದಾಸೋಹ ಸಂಸ್ಕೃತಿ ಮತ್ತು ಸಹಬಾಳ್ವೆಯ ದರ್ಶನವಾಗಿದೆ. ಯುದ್ಧದ ಕರಿನೆರಳು ಬಾಧಿಸುತ್ತಿರುವ ಇಂತಹ ಸಂದರ್ಭದಲ್ಲಿ ಶಾಂತಿ ಸೌಹಾರ್ದತೆ ಸಾರುವ ಇಂತಹ ಚಿತ್ರಗಳು ಪ್ರದರ್ಶನಗೊಳ್ಳಬೇಕು ಎಂದು ತಿಳಿಸಿದರು.

ಕರ್ನಾಟಕ ಚಲಚಿತ್ರ ಅಕ್ಯಾಡೆಮಿ ಅಧ್ಯಕ್ಷರಾದ ಶ್ರೀ ಸುನೀಲ್ ಪುರಾಣಿಕ್‌ರವರು ಸಂಸ್ಕೃತಿ, ಸಾಹಿತ್ಯ, ಭಾಷೆ, ಅಭಿವೃದ್ಧಿಗೆ ಸಂಬಂಧಿಸಿದ ಹಲವಾರು ಚಿತ್ರಗಳನ್ನು ಇಲ್ಲಿ ಪ್ರದರ್ಶಿಸಿ ಪ್ರೋತ್ಸಾಹಿಸಲಾಗುತ್ತಿದೆ. ಸುತ್ತೂರು ಶ್ರೀಮಠ ಗುರುಪರಂಪರೆ ಇಲ್ಲಿ ಪ್ರದರ್ಶನಗೊಳ್ಳುತ್ತಿರುವ ಒಂದೇ ಅನಿಮೇಶನ್ ಚಿತ್ರ ಎಂದು ಹೇಳಿದರು.

ನಿರ್ದೇಶಕ ಶ್ರೀ ಅಬ್ದುಲ್ ಕರೀಂ ಮಾತನಾಡಿದರು. ಕನಕಪುರ, ಗುರುವಣ್ಣದೇವರ ಮಠ, ಗಂಜಾಂ, ಮರಳೆಗವಿಮಠ, ಚಕ್ರಬಾವಿ, ಚುಂಚನಹಳ್ಳಿ ಶ್ರೀಗಳು ಸೇರಿದಂತೆ ವಿವಿಧ ಮಠಾಧೀಶರು, ಸಾಹಿತಿಗಳಾದ ಡಾ. ಗೊರುಚ, ಅಖಿಲ ಭಾರತ ಶರಣ

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಮಲೆಯೂರು ಗುರುಸ್ವಾಮಿ, ಕರ್ನಾಟಕ ಚಲಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾದ ಶ್ರೀ ಕೆ. ಜಯರಾಜ್, ಮಾಜಿ ಅಧ್ಯಕ್ಷರಾದ ಶ್ರೀ ಎಸ್.ಎ. ಚಿನ್ನೇಗೌಡ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್, ಹಿರಿಯ ಅಧಿಕಾರಿಗಳಾದ ಶ್ರೀ ಗಿರೀಶ್ ಹೊಸುರ್, ಶ್ರೀ ನಂದಕುಮಾರ್, ಶ್ರೀ ಸಂದೀಪ್ ಪಾಟೀಲ್, ಶ್ರೀ ಅಲೋಕ್‌ಕುಮಾರ್, ನಿವೃತ್ತ ಅಧಿಕಾರಿಗಳಾದ ಶ್ರೀ ಕೆ. ಶಿವರಾಂ ಹಾಗೂ ಶ್ರೀ ಪಾಂಡುರಂಗ ರಾಣೆ, ಚಲನಚಿತ್ರ ರಂಗದ ಕಲಾವಿದರು ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಕೆ.ವಿ. ನಾಗರಾಜಮೂರ್ತಿ ಕಾರ್ಯಕ್ರಮ ನಿರ್ವಹಿಸಿದರು.

**ಒಳ್ಳೆಯ ಮನಸ್ಸಿನ ಕಾರ್ಯಗಳಿಗೆ ಸದಾ ಭಗವಂತನ ಆಶೀರ್ವಾದವಿರುತ್ತದೆ**

ಒಳ್ಳೆಯ ಮನಸ್ಸಿನ ಕಾರ್ಯಗಳಿಗೆ ಸದಾ ಭಗವಂತನ ಆಶೀರ್ವಾದವಿರುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳು ತಮಿಳುನಾಡಿನ ತಾಳವಾಡಿಯಲ್ಲಿ ಮಾರ್ಚ್ 7ರಂದು ಬಸವ ಸಮಿತಿ, ಅಖಿಲ ಭಾರತ ವೀರಶೈವ ಮಹಾಸಭಾ ಹಾಗೂ ವೀರಶೈವ–ಲಿಂಗಾಯತ ಯುವವೇದಿಕೆಯ ವತಿಯಿಂದ ಆಯೋಜಿಸಿದ್ದ ಸಭಾಭವನ ಕಟ್ಟಡದ ಭೂಮಿ ಪೂಜೆ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಮಳೆಯಾಶ್ರಿತ ಪ್ರದೇಶದ ತಾಳವಾಡಿಯ ಜನರು ಶ್ರಮಜೀವಿಗಳು ಮತ್ತು ಕಾಯಕನಿಷ್ಠೆಯುಳ್ಳವರು. ಒಳ್ಳೆಯ ಕೆಲಸಗಳನ್ನು ಈ ಭಾಗದಲ್ಲಿ ಮಾಡುತ್ತಿದ್ದಾರೆ. ಧರ್ಮದ ಬಗ್ಗೆ ಶ್ರದ್ಧಾಭಕ್ತಿಯನ್ನು ಹೊಂದಿದ್ದಾರೆ. ಇದೆ ರೀತಿ ಉತ್ತಮ ಕಾರ್ಯಗಳನ್ನು ಮಾಡುತ್ತಿರಲಿ ಎಂದು ಹಾರೈಸಿದರು.

ಡಾ. ಶಾಮನೂರು ಶಿವಶಂಕರಪ್ಪನವರು ಹೊರ ರಾಜ್ಯಗಳಲ್ಲೂ ಇಂತಹ ಉತ್ತಮ ಕಾರ್ಯಗಳು ನಡೆಯುತ್ತಿರುವುದು ಸಂತಸದ ಸಂಗತಿ. ಇಲ್ಲಿ ನಿರ್ಮಾಣವಾಗುತ್ತಿರುವ ಭವನವನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯಬೇಕು ಎಂದರು. ಕಟ್ಟಡ ನಿರ್ಮಾಣಕ್ಕೆ ಅವರೂ ಸಹಾಯ ಮಾಡುವುದಾಗಿ ತಿಳಿಸಿದರು.

ಶ್ರೀ ಈಶ್ವರ ಬಿ. ಖಂಡ್ರೆಯವರು ತಮಿಳುನಾಡಿನಲ್ಲಿರುವ ಸಮಾಜದವರ ರಕ್ಷಣೆಗೆ ನಮ್ಮೆಲ್ಲರ ನೈತಿಕ ಬೆಂಬಲ ಸದಾ ಇರುತ್ತದೆ. ಶಿಕ್ಷಣಕ್ಕೆ ಒತ್ತು ನೀಡಲು ಮಹಾಸಭಾದಿಂದ ಹಲವಾರು ಕಡೆ ಶಿಕ್ಷಣ ತರಬೇತಿ ಕೇಂದ್ರಗಳನ್ನು ಆರಂಭಿಸಲು ಚಿಂತನೆ ನಡೆಸಲಾಗುತ್ತಿದೆ ಎಂದರು. ಕರ್ನಾಟಕ ಸರ್ಕಾರದಿಂದ ಬರಬೇಕಾಗಿರುವ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಿಸಲು ಪ್ರಯತ್ನಿಸುವುದಾಗಿ ತಿಳಿಸಿದರು.

ಶ್ರೀ ಅಣಬೇರು ರಾಜಣ್ಣ ಹಾಗೂ ಶ್ರೀ ಅಥಣಿ ವೀರಣ್ಣರವರುಗಳು ಮಾತನಾಡಿ ಸಂಘದ ಸೇವಾಕಾರ್ಯಗಳನ್ನು ಪ್ರಶಂಸಿಸಿ, ಭವನದ ನಿರ್ಮಾಣಕ್ಕೆ ಅವರುಗಳು ಸಹಾಯ ಮಾಡುವುದಾಗಿ ತಿಳಿಸಿದರು.

ಶ್ರೀ ಎನ್.ಕೆ.ಕೆ. ಪೆರಿಯಸ್ವಾಮಿಯವರು ತಾಳವಾಡಿ ಹಿಂದುಳಿದ ಪ್ರದೇಶವಾಗಿದೆ. ಇಲ್ಲಿ ಸರ್ಕಾರದ ಸಹಾಯದ ಅವಶ್ಯಕತೆಯಿದೆ. ಸುತ್ತೂರು ಶ್ರೀಗಳ ಆಶೀರ್ವಾದದ ಫಲದಿಂದ ಇಂದು ಇಲ್ಲಿ ಸಮುದಾಯ ಭವನ ನಿರ್ಮಾಣವಾಗುತ್ತಿದೆ. ಇಲ್ಲಿನ ಜನಕ್ಕೆ ಇದರಿಂದ ಬಹಳ ಅನುಕೂಲವಾಗಲಿದೆ ಎಂದು ಹೇಳಿದರು.

ಸೋಮಹಳ್ಳಿ ಶ್ರೀಗಳು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್, ಚೆಸ್ಕಾಂ ವ್ಯವಸ್ಥಾಪಕರಾದ ಶ್ರೀ ಜಯವಿಭವಸ್ವಾಮಿ, ಶ್ರೀ ಅಣಬೇರು ರಾಜಣ್ಣ ಮತ್ತು ಶ್ರೀ ಎ.ಎಸ್. ವೀರಣ್ಣ ಮಾತನಾಡಿದರು. ಶ್ರೀ ಶಾಂತಪ್ಪ ಸ್ವಾಗತಿಸಿದರು. ಶ್ರೀಮತಿ ಪ್ರತಿಭಾ ಮತ್ತು ಶೋಭ ಪ್ರಾರ್ಥಿಸಿದರು. ಶ್ರೀ ಶಿವಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಕಾಂತರಾಜು ವಂದಿಸಿದರು ಹಾಗೂ ಶ್ರೀ ಗುರುಮಲ್ಲಪ್ಪ ಕಾರ್ಯಕ್ರಮ ನಿರೂಪಿಸಿದರು.

## ಮನುಷ್ಯನ ದುರಾಸೆಯಿಂದ ವಿಶ್ವದಲ್ಲಿ ವಿಷಮ ಪರಿಸ್ಥಿತಿ ನಿರ್ಮಾಣವಾಗುತ್ತಿದೆ

ಮನುಷ್ಯನ ದುರಾಸೆಯಿಂದ ವಿಶ್ವದಲ್ಲಿ ವಿಷಮ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂದು ಪರಮಪೂಜ್ಯ ಜಗದ್ಗುರುಗಳು ಮಾರ್ಚ್ 14ರಂದು ರಾಮನಗರ ಜಿಲ್ಲೆಯ ಕೈಲಾಂಚ ಹೋಬಳಿಯ ಅವ್ವೇರಹಳ್ಳಿಯ ಶ್ರೀ ರೇವಣಸಿದ್ಧೇಶ್ವರಸ್ವಾಮಿ ದಾಸೋಹ ಮಠದಲ್ಲಿ  ಸಮುದಾಯ ಭವನ ಉದ್ಘಾಟನೆ, ಉಚಿತ ಸಾಮೂಹಿಕ ವಿವಾಹ, ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮಿಗಳ 15ನೇ ವರ್ಷದ ಪಟ್ಟಾಧಿಕಾರ ವರ್ಧಂತಿ ಮಹೋತ್ಸವದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಆಸ್ತಿ, ಹಣ ಹಾಗೂ ಸಾಮ್ರಾಜ್ಯ ವಿಸ್ತರಣೆಗಾಗಿ ಮನುಷ್ಯ ಹೋರಾಟಗಳನ್ನು ನಡೆಸುತ್ತಿದ್ದಾನೆ. ರಷ್ಯಾ–ಉಕ್ರೇನ್  ನಡುವಿನ ಯುದ್ಧದಿಂದಾಗಿ ಪ್ರಪಂಚದಲ್ಲಿ ವಿಷಮ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಮನುಕುಲಕ್ಕೆ ಕಂಟಕವಾಗುವ ವಾತಾವರಣ ಸೃಷ್ಟಿಯಾಗುತ್ತಿದೆ. ಇದೆಲ್ಲದಕ್ಕೂ ಮನುಷ್ಯ ಕಾರಣನಾಗುತ್ತಿದ್ದಾನೆ. ಮನುಷ್ಯನಲ್ಲಿ  ಬೇಕಾದಷ್ಟು ಹಣ, ಆಸ್ತಿ ಇರಬಹುದು. ಆದರೆ ತಾನು, ತನ್ನಿಂದ ಎಂಬ ಭಾವದಿಂದ ಬೀಗುತ್ತಿದ್ದಾನೆ. ದಾಸೋಹ ತಾನು ಎಂಬ ಭಾವನೆಯನ್ನು ಅಳಿಸಿಹಾಕುತ್ತದೆ. ತನ್ನತನವನ್ನು ಮರೆತು ಶರಣಾದಾಗ ಮಾತ್ರ ಭಗವಂತನ ಕೃಪೆಗೆ ಪಾತ್ರನಾಗಲು ಸಾಧ್ಯ. ಗಾಳಿ ನೀರು ಇಲ್ಲದೆ ಮನುಷ್ಯ ಬದುಕಲು ಆಗುವುದಿಲ್ಲ. ಯಾವುದನ್ನು ಮನುಷ್ಯನಿಂದ ಸೃಷ್ಟಿಸಲು ಸಾಧ್ಯವಿಲ್ಲವೊ ಅದು ಭಗವಂತನ ಆಶೀರ್ವಾದದ ರೂಪದಲ್ಲಿ  ದೊರಕಿದೆ ಎಂಬುದನ್ನು ಮರೆಯಬಾರದು. ಭಗವಂತನನ್ನು ಪ್ರಾರ್ಥನೆ ಮಾಡುವ ಹಾಗೂ ಕೃತಜ್ಞತೆ ಅರ್ಪಿಸುವ ದಾಸೋಹ ಭಾವನೆಯನ್ನು ಮನುಷ್ಯ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಭಾರತೀಯ ಪರಂಪರೆಯ ಭಾಗವಾಗಿ ಮಠಮಾನ್ಯಗಳು ತಮ್ಮನ್ನು ತಾವು ಸಮಾಜ ಸೇವೆಗೆ

ಸಮರ್ಪಿಸಿಕೊಂಡು ಕೆಲಸ ಮಾಡುತ್ತಿವೆ. ಭಾರತೀಯ ಪರಂಪರೆಯಲ್ಲಿ ತ್ಯಾಗ ಮತ್ತು ಸೇವೆಗೆ ಬಹಳ ಮಹತ್ವದ ಸ್ಥಾನವಿದೆ. ಸಂಸ್ಕೃತಿ, ಪರಂಪರೆ ಹಾಗೂ ಸೇವಾ ಮನೋಭಾವನೆಗಳ ಮೂಲಕ ಭಾರತ ಪ್ರಪಂಚಕ್ಕೆ ಬೆಳಕು ನೀಡಿದ ಭಾವನೆ ಪಾಶ್ಚಿಮಾತ್ಯ ದೇಶಗಳಲ್ಲಿದೆ. ಮಠಗಳು ಸಮಾಜದ ಸೇವೆಗೆ ತಮ್ಮನ್ನು ತಾವು ಸಮರ್ಪಿಸಿಕೊಂಡು ಈ ಪರಂಪರೆಯನ್ನು ಮುಂದುವರೆಸುತ್ತಿವೆ ಎಂದರು.

ಶ್ರೀ ರೇವಣಸಿದ್ಧೇಶ್ವರಸ್ವಾಮಿ ದಾಸೋಹ ಮಠದ ಶ್ರೀ ಬಸವಲಿಂಗರಾಜ ಸ್ವಾಮಿಗಳು ಶ್ರೀಮಠ ಭಕ್ತರ ಪ್ರೀತಿಯ ದಾಸೋಹಮಠವಾಗಿದೆ. ಭಕ್ತರ ಸಹಕಾರದಿಂದ ಅಭಿವೃದ್ಧಿಯತ್ತ ಸಾಗಿದೆ. ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮಿಗಳು ಸಾಮಾಜಿಕ ಚಿಂತನೆಯುಳ್ಳವರಾಗಿದ್ದು ಅವರ ನೇತೃತ್ವದಲ್ಲಿ ಮಠದ ಅಭಿವೃದ್ಧಿಯಾಗುತ್ತಿದೆ. ಇದಕ್ಕೆ ತಮ್ಮಗಳೆಲ್ಲರ ಸಹಕಾರವಿರಲಿ ಎಂದು ಕೋರಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಇಂದು ಅವಿಭಕ್ತ ಕುಟುಂಬಗಳು ಕಣ್ಮರೆಯಾಗುತ್ತಿವೆ. ವಿವಾಹವಾದ ಕೆಲ ತಿಂಗಳಲ್ಲೆ ನೂತನ ದಂಪತಿಗಳು ಪ್ರತ್ಯೇಕವಾಗಿ ವಾಸಿಸಲು ಬಯಸುತ್ತಾರೆ. ಹೀಗಾಗಿ ಇಂದು ಒಟ್ಟು ಕುಟುಂಬದ ಪರಿಕಲ್ಪನೆ ಮಾಯವಾಗುತ್ತಿದೆ. ಅಲ್ಲದೆ ಸತಿಪತಿಗಳ ನಡುವೆ ಅನ್ಯೋನ್ಯತೆಯ ಕೊರತೆಯುಂಟಾಗುತ್ತಿದೆ. ಹೀಗಾಗಿ ನೂತನವಾಗಿ ವಿವಾಹವಾದ ಸತಿಪತಿಗಳು ಅನ್ಯೋನ್ಯವಾಗಿ ಬಾಳಬೇಕೆಂದು ತಿಳಿಸಿದರು.

ಶಾಸಕರಾದ ಶ್ರೀಮತಿ ಅನಿತಾ ಕುಮಾರಸ್ವಾಮಿ, ಮಾಜಿ ಶಾಸಕರಾದ ಶ್ರೀ ಕೆ. ರಾಜು, ಕೆಆರ್‌ಐಡಿಎಲ್ ಅಧ್ಯಕ್ಷರಾದ ಶ್ರೀ ಎಂ. ರುದ್ರೇಶ್‌ರವರುಗಳು ಮಾತನಾಡಿದರು.

ದೊಡ್ಡಮರಳವಾಡಿ, ಗುರುವಿನಪುರ, ಚಿಕ್ಕಕಲ್ಲುಬಾಳು, ನಾಗಲಾಪುರ, ಬಿಲ್ವಪತ್ರೆ ಮಠ, ಚನ್ನಪಟ್ಟಣ ವಿರಕ್ತಮಠಗಳ ಶ್ರೀಗಳವರು, ರಾಮನಗರ ಪ್ರಾಧಿಕಾರ ಅಧ್ಯಕ್ಷರಾದ ಶ್ರೀ ಎಚ್.ಎಸ್. ಮುರಳೀಧರ್, ಕೆಎಂಎಫ್ ಮಾಜಿ ಅಧ್ಯಕ್ಷರಾದ ಶ್ರೀ ಪಿ. ನಾಗರಾಜು, ಜೆಡಿಎಸ್ ತಾಲ್ಲೂಕು ಅಧ್ಯಕ್ಷರಾದ ಶ್ರೀ ರಾಜಶೇಖರ್, ಮಠದ ಅಭಿವೃದ್ಧಿ ಸೇವಾ ಟ್ರಸ್ಟ್ ಅಧ್ಯಕ್ಷರಾದ ಶ್ರೀ ಕೆ.ಎಸ್. ರಾಜಣ್ಣ, ಸದಸ್ಯರಾದ ಶ್ರೀ ಬಿಡದಿ ಶಿವಸ್ವಾಮಿ, ಶ್ರೀ ಅವ್ವೇರಹಳ್ಳಿ ಶಿವಲಿಂಗಯ್ಯ, ಮಾಜಿ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾಗರಾಜು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಎಂ.ಆರ್. ಶಿವಕುಮಾರಸ್ವಾಮಿ, ಅಖಿಲ ಭಾರತ ವೀರಶೈವ ಮಹಾಸಭಾ ತಾಲ್ಲೂಕು ಅಧ್ಯಕ್ಷರಾದ ಶ್ರೀ ಪೋಲೀಸ್ ಶಂಕರಪ್ಪ ಮೊದಲಾದವರು ಉಪಸ್ಥಿತರಿದ್ದರು.

**ಲೇಖಕರಷ್ಟೆ ಪ್ರಕಾಶಕರೂ ಮುಖ್ಯ**

ಪುಸ್ತಕವೊಂದರ ಪ್ರಕಟಣೆಯಲ್ಲಿ ಲೇಖಕರಷ್ಟೆ ಪ್ರಕಾಶಕರೂ ಮುಖ್ಯ ಎಂದು ಪರಮಪೂಜ್ಯ ಜಗದ್ಗುರುಗಳು ಫೆಬ್ರವರಿ 15ರಂದು ಮೈಸೂರಿನ ಮಹಾರಾಜ ಕಾಲೇಜು

ಶತಮಾನೋತ್ಸವ ಸಭಾಂಗಣದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ನಡೆದ ಪ್ರಕಾಶಕರ ದ್ವಿತೀಯ ಸಮ್ಮೇಳನದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಒಂದು ಪುಸ್ತಕವನ್ನು ಪ್ರಕಟಿಸುವಾಗ ಬರಹದ ಕುರಿತು ಪ್ರಕಾಶಕರ ಗಂಭೀರವಾದ ಆಲೋಚನೆಯೂ ಮುಖ್ಯವಾಗುತ್ತದೆ. ಗಂಭೀರತೆಯಿಂದಾಗಿ ಪುಸ್ತಕ ಚೆನ್ನಾಗಿ ಮೂಡಿಬರುತ್ತದೆ ಎಂದು ಹೇಳಿದರು.

ಸಮ್ಮೇಳನದ ಸರ್ವಾಧ್ಯಕ್ಷರು ಹಾಗೂ ತಳುಕಿನ ವೆಂಕಣ್ಣಯ್ಯ ಗ್ರಂಥಮಾಲೆಯ ಮಾಲೀಕರಾದ ಶ್ರೀ ಟಿ.ಎಸ್. ಛಾಯಾಪತಿಯವರು ಪ್ರಕಾಶನೋದ್ಯಮದ ಪುಸ್ತಕ ನೀತಿಸಂಹಿತೆಯ ಪ್ರಕಾರ ಲೇಖಕರೇ ಮೊದಲಿಗರು. ಒಂದು ಮನೆಗೆ ಆಸ್ತಿಭಾರ ಎಷ್ಟು ಮುಖ್ಯವೋ, ಅದೇ ರೀತಿ ಪುಸ್ತಕೋದ್ಯಮಕ್ಕೆ ಲೇಖಕರು ಅಷ್ಟೇ ಮುಖ್ಯ. ಪುಸ್ತಕೋದ್ಯಮ ಅತ್ಯಂತ ಕಷ್ಟಕರವಾದದ್ದು. ಪ್ರಕಾಶಕರು ಹಾಕಿದ ಬಂಡವಾಳ ವಾಪಸ್ಸು ಪಡೆಯಲು ವರ್ಷಾನುಗಟ್ಟಲೆ ಕಾಯಬೇಕು. ಇದನ್ನು ಮನಗಂಡ ಸರ್ಕಾರ ಸಗಟು ಪುಸ್ತಕ ಖರೀದಿ ಯೋಜನೆ ಕಾರ್ಯರೂಪಕ್ಕೆ ತಂದಿದೆ ಎಂದು ತಿಳಿಸಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಂ.ಎನ್. ನಂದೀಶ್ ಹಂಚೆಯವರು ಸರ್ಕಾರ ಪ್ರಾಧಿಕಾರಗಳಿಗೆ ಸ್ವಾಯತ್ತತೆಯನ್ನು ನೀಡಬೇಕು. ಇಲ್ಲದಿದ್ದರೆ ಅವುಗಳನ್ನು ಸ್ಥಾಪಿಸಿದ ಉದ್ದೇಶಕ್ಕೆ ಬೆಲೆಯೇ ಇಲ್ಲದಂತಾಗುತ್ತದೆ. ಸ್ವಾಯತ್ತತೆ ಇಲ್ಲದೆ ಯಾವುದೇ ಕೆಲಸಕಾರ್ಯಗಳನ್ನು ಪ್ರಾಧಿಕಾರಗಳಲ್ಲಿ ನಿರ್ವಹಿಸುವುದು ಕಷ್ಟ. ಒಂದು ಕೆಲಸ ಆರಂಭಿಸಿದರೆ ಅದಕ್ಕೆ ಅನೇಕ ಅಡ್ಡಿಗಳು ಉಂಟಾಗುತ್ತವೆ. ಪ್ರಕಾಶಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಪ್ರಾಧಿಕಾರದಿಂದ ಹೊಸ ವೆಬ್‌ಸೈಟ್ ತೆರೆಯಲಾಗುವುದು ಎಂದರು.

ಮೇಯರ್ ಶ್ರೀಮತಿ ಸುನಂದ ಪಾಲನೇತ್ರರವರು ಸಮ್ಮೇಳನವನ್ನು ಉದ್ಘಾಟಿಸಿದರು. ರಾಜ್ಯ ಪ್ರಕಾಶಕರ ಸಂಘದ ಅಧ್ಯಕ್ಷರಾದ ಶ್ರೀ ಪ್ರಕಾಶ ಕಂಬತ್ತಹಳ್ಳಿ ಮಾತನಾಡಿದರು. ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಾದ ಡಾ. ಆರ್.ಬಿ. ಗದ್ದಗಿಮಠ ವಂದಿಸಿದರು. ಆಡಳಿತಾಧಿಕಾರಿಗಳಾದ ಶ್ರೀ ಕೆ.ಬಿ. ಕಿರಣ್‌ಸಿಂಗ್ ಸ್ವಾಗತಿಸಿದರು. ಡಾ. ಮಧುಸೂಧನ ಮತ್ತು ತಂಡದವರು ನಾಡಗೀತೆ ಹಾಡಿದರು. ಶ್ರೀ ಸುಮಾ ರಾಜ್‌ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

**ಶಾಂತಿ, ಸಮೃದ್ಧಿಯಿಂದ ಬದುಕುವ ವಾತಾವರಣ ನಿರ್ಮಾಣವಾಗಬೇಕು**

ಶಾಂತಿ, ಸಮೃದ್ಧಿಯಿಂದ ಬದುಕುವ ವಾತಾವರಣ ನಿರ್ಮಾಣವಾಗಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಮಾರ್ಚ್ 19ರಂದು ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ವತಿಯಿಂದ ನಡೆದ 2021ರ ಶಕುಂತಲ ಜಯದೇವ ಶರಣ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಮನುಷ್ಯನ ಜೀವನದಲ್ಲಿ ಯಾವಾಗ ಸಮಸ್ಯೆಗಳು ನಿವಾರಣೆಯಾಗುತ್ತವೆ

ಎಂದು ನಿರೀಕ್ಷಿಸಲು ಸಾಧ್ಯವಿಲ್ಲ. ಕರೋನಾ ಸಮಸ್ಯೆ ದೂರವಾಗುತ್ತಿದೆ ಎಂದುಕೊಳ್ಳುವ ಹೊತ್ತಿಗೆ ಉಕ್ರೇನ್‌ನಲ್ಲಿ ಭೀಕರ ಯುದ್ಧ ಆರಂಭವಾಗಿದೆ. ಅಲ್ಲಿನ ಜನತೆ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಆತಂಕದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಮನುಷ್ಯ ಆತಂಕದಲ್ಲಿ ಬದುಕುವ ಸ್ಥಿತಿ ನಿರ್ಮಾಣವಾಗಬಾರದು. ಶಾಂತಿಯಿಂದ ಜೀವನ ನಡೆಸಲು ಸಾಧ್ಯವಾಗಬೇಕು. ಪ್ರಶಸ್ತಿ ಪುರಸ್ಕೃತರಾದ ಶ್ರೀ ಎಲ್. ಶಿವಲಿಂಗಪ್ಪನವರು ಮನೆಮಾತಾದ ಶಿಲ್ಪಿ ಶ್ರೀ ಸಿದ್ಧಲಿಂಗಸ್ವಾಮಿಯವರ ಪರಂಪರೆಯಿಂದ ಬಂದವರು. ಶಿಲ್ಪಕಲೆ ಮತ್ತು ಚಿತ್ರಕಲೆ ಸೇರಿದಂತೆ ಅನೇಕ ಕಲೆಗಳಲ್ಲಿ ಪ್ರಾವೀಣ್ಯತೆಯನ್ನು ಹೊಂದಿದ್ದಾರೆ. ಮಾತೆ ಬಸವೇಶ್ವರಿಯವರು ಧಾರ್ಮಿಕ ಪ್ರವಚನಗಳೊಂದಿಗೆ ಮನುಷ್ಯರಿಗೆ ಸಂಸ್ಕಾರ ನೀಡುವುದರೊಂದಿಗೆ ಸಸಿಗಳಿಗೂ ಸಂಸ್ಕಾರ ನೀಡಿ ಅಲ್ಲಿ ಔಷಧಿಯ ಸಸಿಗಳನ್ನೂ ಪೋಷಿಸುತ್ತಿದ್ದಾರೆ. ಪರಿಸರದ ಮಧ್ಯೆ ಆಶ್ರಮ ಸ್ಥಾಪಿಸಿ, ಪ್ರವಚನ ಮಾಡುತ್ತಾ ಜನರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಿಲ್ಪ ಹಾಗೂ ಚಿತ್ರಕಲಾವಿದರಾದ ಶ್ರೀ ಎಲ್. ಶಿವಲಿಂಗಪ್ಪ ಹಾಗೂ ಮಾತೆ ಬಸವೇಶ್ವರಿಯವರಿಗೆ 2021ನೇ ಸಾಲಿನ ಶಕುಂತಲಾ ಜಯದೇವ ಶರಣ ಪ್ರಶಸ್ತಿ ಪ್ರದಾನ ಮಾಡಲಾಯಿತು. ದತ್ತಿ ದಾನಿಗಳಾದ ಶ್ರೀಮತಿ ಶಕುಂತಲಾ ಜಯದೇವರವರನ್ನು ಗೌರವಿಸಲಾಯಿತು. ಪ್ರೊ. ಮಲೆಯೂರು ಗುರುಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಅಭಿನಂದನಾ ನುಡಿಗಳನ್ನಾಡಿದರು. ಶ್ರೀ ಮ.ಗು. ಸದಾನಂದಯ್ಯ, ಶ್ರೀ ಹೆಳವರಹುಂಡಿ ಸಿದ್ದಪ್ಪ, ಶ್ರೀ ಎಸ್.ಬಿ. ಅಂಗಡಿ ಉಪಸ್ಥಿತರಿದ್ದರು. ಶ್ರೀ ಸುದರ್ಶಿನಿ ಚಂದ್ರಪ್ಪ, ಶ್ರೀಮತಿ ಕುಸುಮಾ ಮೂರ್ತಿ, ಶ್ರೀಮತಿ ಮೀನಾ ಎಸ್. ಚಟ್ನಿ ಪ್ರಾರ್ಥಿಸಿದರು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ ಸ್ವಾಗತಿಸಿದರು. ಶ್ರೀ ಹಂಪಯ್ಯ ಮತ್ತು ಶ್ರೀ ಬಸವರಾಜ ಕುರವ ಸ್ವಸ್ತಿ ವಾಚನ ಮಾಡಿದರು. ಶ್ರೀ ಜಗದೀಶ್ ಬಿ. ಚಿಕ್ಕಮಠ ದತ್ತಿ ದಾನಿಗಳನ್ನು ಪರಿಚಯಿಸಿದರು. ಶ್ರೀ ಟಿ.ಎಸ್. ಕುಮಾರಸ್ವಾಮಿ ವಂದಿಸಿದರು. ಶ್ರೀಮತಿ ರಾಧಾ ನೀಲಕಂಠ ಕಾರ್ಯಕ್ರಮ ನಿರೂಪಿಸಿದರು.

**ಕಲೆ, ಸಂಸ್ಕೃತಿ ಮತ್ತು ಸಂಗೀತ ಪೋಷಣೆಯಲ್ಲಿ ನಾದಬ್ರಹ್ಮ ಸಂಗೀತ ಸಭಾದ ಪಾತ್ರ ಮಹತ್ವದ್ದು**

ಕಲೆ, ಸಂಸ್ಕೃತಿ ಮತ್ತು ಸಂಗೀತ ಪೋಷಣೆಯಲ್ಲಿ ನಾದಬ್ರಹ್ಮ ಸಂಗೀತ ಸಭಾದ ಪಾತ್ರ ಮಹತ್ವದ್ದು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 20ರಂದು ಶ್ರೀ ನಾದಬ್ರಹ್ಮ ಸಂಗೀತ ಸಭಾದ 66ನೇ ವಾರ್ಷಿಕೋತ್ಸವ ಹಾಗೂ ಡಾ. ಎ.ಕೆ. ಗೋಪಾಲರಾಜನ್ ಸ್ಮರಣಾರ್ಥ ಏರ್ಪಡಿಸಿದ್ದ ಸಂಗೀತ ಕಚೇರಿ ಹಾಗೂ ದಿಗ್ವಿಜಯ ನಾದವಾಣಿ ನಾದಬ್ರಹ್ಮ ವಿದ್ಯಾ ವಾರಿಧಿ ಗೋಟುವಾದ್ಯಂ ನಾರಾಯಣ ಅಯ್ಯಂಗಾರರವರ ಸ್ಮರಣಾರ್ಥ ಚಿತ್ರ ವೀಣಾ ಎನ್. ರವಿಕಿರಣ್‌ರವರು ಸ್ಥಾಪಿಸಿರುವ ನಾದಬ್ರಹ್ಮ ಬಿರುದು ಪ್ರದಾನ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಆಧುನಿಕ ಸಾಮಾಜಿಕ ಮಾಧ್ಯಮಗಳಿಲ್ಲದಿದ್ದ ಕಾಲದಲ್ಲಿ ಸಂಗೀತವನ್ನು ಶ್ರೋತೃಗಳು ನೇರವಾಗಿ ಆಲಿಸಲು

ನಾದಬ್ರಹ್ಮ ಸಂಗೀತ ಸಭಾವು ಒಂದು ಪ್ರಮುಖ ವೇದಿಕೆಯಾಗಿತ್ತು. ಹಲವಾರು ದಶಕಗಳಿಂದ ಈ ಕಲೆಯನ್ನು ಪೋಷಣೆ ಮಾಡುತ್ತಿದೆ. ವಿಶೇಷವಾಗಿ ಅಂತಾರಾಷ್ಟ್ರೀಯ ಮಟ್ಟದ ಕಲಾವಿದರನ್ನು ಇಲ್ಲಿಗೆ ಕರೆಯಿಸಿ ಅವಕಾಶ ಕಲ್ಪಿಸಿ ಮೈಸೂರಿನ ಸಂಗೀತ ಅಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಗಿದೆ. ನಾದಬ್ರಹ್ಮ ಬಿರುದು ಸ್ವೀಕರಿಸಿದ ವಿದ್ವಾನ್ ಡಾ. ಆರ್. ವಿಶ್ವೇಶ್ವರನ್ ವೀಣಾವಾದನದಲ್ಲಿ ಪ್ರಾವೀಣ್ಯತೆ ಹೊಂದಿದ್ದು, ಶಾಸ್ತ್ರಬದ್ಧವಾಗಿ ಸಂಗೀತ ನುಡಿಸುವುದರಲ್ಲಿ ಸಿದ್ಧಹಸ್ತರು ಎಂದು ಶ್ಲಾಘಿಸಿದರು.

ಕಾರ್ಯಕ್ರಮದ ನಂತರ ವಿದ್ವಾನ್ ಆರ್. ವಿಶ್ವೇಶ್ವರನ್ ವೀಣಾವಾದನ ಕಾರ್ಯಕ್ರಮ ನಡೆಸಿಕೊಟ್ಟರು. ಹೊಸ ಕೃತಿ ಹಾಗೂ ಹೊಸ ರಾಗಗಳನ್ನು ಪ್ರಸ್ತುತಪಡಿಸಿದರು. ಸಂಗೀತ ಸಭಾದ ಉಪಾಧ್ಯಕ್ಷರಾದ ಶ್ರೀ ಎಸ್.ಕೆ. ಲಕ್ಷ್ಮೀನಾರಾಯಣ ಬಾಬು, ಜಂಟಿ ಕಾರ್ಯದರ್ಶಿಗಳಾದ ಶ್ರೀ ಆರ್. ಅನಂತರಾಮು, ಶ್ರೀ ಎಂ.ಎಸ್. ರವಿಪ್ರಕಾಶ್ ಉಪಸ್ಥಿತರಿದ್ದರು. ಖಜಾಂಚಿಗಳಾದ ಶ್ರೀ ಡಿ. ಕೀರ್ತಿಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿಗಳಾದ ಶ್ರೀ ಪ್ರಸಾದ ಕಾರ್ಯಕ್ರಮ ನಿರೂಪಿಸಿದರು.

**ಡಾ. ದೇವಕಿ ಮಾಧವ್‌ರವರ ಉತ್ಸಾಹ ಮತ್ತು ಬದ್ಧತೆ ಮೆಚ್ಚುವಂತಹದ್ದು**

ವೈಜ್ಞಾನಿಕ ಪ್ರಾಣಾಯಾಮವನ್ನು ವಿಶ್ವದೆಲ್ಲೆಡೆ ಪರಿಚಯಿಸಲು ಶ್ರಮಿಸುತ್ತಿರುವ ಡಾ. ದೇವಕಿ ಮಾಧವ್‌ರವರ ಉತ್ಸಾಹ ಮತ್ತು ಬದ್ಧತೆ ಮೆಚ್ಚುವಂತಹದ್ದು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 20ರಂದು ಮೈಸೂರು ಕೃಷ್ಣಮೂರ್ತಿ ಪುರಂನ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ವೈಜ್ಞಾನಿಕ ಪ್ರಾಣಾಯಾಮ ಸಂಶೋಧಕರಾದ ಡಾ. ದೇವಕಿ ಮಾಧವ್‌ರವರ 'ಸೈಂಟಿಫಿಕ್ ಪ್ರಾಣಾಯಾಮ' ಮತ್ತು 'ಇಂಫ್ಯಾಕ್ಟ್ ಆಫ್ ಸೈನ್ಸ್ ಆಫ್ ಪ್ರಾಣಾಯಾಮ' ಕೃತಿಗಳ ಬಿಡುಗಡೆಯ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ವೈದ್ಯಕೀಯ ಮತ್ತು ವೈಜ್ಞಾನಿಕ ಭ್ರಾತೃತ್ವ ಸಾರ್ವಜನಿಕರಲ್ಲಿ ಯೋಗದ ಸ್ವೀಕಾರಾರ್ಹತೆಯನ್ನು ಕಂಡುಕೊಳ್ಳಲು ಸೇತುವೆಯನ್ನು ನಿರ್ಮಿಸುತ್ತದೆ. ಈ ಸೇತುವೆಯು ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವ ಯೋಗದ ನಿಖರವಾದ ಅಂಶಗಳನ್ನು ಒಳಗೊಂಡಿರುತ್ತದೆ. ಪ್ರಾಣಾಯಾಮದ ಅಭ್ಯಾಸ ಉತ್ಸಾಹ ಹಾಗು ಶಕ್ತಿವರ್ಧನೆಗೆ ಸಹಕಾರಿ ಎಂದರು.

ಬೆಂಗಳೂರಿನ ಕ್ಯಾನ್ಸರ್ ಕೇರ್ ಇಂಡಿಯಾದ ಡಾ. ರಾಜಶೇಖರ್ ರೆಡ್ಡಿಯವರು ಯೋಗ ಮತ್ತು ಪ್ರಾಣಾಯಾಮ ಎಂದರೆ ಶ್ವಾಸದ ಮೇಲಿನ ನಿಯಂತ್ರಣ ಎಂಬ ತರ್ಕ ಸರಿಯಲ್ಲ. ಪ್ರಾಣಾಯಾಮ ಮೆದುಳಿಗೆ ಸಂಬಂಧಿಸಿದ್ದು. ಜತೆಗೆ ದೇಹದ ಇತರ ಅಂಗಾಂಗಗಳ ಬಲವರ್ಧನೆಗೂ ಸಹಕಾರಿಯಾದುದು ಎಂದು ತಿಳಿಸಿದರು.

ಫ್ಲೋರಿಡಾದ ಅಮೆರಿಕಾಸ್ ಯೋಗ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಯೋಗಿ ದೇವರಾಜ್‌ರವರು ಡಾ. ದೇವಕಿಯವರು ಸೈಂಟಿಫಿಕ್ ಪ್ರಾಣಾಯಾಮ ಕೃತಿ

ರಚಿಸಿದಂತೆ ಯೋಗ ಥೆರಪಿಯ ಬಗ್ಗೆಯೂ ಕೃತಿ ರಚಿಸಬೇಕು. ಇದನ್ನು ಅಮೆರಿಕಾಸ್ ಯೋಗ ವಿಶ್ವವಿದ್ಯಾಲಯ ಪಠ್ಯವಾಗಿ ಮಾಡಿಕೊಳ್ಳಲಿದೆ ಎಂದು ಹೇಳಿದರು.

ಡಾ. ನಾಗಲಕ್ಷ್ಮಿ, ಡಾ. ಲಕ್ಷ್ಮಿ ಶ್ರೀನಿವಾಸ್. ಡಾ. ದೇವಕಿ ಮಾಧವ್, ಶ್ರೀ ವಿಶ್ವನಾಥ್ ಅಯ್ಯರರವರುಗಳು ಮಾತನಾಡಿದರು. ಶ್ರೀಮತಿ ಸೀತಾ ರಮೇಶ್ ಕಾರ್ಯಕ್ರಮ ನಿರೂಪಿಸಿದರು.

**ಶಾಂತಿ-ಸಮೃದ್ಧಿ ನೆಲೆಸಲು ದೇವಾಲಯಗಳ ಸ್ಥಾಪನೆ**

ಗ್ರಾಮದಲ್ಲಿ ಶಾಂತಿ-ಸಮೃದ್ಧಿ ನೆಲೆಸಲು ದೇವಾಲಯಗಳನ್ನು ಸ್ಥಾಪಿಸಲಾಗುತ್ತದೆ ಎಂದು ಪರಮಪೂಜ್ಯ ಜಗದ್ಗುರುಗಳು ಮಾರ್ಚ್ 18ರಂದು ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಟಿ. ಮಾಯಗೌಡನಹಳ್ಳಿಯಲ್ಲಿ ಶ್ರೀ ನಂಜುಂಡೇಶ್ವರಸ್ವಾಮಿ ದೇವಸ್ಥಾನದ ಉದ್ಘಾಟನೆ ಹಾಗೂ ಧಾರ್ಮಿಕ ಸಭೆಯ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಭಾರತದ ಸಂಸ್ಕೃತಿ ಅತ್ಯಂತ ವಿಶಿಷ್ಟವಾದುದು. ಸಮಾಜದಲ್ಲಿ ಶಾಂತಿ ಮತ್ತು ನೆಮ್ಮದಿ ನೆಲೆಸಲು ದೇವರಲ್ಲಿ ಮೊರೆ ಹೋಗಲಾಗುತ್ತದೆ. ದೇವಾಲಯ ಸಂಸ್ಕೃತಿ ಪರಂಪರಾನುಗತವಾಗಿ ಬಂದಿದೆ. ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ದೇವೇಗೌಡರ ಕುಟುಂಬದ ಪ್ರಮುಖರೆಲ್ಲ ಇಲ್ಲಿ ಹಾಜರಿರುವುದು ಅವರ ದೈವಭಕ್ತಿ ಮತ್ತು ಸಂಸ್ಕಾರವನ್ನು ತೋರಿಸುತ್ತದೆ ಎಂದು ಹೇಳಿದರು.

ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರವರು ನಾನು ಯಾವಾಗಲೂ ತಾತ್ತ್ವಿಕ ಹೋರಾಟ ಮಾಡಿದವನು. ನಾನು ಪ್ರಧಾನಮಂತ್ರಿಯಾಗಲು ಮಹಿಳೆಯರು ಹೆಚ್ಚು ಶಕ್ತಿ ನೀಡಿದ್ದರು. ಹಾಗಾಗಿ ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿಯನ್ನು ನೀಡಲಾಯಿತು. ರಾಜ್ಯದ ಜಲವಿವಾದಗಳು ಬಗೆಹರಿಯಲು ಎಲ್ಲರೂ ಸಕಾರಾತ್ಮಕವಾಗಿ ಸ್ಪಂದಿಸಬೇಕಿದೆ ಎಂದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವರು ಮತ್ತು ಶಾಸಕರಾದ ಶ್ರೀ ಹೆಚ್.ಡಿ. ರೇವಣ್ಣ, ಶಾಸಕರಾದ ಶ್ರೀ ಎ.ಟಿ. ರಾಮಸ್ವಾಮಿ, ಸಂಸದರಾದ ಶ್ರೀ ಪ್ರಜ್ವಲ್ ರೇವಣ್ಣ, ಬೆಂಗಳೂರಿನ ಮಾಜಿ ಮೇಯರ್ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ, ಶ್ರೀ ಚಟ್ನಹಳ್ಳಿ ಮಹೇಶ್‌ರವರುಗಳು ಮಾತನಾಡಿದರು.

ಟಿ. ಮಾಯಗೌಡನಹಳ್ಳಿಯ ಶ್ರೀ ಸೋಮಶೇಖರ ಸ್ವಾಮಿಗಳು, ಮಾದಹಳ್ಳಿ, ಬೆಟ್ಟದಪುರ, ಕರ್ಪೂರವಳ್ಳಿ, ದೊಡ್ಡ ಮಠ, ಚಿಲುಮೆ ಮಠ, ತಣ್ಣೀರುಹಳ್ಳಿ ಮಠ, ಕಲ್ಲು ಮಠ, ನುಗ್ಗೆಹಳ್ಳಿ, ಕೆಸವತ್ತೂರು, ಮುಕ್ಕಂದೂರು ಬೆಟ್ಟ ಹಾಗೂ ಅರಕೆರೆ ಮಠಗಳ ಶ್ರೀಗಳು, ಶ್ರೀ ಹೆಚ್.ಎನ್. ದೇವೇಗೌಡ, ಶ್ರೀ ಎಸ್.ಎನ್. ನಂಜಪ್ಪ, ಶ್ರೀ ಎಂ.ಎನ್. ದೇವರಾಜ್‌ರವರು ಉಪಸ್ಥಿತರಿದ್ದರು.

**ಮನುಷ್ಯ ಬದುಕಿನಲ್ಲಿ ಸನ್ಮಾರ್ಗದಲ್ಲಿ ನಡೆಯಲು ಸಂಸ್ಕಾರ ಮುಖ್ಯ**

ಮನುಷ್ಯ ಬದುಕಿನಲ್ಲಿ ಸನ್ಮಾರ್ಗದಲ್ಲಿ ನಡೆಯಲು ಸಂಸ್ಕಾರ ಮುಖ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 20ರಂದು ಹುಣಸೂರು ತಾಲ್ಲೂಕು ಗಾವಡಗೆರೆ ಶ್ರೀ ಗುರುಲಿಂಗಜಂಗಮದೇವರ ಮಠದಲ್ಲಿ ಮೈಸೂರು–ಚಾಮರಾಜನಗರ ಜಿಲ್ಲಾ ವೀರಶೈವ–ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ವತಿಯಿಂದ ನಡೆದ ರಾಜೇಂದ್ರ ಶ್ರೀಗಳವರ 106ನೇ ಜಯಂತಿ, ಪ್ರತಿಭಾ ಪುರಸ್ಕಾರ ಹಾಗೂ ಶಿವದೀಕ್ಷೆ–ಲಿಂಗದೀಕ್ಷೆ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಸಂಸ್ಕಾರದಿಂದ ಮಾತ್ರ ಒಳ್ಳೆಯ ವ್ಯಕ್ತಿತ್ವ ನಿರ್ಮಾಣವಾಗಲು ಸಾಧ್ಯ. ಅಂತಹ ದೀಕ್ಷೆ ಮತ್ತು ಸಂಸ್ಕಾರಗಳನ್ನು ನೀಡುವ ಕಾರ್ಯವನ್ನು ಮಠಮಾನ್ಯಗಳು ಸದಾ ಮಾಡಿಕೊಂಡು ಬರುತ್ತಿವೆ. ಮನುಷ್ಯ ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಲ್ಲ. ಗ್ರಾಮೀಣ ಭಾಗದ ಮಕ್ಕಳಲ್ಲೇ ಹೆಚ್ಚು ವಿದ್ಯಾಭ್ಯಾಸದ ಬಗ್ಗೆ ಆಸಕ್ತಿ ಇರುತ್ತದೆ. ಹಾಗಾಗಿ ಅವರುಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗುತ್ತಿದೆ ಎಂದರು.

ಸಚಿವರಾದ ಶ್ರೀ ಮುರುಗೇಶ್ ಆರ್. ನಿರಾಣಿಯವರು ಸುತ್ತೂರು ಶ್ರೀಮಠ ಸಮಾಜದ ಎಲ್ಲ ವರ್ಗಗಳಿಗೂ ಎಲ್ಲ ಸಮಯದಲ್ಲೂ ತನ್ನ ಸೇವೆಯನ್ನು ನೀಡುತ್ತಾ ಬಂದಿದೆ. ರಾಜೇಂದ್ರ ಶ್ರೀಗಳು ಅಂದು ವಿದ್ಯಾರ್ಥಿಗಳ ದಾಸೋಹಕ್ಕೆ ಸಂಕಷ್ಟ ಬಂದಾಗ ತಮ್ಮ ಚಿನ್ನದ ಕರಡಿಗೆಯನ್ನೆ ಮಾರಿ ದಾಸೋಹ ಮಾಡಿದರು. ಇತ್ತೀಚೆಗೆ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಸುತ್ತೂರು ಶ್ರೀಮಠ–ಗುರುಪರಂಪರೆ ಆನಿಮೇಷನ್ ಚಿತ್ರ ಆಯ್ಕೆಗೊಂಡು ಪ್ರದರ್ಶನವಾಗಿರುವುದು ಹೆಮ್ಮೆಯ ಸಂಗತಿ. ಉತ್ತರ ಕರ್ನಾಟಕದಲ್ಲಿ ಅತಿವೃಷ್ಟಿಯಾದಾಗಲೆಲ್ಲ ಸುತ್ತೂರು ಶ್ರೀಗಳು ನೇತೃತ್ವ ವಹಿಸಿಕೊಂಡು ಅಲ್ಲಿನ ಜನರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿದ್ದಾರೆ. ಈ ಹಿಂದೆ ಅಲ್ಲಿ ಆಶ್ರಯ ಕಳೆದುಕೊಂಡವರಿಗೆ ನೂರಾರು ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ ಎಂದು ಸ್ಮರಿಸಿದರು.

ಮುಡಿಗುಂಡಂ ಶ್ರೀಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಬೆಟ್ಟದಪುರ, ನೀಲಕಂಠಸ್ವಾಮಿ ಮಠ, ಮಾದಹಳ್ಳಿ, ಗಾವಡಗೆರೆ ಮಠಗಳ ಶ್ರೀಗಳು ಮಾತನಾಡಿದರು. ಡಾ. ಎಂ.ಎನ್. ನಂದೀಶ್ ಹಂಚೆ ನುಡಿನಮನ ಸಲ್ಲಿಸಿದರು. ಕೆಸ್ತೂರು ಪಟ್ಟದ ಮಠದ ಶ್ರೀಗಳು ಪ್ರಾರ್ಥಿಸಿದರು. ಹರವೆ ಶ್ರೀಗಳು ಸ್ವಾಗತಿಸಿದರು. ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ಕಾರ್ಯಕ್ರಮ ನಿರೂಪಿಸಿದರು.

**ಜಯಶಂಕರಪ್ಪನವರು ಸಾರ್ಥಕ ಬದುಕು ನಡೆಸಿದವರು**

ಜಯಶಂಕರಪ್ಪನವರು ಸಾರ್ಥಕ ಬದುಕು ನಡೆಸಿದವರು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 22ರಂದು ಟಿ. ನರಸೀಪುರ ತಾಲ್ಲೂಕು ಬೆನಕನಹಳ್ಳಿಯಲ್ಲಿ ಗೌಡರ ಶ್ರೀ ಎಸ್. ಜಯಶಂಕರಪ್ಪನವರ ಸಂಸ್ಮರಣೆ ಹಾಗೂ ಧಾರ್ಮಿಕ ಸಭೆಯ

ದಿವ್ಯಸಾನ್ನಿಧ್ಯ ವಹಿಸಿ ಹೇಳಿದರು. ಜಯಶಂಕರಪ್ಪ ಎಂದೂ ಶ್ರೀಮಂತಿಕೆಯ ಭಾವದಿಂದ ಬೀಗಿದವರಲ್ಲ. ಸಾಮಾನ್ಯ ಕೃಷಿಕರಾಗಿ, ಸಾಮಾನ್ಯ ವ್ಯಕ್ತಿಯಾಗಿ ಸಮಾಜದೊಂದಿಗೆ ಸದಾಕಾಲ ಹೊಂದಿಕೊಂಡು ಪ್ರೀತಿವಿಶ್ವಾಸದಿಂದ ಜೀವನ ಮಾಡಿದರು. ಎಲ್ಲರಿಗೂ ಮಾರ್ಗದರ್ಶಕರಾಗಿದ್ದ ಅವರು ಗ್ರಾಮದಲ್ಲಿ ವಿದ್ಯೋದಯ ಸಂಸ್ಥೆಯನ್ನು ಆರಂಭಿಸಿ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿದರು ಎಂದು ತಿಳಿಸಿದರು.

ಶಾಸಕರಾದ ಶ್ರೀ ಎಂ. ಅಶ್ವಿನ್‌ಕುಮಾರ್‌ರವರು ಮಾರ್ಗದರ್ಶಕರೂ, ಹಿತಚಿಂತಕರೂ ಆಗಿದ್ದ ಜಯಶಂಕರಪ್ಪನವರನ್ನು ಕಳೆದುಕೊಂಡದ್ದು ನನಗೆ ವೈಯಕ್ತಿವಾಗಿ ನಷ್ಟವಾಗಿದೆ. ರಾಜಕೀಯದಲ್ಲೂ ಸಕ್ರಿಯವಾಗಿದ್ದರು. ಮಾನವೀಯತೆಯ ಮೌಲ್ಯದೊಂದಿಗೆ ಅರ್ಥಪೂರ್ಣ ಬದುಕು ನಡೆಸಿದ್ದ ಅವರ ನಡೆ ಇಂದಿನ ಪೀಳಿಗೆಗೆ ಮಾದರಿ ಎಂದು ಸ್ಮರಿಸಿದರು.

ಕನಕಪುರ ಶ್ರೀ ದೇಗುಲಮಠದ ಶ್ರೀ ಚನ್ನಬಸವ ಸ್ವಾಮಿಗಳು ಅಧ್ಯಕ್ಷತೆ ವಹಿಸಿದ್ದರು. ಕುದೇರು ಮಠ, ಕುಂದೂರು ಮಠ, ಮುಡುಕನಪುರ ಮಠಗಳ ಶ್ರೀಗಳು ಮಾತನಾಡಿದರು. ಶ್ರೀ ಕುಮಾರಸ್ವಾಮಿ ಭಾಷಣ ಮಾಡಿದರು. ಕಳ್ಳೀಪುರ, ವೀರಪ್ಪ ಒಡೆಯರಹುಂಡಿ, ಚುಂಚನಹಳ್ಳಿ, ಮೇದಿನಿ, ಬೆನಕನಹಳ್ಳಿಯ ಭಿಕ್ಷದ ಮಠಗಳ ಶ್ರೀಗಳು, ಶ್ರೀ ಕೆ.ಪಿ. ಮಹದೇವಸ್ವಾಮಿ, ಜಯಶಂಕರಪ್ಪನವರ ಪುತ್ರರಾದ ಶ್ರೀ ರಾಜಶೇಖರಮೂರ್ತಿ, ಶ್ರೀ ರವಿ, ಶ್ರೀ ಮಧು ಹಾಗೂ ಕುಟುಂಬದವರು ಉಪಸ್ಥಿತರಿದ್ದರು. ಶ್ರೀ ಶಿವಸ್ವಾಮಿ ಪ್ರಾರ್ಥಿಸಿದರು. ಶ್ರೀ ಬೆ.ಗು. ಶಿವಸ್ವಾಮಿ ಸ್ವಾಗತಿಸಿದರು. ಶ್ರೀಮತಿ ಶೋಭಾ ಗಿರೀಶ್ ಸ್ವರಚಿತ ವಚನಗಾಯನ ಹಾಗೂ ಕಾರ್ಯಕ್ರಮ ನಿರೂಪಿಸಿದರು.

**ಯೋಜನೆ ಮತ್ತು ಸಂಘಟನೆಯಿಂದ ಯಶಸ್ಸು ಸಾಧ್ಯ**

ಸಂಘಟಿತರಾಗಿ ಯೋಜನಾಬದ್ಧವಾಗಿ ಕೆಲಸ ಮಾಡಿದರೆ ಯಶಸ್ಸು ಸಾಧಿಸುವುದು ಅತ್ಯಂತ ಸುಲಭ ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 24ರಂದು ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಮೈ ಬಿಲ್ಡ್–21 ವಸ್ತುಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ತಿಳಿಸಿದರು. ನಮ್ಮ ಚಿಂತನೆಗಳನ್ನು ಯೋಜನಾಬದ್ಧವಾಗಿ ಕಾರ್ಯರೂಪಕ್ಕೆ ತರಬೇಕು. ಸೂಕ್ಷ್ಮವಾಗಿ ಗಮನಿಸಿ ಕಾರ್ಯಕ್ರಮ ರೂಪಿಸಿದರೆ ಸಾಧನೆ ಕಷ್ಟವಲ್ಲ. ಆಧುನಿಕತೆ ಬೆಳೆದಂತೆ ನೂತನ ತಂತ್ರಜ್ಞಾನಗಳಿಗೆ ತೆರೆದುಕೊಳ್ಳುವ ಅಗತ್ಯತೆ ಇದೆ. ದೇಶ ಪ್ರಗತಿಯ ಪಥದಲ್ಲಿರುವುದರಿಂದ ಸವಾಲನ್ನು ಸಮರ್ಥವಾಗಿ ಎದುರಿಸುವ ಸಾಮರ್ಥ್ಯ ಪ್ರತಿಯೊಬ್ಬರಲ್ಲೂ ಇದೆ. ಕೋವಿಡ್‌ನಿಂದಾಗಿ ಬಿಲ್ಡರ್‌ಗಳು, ಕಾಂಕ್ರೀಟ್ ಕೆಲಸ ಮಾಡುವವರು ಸಂಕಷ್ಟಕ್ಕೀಡಾಗಿದ್ದರು. ಎಲ್ಲ ಅಡೆತಡೆಗಳನ್ನು ಮೀರಿ ಬಿಲ್ಡರ್ಸ್ ಅಸೋಸಿಯೇಷನ್ ಕಾರ್ಯಕ್ರಮ ಆಯೋಜಿಸುತ್ತಾ ಬರುತ್ತಿರುವುದರಿಂದಲೇ ಇತರ ರಾಜ್ಯಗಳ ಸಂಸ್ಥೆಗಳಿಗಿಂತ ಮೇಲ್ಮಟ್ಟದಲ್ಲಿ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಮೈಸೂರು ಬಿಐಎ ಅಧ್ಯಕ್ಷರಾದ ಶ್ರೀ ಕೆ. ಅಜಿತ್ ನಾರಾಯಣ್ ಮಾತನಾಡಿದರು. ಗೌರವ ಕಾರ್ಯದರ್ಶಿಗಳಾದ ಶ್ರೀ ಎ.ಎಸ್. ಯೋಗಾನರಸಿಂಹ, ಶ್ರೀ ಎಂ.ಡಿ. ಚಂದ್ರಶೇಖರ್ ಉಪಸ್ಥಿತರಿದ್ದರು. ಮೈಬಿಲ್ಡ್–21 ಅಧ್ಯಕ್ಷರಾದ ಶ್ರೀ ಸತೀಶ್ ಮೋಹನ್ ಸ್ವಾಗತಿಸಿದರು. ಶ್ರೀಮತಿ ಶೀಲಾ ಗುರುದತ್ತ ಪ್ರಾರ್ಥಿಸಿದರು. ಶ್ರೀ ಎಂ.ಡಿ. ಚಂದ್ರಶೇಖರ್ ವಂದಿಸಿದರು. ಶ್ರೀಮತಿ ಶಾಂತಿ ಭಾರದ್ವಾಜ್ ಕಾರ್ಯಕ್ರಮ ನಿರೂಪಿಸಿದರು.

**ಅರಿತು ಬಾಳಿದರೆ ಜೀವನ ಸುಗಮ**

ದಂಪತಿಗಳು ಒಬ್ಬರನ್ನೊಬ್ಬರು ಅರಿತುಕೊಂಡು ಬಾಳಿದರೆ ಸುಗಮವಾದ ಜೀವನ ನಡೆಸಲು ಸಾಧ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 26ರಂದು ಹೆಚ್.ಡಿ. ಕೋಟೆ ತಾಲ್ಲೂಕು ಬಿಡುಗಲು ಪಡುವಲು ಶ್ರೀ ವಿರಕ್ತಮಠದಲ್ಲಿ ಶ್ರೀ ವೀರಭದ್ರೇಶ್ವರ ದೇವಸ್ಥಾನ ಪ್ರವೇಶೋತ್ಸವ, ವಿಗ್ರಹ ಪ್ರತಿಷ್ಠಾಪನೆ, ಸಾಮೂಹಿಕ ವಿವಾಹ ಹಾಗೂ ಧಾರ್ಮಿಕ ಸಭೆಯ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಜೀವನದಲ್ಲಿ ಬರುವ ಕಷ್ಟಗಳನ್ನು ಸಮಾನವಾಗಿ ಸ್ವೀಕರಿಸಬೇಕು. ಸಂಸಾರಕ್ಕೆ ಯಾವುದೇ ಅಡ್ಡಿಯಾಗದಂತೆ ಎಚ್ಚರಿಕೆ ವಹಿಸಿ ಜೀವನ ಸಾಗಿಸಬೇಕು ಎಂದು ಹೇಳಿದರು.

ಶಾಸಕರಾದ ಶ್ರೀ ಅನಿಲ್ ಚಿಕ್ಕಮಾದುರವರು ಸಾಮೂಹಿಕ ವಿವಾಹದಿಂದ ಆರ್ಥಿಕ ಮುಗ್ಗಟ್ಟು ಸುಧಾರಿಸುತ್ತದೆ. ನವದಂಪತಿಗಳು ಉತ್ತಮ ಜೀವನ ಕಟ್ಟಿಕೊಳ್ಳಬಹುದು. ಸುತ್ತೂರು ಶ್ರೀಗಳು ಯಾವುದೇ ಜಾತಿ, ಮತಗಳ ಭೇದವಿಲ್ಲದೆ ತ್ರಿವಿಧ ದಾಸೋಹ ಮಾಡುತ್ತಿದ್ದಾರೆ. ಅದರಂತೆಯೇ ಪಡುವಲು ಮಠಗಳ ಶ್ರೀಗಳು ಸಾಗುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ದಾನಿಗಳಾದ ಶ್ರೀ ಯು.ಎಸ್. ಸಿದ್ಧಲಿಂಗಪ್ಪ ಕುಟುಂಬ ವರ್ಗದವರನ್ನು ಸನ್ಮಾನಿಸಲಾಯಿತು. ದೇವನೂರು, ಪಡುವಲು ಮಠ, ಕುಂದೂರು ಮಠ, ದಡದಹಳ್ಳಿ, ಮಾದಹಳ್ಳಿ ಶ್ರೀಗಳು, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ಶ್ರೀ ಎಂ. ಶಿವಣ್ಣ, ಅರಣ್ಯ ವಸತಿ ಮತ್ತು ವಿಹಾರಧಾಮಗಳ ಅಧ್ಯಕ್ಷರಾದ ಶ್ರೀ ಎಂ. ಅಪ್ಪಣ್ಣ, ಉದ್ಯಮಿಗಳಾದ ಶ್ರೀ ಯು.ಎಸ್. ಶೇಖರ್ ಮಾತನಾಡಿದರು. ವಿಧಾನಪರಿಷತ್ ಸದಸ್ಯರಾದ ಶ್ರೀ ಅಯನೂರು ಮಂಜುನಾಥ್, ಶ್ರೀಮತಿ ಮಂಗಳ ಸೋಮಶೇಖರ್, ಶ್ರೀ ಡಿ.ಜಿ. ಶಿವರಾಜು, ಶ್ರೀ ಮೊತ್ತ ಬಸವರಾಜಪ್ಪ, ಶ್ರೀಮತಿ ರಾಧಿಕ ಶ್ರೀನಾಥ್ ಮೊದಲಾದವರುಗಳು ಉಪಸ್ಥಿತರಿದ್ದರು. ಎಸ್‌ಕೆಜಿ ಗುರುಕುಲ ಶಾಲಾ ಮಕ್ಕಳು ಪ್ರಾರ್ಥಿಸಿದರು. ಶ್ರೀ ಶ್ರೀಕಂಠಸ್ವಾಮಿ ಸ್ವಾಗತಿಸಿದರು. ಶ್ರೀ ಗಣಪತಿ ವಂದಿಸಿದರು.

**ಮಠಗಳು ಸಾವಿರಾರು ವರ್ಷಗಳಿಂದ ಜನಕಲ್ಯಾಣಕ್ಕಾಗಿ ಶ್ರಮಿಸುತ್ತಿವೆ**

ಮಠಗಳು ಸಾವಿರಾರು ವರ್ಷಗಳಿಂದ ಜನಕಲ್ಯಾಣಕ್ಕಾಗಿ ಶ್ರಮಿಸುತ್ತಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 26ರಂದು ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಪಡುಗೂರು ಶ್ರೀ ಅಡವಿ ಮಠದಲ್ಲಿ ನೂತನ ಗದ್ದುಗೆ,

ಅತಿಥಿಗೃಹ ಹಾಗೂ ಹಿರಿಯರ ಮನೆಯ ಉದ್ಘಾಟನೆಯ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಮಠಗಳು ಏಳಿಗೆ ಕಾಣಬೇಕಾದರೆ ಮಠಾಧಿಪತಿಗಳು ಹಾಗೂ ಅನುಯಾಯಿ ಗಳ ನಡುವೆ ಸಮನ್ವಯ ಅಗತ್ಯ. ಆರ್ಥಿಕ ಸದೃಢತೆ ಇರಲಿ, ಇಲ್ಲದಿರಲಿ ಬಂದ ಜನರಿಗೆ ಪ್ರಸಾದ ನೀಡಿಯೆ ಕಳುಹಿಸುವ ಸಂಪ್ರದಾಯವನ್ನು ವೀರಶೈವ ಲಿಂಗಾಯತ ಮಠಗಳು ಪಾಲಿಸಿಕೊಂಡು ಬಂದಿವೆ. ಮಠಾಧಿಪತಿಗಳಾಗಿ ಕೆಲಸ ಮಾಡುವುದು ಕತ್ತಿಯ ಅಲಗಿನ ಮೇಲೆ ನಡೆದಂತೆ. ರಾಜೇಂದ್ರ ಶ್ರೀಗಳು ಹಾಗೂ ಪಡುಗೂರು ಮಠದ ಶಿವಕುಮಾರ ಶ್ರೀಗಳ ನಡುವೆ ಅವಿನಾಭಾವ ಸಂಬಂಧವಿತ್ತು. ಅದು ಈಗಲೂ ಮುಂದುವರೆದುಕೊಂಡು ಬಂದಿದೆ ಎಂದು ಹೇಳಿದರು.

ಪಡುಗೂರು ಮಠದ ಶ್ರೀ ಶಿವಲಿಂಗೇಂದ್ರ ಸ್ವಾಮಿಗಳು ಹಿಂದೆ ಮಠದಲ್ಲಿ ಓದಿದ ವಿದ್ಯಾರ್ಥಿಗಳು ಇಂದು ಉತ್ತಮ ಸ್ಥಾನಗಳಲ್ಲಿದ್ದಾರೆ. ಇಂದಿಗೂ ಅವರು ಶ್ರೀಮಠವನ್ನು ನೆನೆಯುತ್ತಾರೆ. ಬಡ ವೃದ್ಧರಿಗೆ ಅನುಕೂಲವಾಗಲೆಂದು ವೃದ್ಧಾಶ್ರಮವನ್ನು ಸ್ಥಾಪಿಸಲಾಗಿದೆ ಎಂದರು. ನಿರ್ಮಾಣಕಾರ್ಯದಲ್ಲಿ ಸಹಕರಿಸಿದ ಎಲ್ಲರನ್ನೂ ಸ್ಮರಿಸಿದರು.

ಶಾಸಕರಾದ ಶ್ರೀ ಸಿ.ಎಸ್. ನಿರಂಜನಕುಮಾರ್‌ರವರು ಮಠಗಳು ಸಮಾಜದ ಸ್ವಾಸ್ಥ್ಯಕ್ಕಾಗಿ ಶ್ರಮಿಸುತ್ತಿವೆ. ಅಡವಿ ಮಠ ಸ್ವಾತಂತ್ರ್ಯಪೂರ್ವದಲ್ಲೆ ಶಿಕ್ಷಣಕ್ಕೆ ಒತ್ತು ನೀಡಿದೆ. ಸದ್ಯದಲ್ಲೆ ಗುಂಡ್ಲುಪೇಟೆಯಲ್ಲಿ ಬಸವ ಭವನವನ್ನು ನಿರ್ಮಿಸಲಾಗುವುದು ಎಂದು ತಿಳಿಸಿದರು.

ಕುಂದೂರು ಮಠದ ಡಾ. ಶರತ್‌ಚಂದ್ರ ಸ್ವಾಮಿಗಳು, ಮಾಜಿ ಶಾಸಕರಾದ ಶ್ರೀ ಕೆ.ಆರ್. ಮಲ್ಲಿಕಾರ್ಜುನಪ್ಪ, ಸಂಗಮ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಹೆಚ್.ಎಂ. ಗಣೇಶ್ ಪ್ರಸಾದ್, ಶ್ರೀ ಎಸ್. ಶಿವಬಸಪ್ಪ, ಶ್ರೀ ಎಂ.ಪಿ. ಸುನೀಲ್, ಶ್ರೀ ಕೆ.ಎಸ್. ಮಹೇಶ್‌ರವರುಗಳು ಮಾತನಾಡಿದರು. ಶ್ರೀ ಹೆಚ್.ಎಸ್. ನಂಜಪ್ಪ ಶ್ರೀಮಠದ ವೆಬ್‌ಸೈಟ್ ಉದ್ಘಾಟಿಸಿದರು. ಶ್ರೀ ನಂದೀಶ್ ಮೂಡ್ಲುಪುರ, ಶ್ರೀ ಎಸ್. ಶಿವಬಸಪ್ಪ, ಶ್ರೀ ಎಂ.ಪಿ. ಸುನೀಲ್, ಶ್ರೀ ಕೆ.ಎಸ್. ಮಹೇಶ್ ಉಪಸ್ಥಿತರಿದ್ದರು. ಶ್ರೀ ಮಹದೇವಸ್ವಾಮಿ ಪ್ರಾರ್ಥಿಸಿದರು. ಶ್ರೀ ಶಾಂತಮಲ್ಲಪ್ಪ ಸ್ವಾಗತಿಸಿದರು. ಶ್ರೀ ಮ.ಗು. ಬಸವಣ್ಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಎಂ. ಪ್ರಕಾಶ್ ವಂದಿಸಿದರು. ಶ್ರೀ ಪಿ.ಎಸ್. ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

**ಜಾತ್ಯತೀತರಾಗಿಯೂ ನಮ್ಮ ಧರ್ಮ, ಆಚರಣೆಗಳನ್ನು ಪಾಲಿಸಬೇಕು**

ಜಾತ್ಯತೀತರಾದರೂ ನಮ್ಮ ಧರ್ಮ, ಆಚರಣೆಗಳನ್ನು ಬಿಡಿ ಎಂದು ಸಂವಿಧಾನದಲ್ಲಿ ಹೇಳಿಲ್ಲ ಎಂದು ಕರ್ನಾಟಕ ಕಾನೂನು ಆಯೋಗದ ಅಧ್ಯಕ್ಷರು ಹಾಗೂ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಎಸ್.ಆರ್. ಬನ್ನೂರಮಠರವರು ತಿಳಿಸಿದರು.

ಮಾರ್ಚ್ 27ರಂದು ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜಿಲ್ಲಾ ಕಾನೂನು ಘಟಕವನ್ನು ಉದ್ಘಾಟಿಸಿ ಮಾತನಾಡುತ್ತಾ ಧರ್ಮದ ಉಳಿವಿಗಾಗಿ ನಮ್ಮಿಂದ ಸಾಧ್ಯವಾದಷ್ಟೂ ಪ್ರಯತ್ನ ಮಾಡಬೇಕು. ಸಂವಿಧಾನದ ಪ್ರಕಾರ ನಾವೆಲ್ಲರೂ ಭಾರತೀಯರು. ಸಮುದಾಯದ ಒಳಿತಿಗೆ ಮಹಾಸಭಾದಂತಹ ಘಟಕಗಳ ಅವಶ್ಯಕತೆಯಿದೆ ಎಂದು ಹೇಳಿದರು.

ರಾಜ್ಯ ಮಟ್ಟದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ ಅಧ್ಯಕ್ಷರಾದ ಗೌ.ನ್ಯಾ. ಶ್ರೀ ಸುಭಾಷ್ ಬಿ. ಆಡಿರವರು ಬಸವ ತತ್ತ್ವ ಸಿದ್ಧಾಂತದ ಸಮಾನತೆಯ ಅಂಶಗಳು ಮೈಸೂರು ಭಾಗದಲ್ಲಿ ಹೆಚ್ಚಿವೆ. ಸಮಾಜದಲ್ಲಿ ನ್ಯಾಯ ಸಿಗದೆ ನೊಂದವರಿಗೆ ಕಾನೂನು ಅರಿವು ಮೂಡಿಸುವುದಕ್ಕಾಗಿ ಇಂತಹ ಕಾನೂನು ಘಟಕಗಳ ಅಗತ್ಯತೆಯಿದೆ. ಇಂತಹ ಘಟಕಗಳು ಹೆಚ್ಚು ಸ್ಥಾಪನೆಯಾಗಬೇಕು ಎಂದರು.

ಮಹಾಸಭಾದ ಪ್ರಧಾನ ಕಾರ್ಯದರ್ಶಿಗಳು, ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಈಶ್ವರ ಬಿ. ಖಂಡ್ರೆಯವರು ವೀರಶೈವ ಲಿಂಗಾಯತ ಸಮುದಾಯವನ್ನು ಕೇಂದ್ರ ಒಬಿಸಿ ಪಟ್ಟಿಗೆ ಸೇರಿಸಲು ಬಹಳಷ್ಟು ದಿನಗಳಿಂದ ಪ್ರಯತ್ನ ನಡೆದಿದೆ. ಸಮುದಾಯದ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಸ್ಥಾಪನೆಯಾಗಬೇಕು ಎನ್ನುವ ಬೇಡಿಕೆ ಈಡೇರಿದೆ. ಸಮುದಾಯದಲ್ಲಿ ಒಗ್ಗಟ್ಟು ಇಲ್ಲದ ಕಾರಣ ಉದ್ಯೋಗದಲ್ಲಿ ನ್ಯಾಯ ದೊರೆತಿಲ್ಲ. ಹೀಗಾಗಿ ಒಗ್ಗಟ್ಟು ಮೂಡಿಸುವುದು ಅವಶ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಚಂದ್ರಶೇಖರ್ ಆಲಬೂರ್, ಶ್ರೀ ಬಿ.ಆರ್. ಚಂದ್ರಮೌಳಿ, ಶ್ರೀಮತಿ ಜೆ. ಚೈತ್ರಾರವರುಗಳನ್ನು ಸನ್ಮಾನಿಸಲಾಯಿತು. ಕರ್ನಾಟಕ ವಕೀಲರ ಪರಿಷತ್‌ನ ಮಾಜಿ ಅಧ್ಯಕ್ಷರಾದ ಶ್ರೀ ಸಿ.ಎಂ. ಜಗದೀಶ್, ಮಹಾಸಭಾದ ಕೋಶಾಧ್ಯಕ್ಷರಾದ ಶ್ರೀ ವರುಣ ಮಹೇಶ್, ಜಿಲ್ಲಾಧ್ಯಕ್ಷರಾದ ಶ್ರೀ ಶಿವಮೂರ್ತಿ ಕಾನ್ಯ, ಶ್ರೀ ಟಿ.ಎಸ್. ಲೋಕೇಶ್ ಮೊದಲಾದವರು ಉಪಸ್ಥಿತರಿದ್ದರು. ಕು. ಧನ್ಯಾ ವಡ್ಡಗೆರೆ ಪ್ರಾರ್ಥಿಸಿದರು. ಶ್ರೀ ಸಿ.ಎಂ. ಜಗದೀಶ್ ಸ್ವಾಗತಿಸಿದರು. ಶ್ರೀ ಕೆ.ಎಸ್. ಮಹದೇವಪ್ರಸಾದ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ರುದ್ರಮೂರ್ತಿ ವಂದಿಸಿದರು. ಶ್ರೀ ಬಿ.ಆರ್. ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.

**ಮಹಾತ್ಮರ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು**

ಮಹಾತ್ಮರ ತತ್ತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಮಾರ್ಚ್ 28ರಂದು ಸರಗೂರು ತಾಲ್ಲೂಕು ಮನುಗನಹಳ್ಳಿಯಲ್ಲಿ ಶ್ರೀ ಬಸವೇಶ್ವರ ದೇವಸ್ಥಾನದ ನೂತನ ಕಟ್ಟಡದ ಉದ್ಘಾಟನೆ, ಶ್ರೀ ಬಸವ ಮೂರ್ತಿಯ ಪ್ರತಿಷ್ಠಾಪನೆ ಹಾಗೂ ನೂತನ ಗೋಪುರ ಕಲಶಾರೋಹಣ ಮತ್ತು ಧಾರ್ಮಿಕ ಸಭೆಯ ದಿವ್ಯಸಾನ್ನಿಧ್ಯ ವಹಿಸಿ ಹೇಳಿದರು.

ಶರಣರು, ಸಂತರುಗಳು ಹಾಕಿಕೊಟ್ಟ ಆದರ್ಶದ ಮಾರ್ಗದಲ್ಲಿ ಸಾಗಬೇಕು. ಕೇವಲ ಅವರ ನುಡಿಗಳನ್ನು ಆಲಿಸುವುದು ಮಾತ್ರವಲ್ಲ, ಜೀವನದಲ್ಲಿ ಅಳವಡಿಸಿಕೊಂಡು ಪಾಲಿಸಬೇಕು. ಬಸವಣ್ಣನವರು ತಮ್ಮ ವಚನಗಳಲ್ಲಿ ಧಾರ್ಮಿಕ ವಿಚಾರಗಳನ್ನು ಸಾಕಷ್ಟು ವಿವರಿಸಿದ್ದಾರೆ. ಅವೆಲ್ಲವನ್ನು ನಾವು ತಿಳಿದು ಬಾಳಬೇಕು ಎಂದು ತಿಳಿಸಿದರು.

ಶ್ರೀ ಈಶ್ವರ ಬಿ. ಖಂಡ್ರೆಯವರು ಉತ್ತಮ ಸಮಾಜ ನಿರ್ಮಾಣಕ್ಕಾಗಿ ಎಲ್ಲರೂ ಬಸವಾದಿ ಶರಣರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು. ದೇವಸ್ಥಾನಗಳು ಸಂಸ್ಕೃತಿಯ ಪ್ರತೀಕವಾಗುವ ಜೊತೆಗೆ ಧರ್ಮದ ಶಕ್ತಿ ಕೇಂದ್ರಗಳಾಗಿವೆ. ಅವುಗಳ ಪಾವಿತ್ರ್ಯತೆಯನ್ನು ಕಾಪಾಡಿ, ದೇವಾಲಯಗಳನ್ನು ಉಳಿಸಬೇಕು ಎಂದರು.

ಶಾಸಕರಾದ ಶ್ರೀ ಅನಿಲ್ ಚಿಕ್ಕಮಾದುರವರು ಮಾತನಾಡಿದರು. ಸೋಮಹಳ್ಳಿ, ಕುದೇರುಮಠ, ಕಂತೆ ಮಹದೇಶ್ವರ ಬೆಟ್ಟ, ಸಂಗಮದ ಮಠಗಳ ಶ್ರೀಗಳು, ಅರಣ್ಯ ವಸತಿ ಮತ್ತು ವಿಹಾರಧಾಮಗಳ ಅಧ್ಯಕ್ಷರಾದ ಶ್ರೀ ಎಂ. ಅಪ್ಪಣ್ಣ, ಶ್ರೀ ರವಿಕುಮಾರ್, ಶ್ರೀ ಜಯಪ್ರಕಾಶ ಚಿಕ್ಕಣ್ಣ, ಶ್ರೀ ಕಾನ್ಯ ಶಿವಮೂರ್ತಿ, ಶ್ರೀ ಡಿ.ಜಿ. ಶಿವರಾಜಪ್ಪ, ಶ್ರೀ ಮೊತ್ತ ಬಸವರಾಜಪ್ಪ, ಶ್ರೀ ಭಾರತಿ ಗುರುಸ್ವಾಮಿ, ಶ್ರೀಮತಿ ಭಾಗ್ಯ ಲಿಂಗರಾಜು ಮೊದಲಾದವರುಗಳು ಉಪಸ್ಥಿತರಿದ್ದರು.

**ಸಂಕಲ್ಪಶಕ್ತಿಯಿದ್ದರೆ ಏನನ್ನಾದರೂ ಸಾಧಿಸಬಹುದು**

ಸಂಕಲ್ಪಶಕ್ತಿಯಿದ್ದರೆ ಏನನ್ನಾದರೂ ಸಾಧಿಸಬಹುದು ಎಂದು ಪರಮಪೂಜ್ಯ ಜಗದ್ಗುರುಗಳು ಮಾರ್ಚ್ 31ರಂದು ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕು ಗೌಡಹಳ್ಳಿಯ ಶ್ರೀ ವಿರಕ್ತಮಠದ ಬಳ್ಳಾರಿ ನಿ.ಪ್ರ. ಶ್ರೀ ಮಹಾಂತ ಸ್ವಾಮಿಗಳು ಮತ್ತು ಶ್ರೀ ಸಿದ್ಧಲಿಂಗ ಸ್ವಾಮಿಗಳವರ ಗದ್ದುಗೆಗಳಿಗೆ ಲಿಂಗ ಪ್ರತಿಷ್ಠಾಪನೆ, ಬಸವಭವನ, ಬಸವದ್ವಾರ, ಪ್ರಸಾದನಿಲಯ ಮತ್ತು ಮಠದ ನೂತನ ಕಟ್ಟಡ ಉದ್ಘಾಟನೆಯ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಜೀವನದಲ್ಲಿ ಅನೇಕ ಸಂಕಷ್ಟಗಳು ಎದುರಾಗುತ್ತವೆ. ಆದರೆ ಸಂಕಲ್ಪಶಕ್ತಿಯನ್ನು ಕಳೆದುಕೊಳ್ಳಬಾರದು. ಶ್ರೀ ಯಡಿಯೂರಪ್ಪನವರು ಮುಖ್ಯಮಂತ್ರಿ ಗಳಾಗಿದ್ದಾಗ ಸ್ವತಃ ಜವಾಬ್ದಾರಿಯನ್ನು ಹೊತ್ತು ಈ ಭಾಗದ ಕೆರೆಗಳಿಗೆ ನೀರು ತುಂಬಿಸಿದರು. ಮಠಗಳು ಶಾಂತಿ, ನೆಮ್ಮದಿ ನೀಡುವ ಕೇಂದ್ರಗಳು. ಭಾರತದ ಹಳ್ಳಿಹಳ್ಳಿ ಗಳಲ್ಲಿ ಮಠಗಳಿವೆ. ಮಠಗಳಿಂದ ಭೌತಿಕ ಸಂಪತ್ತು ದೊರೆಯುವುದಿಲ್ಲ. ಆದರೆ ಎಲ್ಲೂ ದೊರೆಯದ ಮಾನಸಿಕ ನೆಮ್ಮದಿ ದೊರೆಯುತ್ತದೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗೆ ಹೆಚ್ಚು ವಿದ್ಯಾಭ್ಯಾಸ ನೀಡಬೇಕು. ಅವರ ಆಸಕ್ತಿಗಳಿಗೆ ಆದ್ಯತೆ ನೀಡಬೇಕು. ಅವರು ಸ್ವತಂತ್ರವಾಗಿ ಬದುಕಲು ಸ್ವಾವಲಂಬಿಗಳಾಗುವಂತೆ ಮಾಡಬೇಕು. ರೈತರ ಸ್ಥಿತಿ ಈಗ ಮೊದಲಿಗಿಂತ ಸುಧಾರಿಸಿದೆ. ಸರ್ಕಾರ ಒದಗಿಸಿರುವ ಎಲ್ಲ

ಅನುಕೂಲಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು. ಈ ಗ್ರಾಮದ ಜನರು ನನ್ನ ಬಗ್ಗೆ ತೋರಿದ ಪ್ರೀತಿ, ವಿಶ್ವಾಸಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಸ್ಮರಿಸಿದರು.

ವಾಟಾಳು, ಕನಕಪುರ, ಮರಳೆಗವಿ ಮಠ, ಗೌಡಹಳ್ಳಿ ಮಠಗಳ ಶ್ರೀಗಳು, ಶಾಸಕರಾದ ಎನ್. ಮಹೇಶ್ ಮಾತನಾಡಿದರು. ಕುಂದೂರು ಮಠದ ಡಾ. ಶರತ್‌ಚಂದ್ರ ಸ್ವಾಮಿಗಳು ಮತ್ತು ಮುಡುಕನಪುರ ಶ್ರೀಗಳು ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ವಾಟಾಳು ಮಠದ ಶ್ರೀ ಬಸವಲಿಂಗ ಸ್ವಾಮಿಗಳು, ಬಸವೇಶ್ವರರು ಹಾಗೂ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ ಭಾವಚಿತ್ರಗಳನ್ನು ಅನಾವರಣಗೊಳಿಸಲಾಯಿತು. ಶ್ರೀ ನೀಲಕಂಠಸ್ವಾಮಿ ಮಠ, ಮಾದಹಳ್ಳಿ, ಚಾಮರಾಜನಗರ, ಮುಡಿಗುಂಡ, ಕೆಸ್ತೂರು, ಕುಂದೂರು, ಚಿಲಕವಾಡಿ, ಕುಂದೂರುಬೆಟ್ಟ, ಚುಂಚನಹಳ್ಳಿ, ಹಂಡ್ರಕಳ್ಳಿ ಮಠಗಳ ಶ್ರೀಗಳು, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ, ಶ್ರೀ ನಂದೀಶ್ ಮೂಡ್ಲುಪುರ, ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ, ಶ್ರೀ ಪುಟ್ಟಸುಬ್ಬಪ್ಪ, ಶ್ರೀ ಹೆಚ್.ಎಸ್. ಮಹದೇವಸ್ವಾಮಿ, ಶ್ರೀ ವೀರಭದ್ರಸ್ವಾಮಿ, ಶ್ರೀ ಪಿ. ವೀರಭದ್ರಪ್ಪ ಮೊದಲಾದವರುಗಳು ಉಪಸ್ಥಿತರಿದ್ದರು. ಕು. ರಂಜಿತಾ ಕಾರ್ಯಕ್ರಮ ನಿರೂಪಿಸಿದರು.

### ಸಿದ್ಧಗಂಗಾ ಶ್ರೀಗಳು ಬದುಕಿದ್ದಾಗಲೇ ದಂತಕಥೆಯಾದವರು

ಸಿದ್ಧಗಂಗಾ ಶ್ರೀಗಳು ಬದುಕಿದ್ದಾಗಲೇ ದಂತಕಥೆಯಾದವರು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 1ರಂದು ತುಮಕೂರು ಶ್ರೀ ಸಿದ್ಧಗಂಗಾ ಮಠದ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 115ನೇ ಜಯಂತಿ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಶ್ರೀಗಳವರ ಬದುಕು ಆಶ್ಚರ್ಯಕರವಾದುದು. ಅಪರೂಪದ ದಿವ್ಯಚೇತನ. ತಮ್ಮ ಬದುಕನ್ನು ಸಂಪೂರ್ಣವಾಗಿ ಸಮಾಜಕ್ಕಾಗಿ ಧಾರೆಯೆರೆದವರು. ಹಳೆಬೇರು ಹೊಸಚಿಗುರು ಎಂದು ಡಿವಿಜಿಯವರು ಹೇಳಿದಂತೆ ಪರಂಪರೆಗೆ ಯಾವುದೇ ಧಕ್ಕೆ ಬರದಂತೆ ಆಧುನಿಕತೆಯನ್ನೂ ಬೆಂಬಲಿಸಿದರು. ವಿದ್ಯಾರ್ಥಿಗಳಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಹತ್ತು ಸಾವಿರ ಮಕ್ಕಳಿಗೆ ದಾಸೋಹವನ್ನು ಮಾಡುವುದರ ಮೂಲಕ ಮಾತೃವಾತ್ಸಲ್ಯದ ಸಿಂಚನವನ್ನು ನೀಡಿದವರು. ಪೂಜ್ಯರು ಭೌತಿಕವಾಗಿ ಇಂದು ನಮ್ಮೊಂದಿಗೆ ಇಲ್ಲದಿದ್ದರೂ ಅವರು ಕೊಟ್ಟಂತಹ ಕೊಡುಗೆ ಅಪೂರ್ವವಾದುದು. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಸಹ ಅವರು ಹಾಕಿಕೊಟ್ಟ ಮಾರ್ಗದಲ್ಲೇ ನಡೆಯುತ್ತಿದ್ದಾರೆ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಪೂಜ್ಯರು ತಮ್ಮ ಬದುಕನ್ನು ಸಮಾಜದ ಉದ್ಧಾರಕ್ಕಾಗಿ ಗಂಧದಂತೆ ತೇಯ್ದುಕೊಂಡರು. ಸದಾ ಅವರ ಮಾರ್ಗದರ್ಶನದಂತೆಯೇ ನಡೆಯಲಾಗುತ್ತಿದೆ. ಸುತ್ತೂರು ಮತ್ತು ಸಿದ್ಧಗಂಗೆ ಈ

ಸಮಾಜದ ಎರಡು ಕಣ್ಣುಗಳು. ಸಮಾಜಕ್ಕೆ ಹೆಚ್ಚಿನ ಕೊಡುಗೆ ನೀಡುವಲ್ಲಿ ಇವುಗಳ ಪಾತ್ರ ಬಹಳ ಮಹತ್ವದ್ದು ಎಂದು ತಿಳಿಸಿದರು.

ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಶ್ರೀ ಅಮಿತ್ ಶಾರವರು ಸಾವಿರಾರು ಮಕ್ಕಳಿಗೆ ಅನ್ನ, ಅಕ್ಷರ, ಆಶ್ರಯ ನೀಡಿ ಬದುಕು ಕಟ್ಟಿಕೊಟ್ಟ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ಎಂದೆಂದಿಗೂ ಅಮರರಾಗಿದ್ದಾರೆ. ಬಸವಣ್ಣನವರ ಹಾದಿಯಲ್ಲಿ ನಡೆದು ಆದರ್ಶವಾಗಿದ್ದಾರೆ. ಅವರು ಮಹಾನ್‌ತಪಸ್ವಿ ಮತ್ತು ಕರ್ಮಯೋಗಿ ಯಾಗಿದ್ದರಿಂದಲೇ ಇಂತಹ ಆಧ್ಯಾತ್ಮಿಕ ಸ್ಥಳ ನಿರ್ಮಾಣವಾಗಿದೆ. ನಾನು ಪ್ರತಿ ಬಾರಿ ಇಲ್ಲಿ ಬಂದಾಗಲೂ ಚೈತನ್ಯ ಮತ್ತು ಶಕ್ತಿಯನ್ನು ತುಂಬಿಕೊಂಡು ಹೋಗುತ್ತೇನೆ. ಜೀವನವನ್ನು ಹೇಗೆ ಉತ್ತಮ ರೀತಿಯಲ್ಲಿ ನಡೆಸಬೇಕು ಎಂಬುದಕ್ಕೆ ಶ್ರೀಗಳು ಉದಾಹರಣೆ. ಅವರ ಜೀವನ ನಮ್ಮೆಲ್ಲರಿಗೂ ಪ್ರೇರಣೆ ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಶ್ರೀಗಳ ನಡೆ ಮತ್ತು ನುಡಿ ನಮಗೆ ಸದಾ ಪ್ರೇರಣೆ. ಸಾಧಕರಿಗೆ ಅಂತ್ಯವೆಂಬುದಿಲ್ಲ. ನಿತ್ಯ ನಿರಂತರ ಜಂಗಮಚೇತನವಾಗಿ ಅವರು ಬದುಕುತ್ತಾರೆ. ಈ ನೆಲದಲ್ಲಿ ಶಾಂತಿ ಮತ್ತು ಸ್ಫೂರ್ತಿ ಇದೆ. ಪೂಜ್ಯರು ಪ್ರತಿಯೊಬ್ಬರ ಬದುಕಿಗೂ ದಾರಿದೀಪವಾಗಿದ್ದಾರೆ ಎಂದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಪೂಜ್ಯರ ಜೀವನ ಚರಿತ್ರೆಯನ್ನು ಪಠ್ಯಪುಸ್ತಕದಲ್ಲಿ ಅಳವಡಿಸಬೇಕು. ಜಾತಿ, ಮತ ಭೇದವೆಣಿಸದೇ ಶ್ರೀಗಳು ವಿದ್ಯಾರ್ಥಿಗಳಿಗೆ ದಾಸೋಹ ಮಾಡಿದ್ದಾರೆ. ಅಂಥವರ ಜೀವನ ಚರಿತ್ರೆಯನ್ನು ಪಠ್ಯದಲ್ಲಿ ಅಳವಡಿಸಿದರೆ ಮುಂದಿನ ಜನಾಂಗಕ್ಕೆ ಸ್ಫೂರ್ತಿ ತುಂಬಿದಂತಾಗುತ್ತದೆ ಎಂದು ತಿಳಿಸಿದರು.

ಕೇಂದ್ರ ಕಲ್ಲಿದ್ದಲು, ಗಣಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಪ್ರಹ್ಲಾದ್ ಜೋಶಿಯವರು ಶಿವಕುಮಾರ ಶ್ರೀಗಳು ಜಗತ್ತು ಕಂಡ ಅಚ್ಚರಿ. ಶೂನ್ಯದಿಂದ ಭವ್ಯವಾದ ಮತ್ತು ದಿವ್ಯವಾದ ಸೃಷ್ಟಿಯನ್ನು ನಿರ್ಮಾಣ ಮಾಡಿದ್ದಾರೆ ಎಂದು ಹೇಳಿದರು.

ಕೇಂದ್ರ ಸಚಿವರಾದ ಶ್ರೀ ಭಗವಂತ ಖೂಬಾ, ಮಾಜಿ ಉಪಮುಖ್ಯಮಂತ್ರಿಗಳಾದ ಶ್ರೀ ಜಿ. ಪರಮೇಶ್ವರ್‌ರವರು ಮಾತನಾಡಿದರು. ಸಚಿವರುಗಳಾದ ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ಅರಗ ಜ್ಞಾನೇಂದ್ರ, ಶ್ರೀ ಬಿ.ಸಿ. ನಾಗೇಶ್, ಸಂಸದರಾದ ಶ್ರೀ ಜಿ.ಎಸ್. ಬಸವರಾಜು, ಶಾಸಕರುಗಳಾದ ಶ್ರೀ ಜಿ.ಬಿ. ಜ್ಯೋತಿ ಗಣೇಶ್, ಶ್ರೀ ಡಿ.ಸಿ. ಗೌರಿಶಂಕರ್, ಮಹಾಪೌರ ರಾದ ಶ್ರೀ ಬಿ.ಜಿ. ಕೃಷ್ಣಪ್ಪನವರು ಉಪಸ್ಥಿತರಿದ್ದರು. ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಶ್ರೀ ಜಿ.ಎಸ್. ರೇಣುಕಪ್ಪ ವಂದಿಸಿದರು. ಡಾ. ಸಿ. ಸೋಮಶೇಖರ್ ಕಾರ್ಯಕ್ರಮ ನಿರೂಪಿಸಿದರು.

**ಸುತ್ತೂರು ಶ್ರೀಕ್ಷೇತ್ರದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಶ್ರವಣ**

ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಶ್ರವಣ ಕಾರ್ಯಕ್ರಮಗಳು ಏಪ್ರಿಲ್ 2ರಂದು ಜರುಗಿದವು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನಿವೃತ್ತ ಮುಖ್ಯ ಅಭಿಯಂತರರಾದ ಶ್ರೀ ಶಂಕರ್ ದೇವನೂರುರವರು ಮಾತನಾಡಿ ಅಲ್ಲಮಪ್ರಭುಗಳು ಸತ್ಯದ ಸಾಕ್ಷಾತ್ಕಾರದ ಆದಿ ಅಂತ್ಯವಿಲ್ಲದ ಅನಂತದ ಪ್ರತೀಕ. ಅವರ ವಚನಗಳು ಅಷ್ಟು ಸುಲಭವಾಗಿ ಅರ್ಥವಾಗುವಂತಹವುಗಳಲ್ಲ. ಶರಣರು ದಯೆ ಕಾರುಣ್ಯದ ಮೂಲಕ ಲೋಕವನ್ನು ಬೆಳಗಿದವರು. ಅಂತೆಯೇ ಸುತ್ತೂರು ಶ್ರೀಮಠದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಕಾರುಣ್ಯಮೂರ್ತಿಗಳಾಗಿ ಜಗದ ಬೆಳಕಾದರು ಎಂದು ಬಣ್ಣಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿವೃತ್ತ ನಿರ್ದೇಶಕರಾದ ಡಾ. ಎಸ್. ಶಿವರಾಜಪ್ಪನವರು ಸುತ್ತೂರು ಶ್ರೀಮಠವು ಸರ್ವ ಧರ್ಮಗಳ ಸಮನ್ವಯ ತಾಣ. ಸರ್ವರ ಹಿತಕಾಯುವ ಸರ್ವಜನಾಂಗದ ಶಾಂತಿಯ ತೋಟ. ಶರಣರ ವಿಶಿಷ್ಟ ಗುಣವೆಂದರೆ ಆಸೆಗೆ ದಾಸರಾಗದಿರುವುದು. 12ನೇ ಶತಮಾನದ ಶರಣ ಚಳುವಳಿಯಿಂದಾಗಿ ಮೌಢ್ಯತೆ, ಅಂಧಶ್ರದ್ಧೆಗಳು ಕಡಿಮೆಯಾಗಿವೆ. ವ್ಯಕ್ತಿ ಕಲ್ಯಾಣ ಮತ್ತು ಲೋಕಕಲ್ಯಾಣ ಶರಣರ ಬದುಕಿನ ಆಶಯವಾಗಿತ್ತು. ಅವರು ಸಮಾಜಮುಖಿಗಳು. ಆದ್ದರಿಂದಲೇ ಶರಣರ ಚಿಂತನೆಗಳು ಸಾರ್ವಕಾಲಿಕವಾಗಿವೆ. ಶರಣರು ಜೀವನ ಕಲೆಯ ಮಹಾಶಿಲ್ಪಿಗಳು. ಅನುಭಾವದ ನುಡಿಗಳನ್ನು ನೀಡಿದ ಕಾಲಜ್ಞಾನಿಗಳು. ಅಲ್ಲಮಪ್ರಭುಗಳು ಅನುಭವದ ಮಹಾಮೇರು. ಅವರ ಬೆಡಗಿನ ವಚನಗಳಲ್ಲಿ ಜೀವನ, ಭಕ್ತಿ, ಸಾಂಸಾರಿಕ ಜಂಜಾಟ ಇವೇ ಮೊದಲಾದ ವಿಷಯಗಳು ಅನಾವರಣಗೊಂಡಿವೆ ಎಂದು ತಿಳಿಸಿದರು.

ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದ ಅಧ್ಯಕ್ಷರು ಹಾಗೂ ಪಂಚಾಂಗ ಕರ್ತರಾದ ಸಿದ್ಧಾಂತಿ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗದಲ್ಲಿ ರಾಷ್ಟ್ರೀಯ ಪಂಚಾಂಗದ ವಿವರಗಳು ಇವೆ. ವರ್ಷ ಪ್ರವೇಶ ಕುಂಡಲಿಯಂತೆ ಮಳೆ ನಕ್ಷತ್ರಗಳ ಬಗ್ಗೆ ಪೂರ್ಣ ಮಾಹಿತಿಯಿದೆ. ಬಹುತೇಕ ಮಳೆಗಳು ಬುಧವಾರದಂದೇ ಆರಂಭವಾಗುತ್ತವೆ. ಸದರೀ ವರ್ಷ ವೃಷ್ಟಿ ಯೋಗ ಚೆನ್ನಾಗಿದೆ. ಈ ಪಂಚಾಂಗದಿಂದ ನಮ್ಮ ಜ್ಞಾನವನ್ನು ಅಧಿಕಗೊಳಿಸಿಕೊಳ್ಳಬಹುದಾಗಿದೆ. ನಮ್ಮೆಲ್ಲರಿಗೂ ಪಂಚಾಂಗದ ಅಗತ್ಯವಿದೆ. ಹೇಗೆ ಬದುಕಬೇಕು, ಸಂಸ್ಕಾರಗಳನ್ನು ಹೇಗೆ ಕಲಿಯಬೇಕು, ಆಚರಣೆಗಳನ್ನು ಹೇಗೆ ಮಾಡಬೇಕು ಇತ್ಯಾದಿಗಳನ್ನು ಪಂಚಾಂಗದಿಂದ ಪಡೆದುಕೊಳ್ಳುವುದು ಸಾಧ್ಯ. ಹಿರಿಯರಿಗೆ, ಗೃಹಸ್ಥರಿಗೆ ಹಾಗೂ

ದೇವಾಲಯಗಳಲ್ಲಿ ಪೂಜಾಕಾರ್ಯಗಳನ್ನು ಮಾಡುವವರಿಗೆಲ್ಲ ಪಂಚಾಂಗ ಅತ್ಯಾವಶ್ಯಕವಾಗಿದೆ ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಪ್ರಸಾರಾಂಗದ ನಿವೃತ್ತ ನಿರ್ದೇಶಕರಾದ ಪ್ರೊ. ನೀಲಗಿರಿ ಎನ್. ತಳವಾರ್‌ರವರು ಶಿವಶರಣರನ್ನು ನೆನಪುಮಾಡಿಕೊಳ್ಳುವುದೇ ಒಂದು ಯೋಗ. ಸುತ್ತೂರು ಶ್ರೀಮಠದಿಂದ ಶರಣ ಸಾಹಿತ್ಯದ ಹಲವಾರು ಅಮೂಲ್ಯ ಕೃತಿಗಳನ್ನು ಹೊರತರಲಾಗಿದೆ. ಅವುಗಳನ್ನು ಅಧ್ಯಯನ ಮಾಡುವ ಮೂಲಕ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಶ್ರೀಮಠ ಹಾಗೂ ಗ್ರಾಮದ ಹೊನ್ನೇರುಗಳು ಶ್ರೀಮಠದಿಂದ ಮಂಗಳವಾದ್ಯ ಹಾಗೂ ವಿವಿಧ ಜನಪದ ಕಲಾತಂಡಗಳೊಂದಿಗೆ ಮೆರವಣಿಗೆಯಲ್ಲಿ ಹೊರಟು ಜಮೀನುಗಳಿಗೆ ತೆರಳಿ ಭೂಮಿತಾಯಿಗೆ ಪೂಜೆ ಸಲ್ಲಿಸಿ ಹೊಸ ವರ್ಷದ ಕೃಷಿಕಾಯಕಕ್ಕೆ ಚಾಲನೆ ನೀಡಲಾಯಿತು. ಕರ್ತೃಗದ್ದುಗೆ ಹಾಗೂ ಶ್ರೀಕ್ಷೇತ್ರದ ಎಲ್ಲಾ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು ನೆರವೇರಿದವು. ಇದೇ ಸಂದರ್ಭದಲ್ಲಿ 30ಕ್ಕೂ ಹೆಚ್ಚು ವಟುಗಳು ದೀಕ್ಷಾಸಂಸ್ಕಾರ ಪಡೆದರು.

ಕುದೇರು ಮಠ, ಮಾಡ್ರಹಳ್ಳಿ, ವೀರಪ್ಪ ಒಡೆಯರಹುಂಡಿ, ಕುಂದೂರು ಬೆಟ್ಟ, ಹಂಚೀಪುರ, ಮಡಿವಾಳಸ್ವಾಮಿ ಮಠಗಳ ಶ್ರೀಗಳು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮಲೆಯೂರು ಗುರುಸ್ವಾಮಿ, ಕೋಲಾರದ ಮಾಜಿ ಶಾಸಕರಾದ ಶ್ರೀ ಕೃಷ್ಣ, ಮೊದಲಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮಕ್ಕೆ ಮೊದಲು ಸುತ್ತೂರು ಉಚಿತ ಶಾಲೆಯ ಸಂಗೀತ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಗಾಯನ ನಡೆಸಿಕೊಟ್ಟರು. ಶ್ರೀಮತಿ ಎನ್. ಚೂಡಾಮಣಿ ಪ್ರಾರ್ಥನೆ ಸಲ್ಲಿಸಿದರು. ಶ್ರೀ ಜಿ.ಎಲ್. ತ್ರಿಪುರಾಂತಕ ಅತಿಥಿಗಳನ್ನು ಪರಿಚಯಿಸಿದರು. ಶ್ರೀ ಪಂಚಾಕ್ಷರಿ ವಂದಿಸಿದರು. ಶ್ರೀ ಅಂದಯ್ಯ ಶಿರೂರಮಠ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

**ಯಡಿಯೂರು ಶ್ರೀ ಸಿದ್ಧಲಿಂಗೇಶ್ವರರು ನಾಡು ಕಂಡ ಶ್ರೇಷ್ಠ ಸಂತರು**

ಯಡಿಯೂರು ಶ್ರೀ ಸಿದ್ಧಲಿಂಗೇಶ್ವರರು ನಾಡು ಕಂಡ ಶ್ರೇಷ್ಠ ಸಂತರು ಎಂದು ಪರಮಪೂಜ್ಯ ಜಗದ್ಗುರುಗಳು ಏಪ್ರಿಲ್ 3ರಂದು ಬೆಂಗಳೂರು ಅಕ್ಕಿಪೇಟೆಯ ಶ್ರೀ ದೊಡ್ಡಮಠದಲ್ಲಿ ಶ್ರೀ ಸಿದ್ಧಲಿಂಗೇಶ್ವರರ ದೇವಾಲಯ ಉದ್ಘಾಟನೆಯ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. 12ನೇ ಶತಮಾನದ ನಂತರ ಧಾರ್ಮಿಕ ಪರಂಪರೆಗೆ ವಿಶಿಷ್ಟ ಮಾನ್ಯತೆ ದೊರಕಿಸಿಕೊಟ್ಟವರು ಸಿದ್ಧಲಿಂಗೇಶ್ವರರು. ಕರ್ನಾಟಕ, ಕೇರಳ ಮತ್ತು ತಮಿಳುನಾಡುಗಳಲ್ಲೆಲ್ಲಾ ಸಂಚರಿಸಿ ಧರ್ಮ ಜಾಗೃತಿ ಮೂಡಿಸಿದರು ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸಮಾಜವನ್ನು ಮುನ್ನಡೆಸುವಲ್ಲಿ ಮಠಗಳ ಪಾತ್ರ ಮಹತ್ವದ್ದು. ಎಲ್ಲರೂ ಧರ್ಮದ ಹಾದಿಯಲ್ಲಿ ನಡೆದಾಗ ಮಾತ್ರ ದೇಶದ ಅಭಿವೃದ್ಧಿಯಾಗುತ್ತದೆ. ಆಡಳಿತ ವ್ಯವಸ್ಥೆಯೂ ಸುಲಲಿತವಾಗುತ್ತದೆ. ಮಠಾಧೀಶರು ಜಗತ್ತಿನ ಕಲ್ಯಾಣ, ಶಾಂತಿ, ಸಾಮರಸ್ಯ ಕಾಪಾಡಲು ಶ್ರಮಿಸುತ್ತಿದ್ದಾರೆ ಎಂದರು.

ದೊಡ್ಡಮಠದ ಶ್ರೀಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಹೊನ್ನಮ್ಮ ಗವಿಮಠ, ಕಂಬಾಳು ಮಠಗಳ ಶ್ರೀಗಳು, ಶಾಸಕರಾದ ಶ್ರೀ ದಿನೇಶ್ ಗುಂಡೂರಾವ್, ಸಂಸದರಾದ ಶ್ರೀ ಪಿ.ಸಿ. ಮೋಹನ್, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ಮಂಡಳಿ ಅಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರುಗಳು ಮಾತನಾಡಿದರು. ಶ್ರೀ ಹರಳೂರು ಶಿವಕುಮಾರ್, ಶ್ರೀ ದೊ.ಬ. ಮೃತ್ಯುಂಜಯಪ್ಪ ಮೊದಲಾದವರು ಉಪಸ್ಥಿತರಿದ್ದರು.

**ಕನ್ನಡ ಸ್ವತಂತ್ರವಾಗಿ ಬೆಳೆದು ಶಾಸ್ತ್ರೀಯ ಸ್ಥಾನ ಪಡೆದುಕೊಂಡಿದೆ**

ಕನ್ನಡ ಭಾಷೆ ಸ್ವತಂತ್ರವಾಗಿ ಬೆಳೆದು ಶಾಸ್ತ್ರೀಯ ಸ್ಥಾನ ಪಡೆದುಕೊಂಡಿದೆ ಎಂದು ಪರಮಪೂಜ್ಯ ಜಗದ್ಗುರುಗಳು ಏಪ್ರಿಲ್ 4ರಂದು ವಿಜಯಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕು ಯರನಾಳ ಶ್ರೀ ವಿರಕ್ತಮಠದ ಜಗದ್ಗುರು ಶ್ರೀ ಪಂಪಾಪತಿ ಶಿವಯೋಗಿಗಳ ಜಾತ್ರಾ ಮಹೋತ್ಸವ, ಶ್ರೀ ಸಂಗನಬಸವ ಶಿವಯೋಗಿಗಳ ಪುಣ್ಯಾರಾಧನೆಯ ಸುವರ್ಣ ಮಹೋತ್ಸವ ಹಾಗೂ ಶ್ರೀ ಗುರುಸಂಗನಬಸವ ಸ್ವಾಮಿಗಳವರ ದ್ವಾದಶ ಪಟ್ಟಾಭಿಷೇಕ ಮಹೋತ್ಸವದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ಬಸವಾದಿ ಶರಣರ ವಚನ ಸಾಹಿತ್ಯ ರಚನೆಯಾಗುವ ಮೊದಲು ಸಂಸ್ಕೃತದ ಪ್ರಭಾವಕ್ಕೆ ಒಳಗಾಗಿ ಕನ್ನಡ ಕಾವ್ಯಗಳು ರಚನೆಯಾದವು. ಆ ಕೃತಿಗಳನ್ನು ಓದಲು ಕನ್ನಡದ ಜತೆ ಸಂಸ್ಕೃತವನ್ನೂ ಕಲಿಯಬೇಕಿತ್ತು. ಶರಣರ ವಚನಗಳ ಕಾಲಘಟ್ಟದ ನಂತರ ಅಪ್ಪಟ ಕನ್ನಡ ಬೆಳೆಯಿತು. ವಿಜಯಪುರ ಜಿಲ್ಲೆಯಲ್ಲಿ ಶಿಕ್ಷಣ ಕ್ರಾಂತಿಯಾಗುವಲ್ಲಿ ಬಸವಾದಿ ಶರಣರ ವಚನ ಸಾಹಿತ್ಯವನ್ನು ಜನಮಾನಸಕ್ಕೆ ಮುಟ್ಟಿಸುವಲ್ಲಿ ತ್ರಿಮೂರ್ತಿ ಶರಣರಾದ ಬಂಥನಾಳದ ಶ್ರೀ ಸಂಗನಬಸವ ಶಿವಯೋಗಿಗಳು, ಶ್ರೀ ಹರ್ಡೇಕರ್ ಮಂಜಪ್ಪನವರು ಮತ್ತು ಡಾ. ಫ.ಗು. ಹಳಕಟ್ಟಿಯವರ ಕೊಡುಗೆ ಅಪಾರ ಎಂದು ಶ್ಲಾಘಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಶಾಸಕರಾದ ಶ್ರೀ ಸತೀಶ್ ಜಾರಕಿಹೊಳಿಯವರು ಪ್ರಸ್ತುತ ಜಾತಿ ವೈಷ್ಯಮದ ಪರಿಸ್ಥಿತಿಯಲ್ಲಿ ಬಸವಣ್ಣನವರ ಸಮಾನತೆಯ ಸಂದೇಶದ ಅಗತ್ಯ ತುಂಬಾ ಇದೆ. ಈ ಸಮಾನತೆಯನ್ನು ಅನುಷ್ಠಾನಗೊಳಿಸುವಲ್ಲಿ ಮಠಗಳು ಪ್ರಮುಖ ಪಾತ್ರ ವಹಿಸಬೇಕಿದೆ. ಕಳೆದ ಒಂದು ಶತಮಾನದ ಇತಿಹಾಸವನ್ನು ಗಮನಿಸಿದರೆ ಸರ್ಕಾರ ಮಾಡಬೇಕಾಗಿದ್ದ ಶಿಕ್ಷಣ ನೀಡುವ ಕಾರ್ಯವನ್ನು ಮಠಮಾನ್ಯಗಳು ಮಾಡಿವೆ ಎಂದು ಸ್ಮರಿಸಿದರು.

ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಎಂ.ಬಿ. ಪಾಟೀಲ್‌ರವರು ಮಠಗಳು ಜಾತ್ರೆಯನ್ನು ಕೇವಲ ದೇವರ ದರ್ಶನಕ್ಕೆ ಸೀಮಿತಗೊಳಿಸದೆ, ವಿಚಾರಶೀಲವಾದ ಪ್ರಗತಿಪರ ಗೋಷ್ಠಿಗಳನ್ನು ಹಮ್ಮಿಕೊಳ್ಳುವ ಮೂಲಕ ಜನರಿಗೆ ಜ್ಞಾನ ದಾಸೋಹ ಮಾಡುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಶಿವಾನಂದ ಪಾಟೀಲ್‌ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಡಾ. ಚಿ.ಸಿ. ನಿಂಗಣ್ಣ ಕಲಬುರ್ಗಿಯವರ ಶ್ರೀ ದಯಾನಂದ ಶಿವಯೋಗಿಗಳ ಚರಿತ್ರೆ ಕೃತಿಯನ್ನು ಬಿಡುಗಡೆಗೊಳಿಸಲಾಯಿತು ಹಾಗೂ ವಾರ್ತಾವಾಚಕರಾದ ಶ್ರೀ ಶ್ರೀಪಾದ ಪಾಟೀಲ್ ಹಾಗೂ ಉದ್ಯಮಿಗಳಾದ ಶ್ರೀ ಬಿ.ಎಂ. ಉಮೇಶ್‌ಕುಮಾರರವರನ್ನು ಸನ್ಮಾನಿಸಲಾಯಿತು. ವಿಜಯಪುರದ ಷಣ್ಮುಖಾರೂಢ ಮಠದ ಶ್ರೀಗಳು, ಬಸವನಬಾಗೇವಾಡಿ, ಕುಂಟೋಜಿ, ಚುಂಚನಹಳ್ಳಿ ಶ್ರೀಗಳು, ಶ್ರೀ ಚಂದ್ರಶೇಖರ್ ನುಗ್ಲಿ, ಶ್ರೀಮತಿ ಇಂದುಮತಿ ಸಾಲಿಮಠ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ವಿರೇಶ ವಾಲಿ ಮತ್ತು ಸಂಗಡಿಗರು ವಚನ ಗಾಯನ ಮಾಡಿದರು. ಶ್ರೀಮತಿ ಶ್ವೇತಾ ಮಠಪತಿ ಕಾರ್ಯಕ್ರಮ ನಿರೂಪಿಸಿದರು.

**ಸ್ವದೇಶಿ ವಸ್ತುಗಳನ್ನು ಹೆಚ್ಚಾಗಿ ಬಳಸಬೇಕು**

ಸ್ವದೇಶಿ ವಸ್ತುಗಳನ್ನು ಜನರು ಹೆಚ್ಚು ಖರೀದಿಸಿ ಬಳಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 6ರಂದು ಬೆಂಗಳೂರಿನ ಚಂದ್ರಗುಪ್ತಮೌರ್ಯ ಕ್ರೀಡಾ ಮೈದಾನದಲ್ಲಿ ಸ್ವದೇಶಿ ಜಾಗರಣ ಮಂಚ್ ವತಿಯಿಂದ ಆಯೋಜಿಸಿದ್ದ ಸ್ವದೇಶಿ ಮೇಳದ ಉದ್ಘಾಟನಾ ಸಮಾರಂಭದಲ್ಲಿ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಸ್ವದೇಶಿ ವಸ್ತುಗಳನ್ನು ಖರೀದಿಸಿ ಮನೆಗೆ ಕೊಂಡೊಯ್ದಾಗ ಮಾತ್ರ ಈ ಅಭಿಯಾನ ಸಂಪೂರ್ಣ ಯಶಸ್ವಿಯಾಗುತ್ತದೆ. ಶುಭ ಸಮಾರಂಭಗಳಲ್ಲಿ ಸ್ವದೇಶಿ ವಸ್ತುಗಳನ್ನು ಹೆಚ್ಚು ಬಳಸಬೇಕು. ಗಾಂಧೀಜಿಯವರು ಕಂಡ ಗ್ರಾಮ ಸ್ವರಾಜ್ಯದ ಕನಸು ನನಸಾಗಬೇಕಾದರೆ ಸ್ವದೇಶಿ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ದೇಶದ ಆರ್ಥಿಕ ಅಭಿವೃದ್ಧಿಗಾಗಿ ಸ್ವದೇಶಿ ವಸ್ತುಗಳನ್ನು ಬಳಸಬೇಕು. ಸ್ವದೇಶಿ ಉತ್ಪನ್ನಗಳಲ್ಲಿ ಸಾಧಿಸಿದ ಯಶೋಗಾಥೆಯೇ ಭಾರತವನ್ನು ಆರ್ಥಿಕವಾಗಿ ಪ್ರಬಲ ರಾಷ್ಟ್ರವನ್ನಾಗಿ ಮಾಡುತ್ತಿದೆ. ಸ್ವಾಭಿಮಾನ, ಸ್ವಾವಲಂಬನೆ, ಸಾರ್ವಭೌಮತೆ ಪರಿಕಲ್ಪನೆಗಳಡಿ ಸ್ವದೇಶಿ ಜಾಗರಣ ಮಂಚ್ ಇಂತಹ ಮೇಳಗಳನ್ನು ಆಯೋಜಿಸುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸೌರ ವಿಜ್ಞಾನಿಗಳಾದ ಡಾ. ಹರೀಶ್ ಹಂದೆಯವರನ್ನು ಸನ್ಮಾನಿಸಲಾಯಿತು. ಆರ್ಥಿಕ ತಜ್ಞ ಪ್ರೊ. ಬಿ.ಎಂ. ಕುಮಾರಸ್ವಾಮಿಯವರು ಉಪನ್ಯಾಸ ನೀಡಿದರು. ಶಾಸಕರಾದ ಶ್ರೀಮತಿ ಸೌಮ್ಯ ರೆಡ್ಡಿ ಮಾತನಾಡಿದರು. ಸಂಯೋಜಕರಾದ ಡಾ. ತೇಜಸ್ವಿನಿ ಅನಂತಕುಮಾರ್‌ರವರು ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಚಾಲಕರಾದ ಶ್ರೀ ಪ್ರಕಾಶ್ ಬೆಳವಾಡಿ, ಶ್ರೀ ಬಿ.ಎಚ್. ರಘುರಾಮ್‌ರವರು ಉಪಸ್ಥಿತರಿದ್ದರು.

**ನಿರಾಶ್ರಿತ ಹೆಣ್ಣುಮಕ್ಕಳ ಹೊಸ ಭರವಸೆಯ ಆಶಾಕಿರಣ ಶಕ್ತಿಧಾಮ**

ನಿರಾಶ್ರಿತ ಹೆಣ್ಣುಮಕ್ಕಳ ಪಾಲಿಗೆ ಹೊಸ ಭರವಸೆಯ ಆಶಾಕಿರಣ ಶಕ್ತಿಧಾಮ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 7ರಂದು ಮೈಸೂರಿನ ಶಕ್ತಿಧಾಮದಲ್ಲಿ ಇನ್ಫೋಸಿಸ್ ಫೌಂಡೇಷನ್ ವತಿಯಿಂದ ನೂತನವಾಗಿ ನಿರ್ಮಿಸಿರುವ ನೂತನ ಕಟ್ಟಡದ ಉದ್ಘಾಟನೆ ಮತ್ತು ಶಕ್ತಿಧಾಮ ವಿದ್ಯಾಶಾಲಾದ ಶಂಕುಸ್ಥಾಪನೆಯ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಶ್ರೀಮತಿ ಪಾರ್ವತಮ್ಮ ರಾಜ್‌ಕುಮಾರ್‌ರವರು ಸಮಾಜದಲ್ಲಿ ಶೋಷಣೆಗೆ ಒಳಗಾದ ಹೆಣ್ಣುಮಕ್ಕಳಿಗೆ ಶಕ್ತಿಧಾಮದ ಮೂಲಕ ಆಶ್ರಯ ನೀಡಿದರು. ಅವರಿಗೆ ಬದುಕು ಕಟ್ಟಿಕೊಳ್ಳಲು ಆತ್ಮವಿಶ್ವಾಸವನ್ನು ತುಂಬುವ ಕಾರ್ಯವನ್ನು ಇಲ್ಲಿ ಮಾಡಲಾಗುತ್ತಿದೆ. ಶ್ರೀಮತಿ ಪಾರ್ವತಮ್ಮನವರ ಕಾರ್ಯವನ್ನು ಶ್ರೀಮತಿ ಗೀತಾ ಶಿವರಾಜ್‌ಕುಮಾರ್‌ರವರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಒಂದು ಸರ್ಕಾರ ಮಾಡಬೇಕಾದ ಕೆಲಸವನ್ನು ಶಕ್ತಿಧಾಮ ಮಾಡುತ್ತಿದೆ. ಶಕ್ತಿಧಾಮದಲ್ಲಿರುವ ಮಕ್ಕಳು ದೇವರ ಮಕ್ಕಳು. ಈ ಕೇಂದ್ರಕ್ಕೆ ಶಕ್ತಿಧಾಮ ಎಂಬ ಹೆಸರು ಸೂಕ್ತವಾಗಿದೆ. ಸುತ್ತೂರು ಶ್ರೀಗಳವರ ಆಶೀರ್ವಾದದಿಂದ ಆರಂಭವಾದ ಈ ಸಂಸ್ಥೆಯು ಡಾ. ರಾಜಕುಮಾರ್ ಮತ್ತು ಶ್ರೀಮತಿ ಪಾರ್ವತಮ್ಮ ರಾಜಕುಮಾರ್‌ರವರ ಸಂಕಲ್ಪಶಕ್ತಿ ಹಾಗೂ ಶ್ರೀ ಕೆಂಪಯ್ಯನವರ ಅಂತಃಕರಣದಿಂದ ರೂಪುಗೊಂಡಿದೆ. ನೊಂದ ಮಕ್ಕಳಿಗೆ ಆತ್ಮವಿಶ್ವಾಸ ತುಂಬುತ್ತಿರುವುದು ನಿಜಕ್ಕೂ ಪುಣ್ಯದ ಕೆಲಸ ಎಂದು ಶ್ಲಾಘಿಸಿದರು ಹಾಗೂ ಶಕ್ತಿಧಾಮದ ವಿದ್ಯಾಶಾಲಾ ನಿರ್ಮಾಣಕ್ಕೆ ಸರ್ಕಾರದಿಂದ ಐದು ಕೋಟಿ ರೂ.ಗಳ ನೆರವು ಘೋಷಿಸಿದರು.

ಕಲಾವಿದರಾದ ಡಾ. ಶಿವರಾಜ್‌ಕುಮಾರ್‌ರವರು ಶಕ್ತಿಧಾಮ ಸ್ಥಾಪನೆಯಾಗುವ ಸಂದರ್ಭದಲ್ಲಿ ಸುತ್ತೂರು ಶ್ರೀಗಳು ನೀಡಿದ ಆಶೀರ್ವಾದ ಮತ್ತು ಸಹಕಾರವನ್ನು ಎಂದೂ ಮರೆಯಲಾಗದು. ಡಾ. ಸುಧಾ ಮೂರ್ತಿಯವರು ಸಂಸ್ಥೆಗೆ ಮತ್ತಷ್ಟು ಶಕ್ತಿಯನ್ನು ತುಂಬಿರುವುದಕ್ಕೆ ಧನ್ಯವಾದಗಳು. ಅಪ್ಪು ಅಗಲಿದ ನಂತರ ನಾನು ಇಲ್ಲಿಗೆ ಹೆಚ್ಚಾಗಿ ಬರುತ್ತಿದ್ದೇನೆ. ಈ ಮಕ್ಕಳ ಮುಖದಲ್ಲಿ ನನ್ನ ತಮ್ಮನನ್ನು ಕಾಣುತ್ತಿದ್ದೇನೆ ಎಂದರು.

ಶಕ್ತಿಧಾಮದ ಅಧ್ಯಕ್ಷರಾದ ಶ್ರೀಮತಿ ಗೀತಾ ಶಿವರಾಜ್‌ಕುಮಾರ್‌ರವರು ಮುಂಬರುವ ಶೈಕ್ಷಣಿಕ ವರ್ಷದಿಂದಲೇ ವಿದ್ಯಾಶಾಲೆಯು ಕಾರ್ಯಾರಂಭ ಮಾಡಲಿದೆ. ಜೂನ್ ತಿಂಗಳಲ್ಲೇ ಶಾಲೆ ಆರಂಭಿಸಿ ಹೊಸ ಕಟ್ಟಡ ನಿರ್ಮಾಣವಾದ ನಂತರ ಅಲ್ಲಿಗೆ ಶಾಲೆಯನ್ನು ಸ್ಥಳಾಂತರಿಸಲಾಗುವುದು. ಶ್ರೀಮತಿ ಪಾರ್ವತಮ್ಮನವರ ನಿಧನದ ನಂತರ ನನ್ನನ್ನು ಶಕ್ತಿಧಾಮದ ಟ್ರಸ್ಟಿಯನ್ನಾಗಿ ನೇಮಿಸಿ ಮಹತ್ವದ ಜವಾಬ್ದಾರಿಯನ್ನು ನೀಡಲಾಗಿದೆ. ಎಲ್ಲರ ಮಾರ್ಗದರ್ಶನ ಮತ್ತು ಸಹಕಾರದಿಂದ ಮುಂದುವರೆಯುತ್ತಿದ್ದೇನೆ ಎಂದು ಹೇಳಿ ಸಂಸ್ಥೆಗೆ ನೆರವಾದವರನ್ನು ಸ್ಮರಿಸಿದರು.

ಶಾಸಕರಾದ ಶ್ರೀ ಎಸ್.ಎ. ರಾಮದಾಸ್, ಇನ್ಫೋಸಿಸ್ ಸಂಸ್ಥೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷರಾದ ಶ್ರೀ ಷಾಜಿ ಮ್ಯಾಥ್ಯುರವರು ಮಾತನಾಡಿದರು. ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್, ನಿವೃತ್ತ ಪೊಲೀಸ್ ಆಯುಕ್ತರಾದ ಶ್ರೀ ಕೆಂಪಯ್ಯ, ಶಾಸಕರುಗಳಾದ ಶ್ರೀ ಎಲ್. ನಾಗೇಂದ್ರ, ಶ್ರೀ ಸಿ.ಎಸ್. ನಿರಂಜನಕುಮಾರ್, ಸಂಸದರಾದ ಶ್ರೀ ಪ್ರತಾಪ್ ಸಿಂಹ ಮತ್ತು ವಿವಿಧ ನಿಗಮ, ಮಂಡಳಿ ಹಾಗೂ ಪ್ರಾಧಿಕಾರಗಳ ಅಧ್ಯಕ್ಷರುಗಳು ಉಪಸ್ಥಿತರಿದ್ದರು. ಶಕ್ತಿಧಾಮದ ಮಕ್ಕಳು ನಾಡಗೀತೆ ಹಾಡಿದರು. ಶ್ರೀ ಜಿ.ಎಸ್. ಜಯದೇವರವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಸುಧಾ ನರಸಿಂಹರಾಜು ಕಾರ್ಯಕ್ರಮ ನಿರೂಪಿಸಿದರು.

**ಕುವೆಂಪುರವರ ಅಂತರಂಗದ ಶಿಷ್ಯರಾಗಿದ್ದ ಪ್ರಭುಶಂಕರ**

ಪ್ರಭುಶಂಕರರವರು ಕುವೆಂಪುರವರ ಅಂತರಂಗದ ಶಿಷ್ಯರಾಗಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 8ರಂದು ಮೈಸೂರಿನ ನವಜ್ಯೋತಿ ಸಭಾಂಗಣದಲ್ಲಿ ನಡೆದ 'ಹೀಗಿದ್ದರು ಪ್ರಭುಶಂಕರ' ಸ್ಮರಣ ಸಂಪುಟದ ಲೋಕಾರ್ಪಣೆಯ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಪ್ರಭುಶಂಕರರವರು ವಿಶೇಷವಾದ ಸಾಹಿತಿಗಳು. ಯಾವತ್ತೂ ಮರೆಯದಂತಹ ಸಾಹಿತ್ಯವನ್ನು ಅವರು ರಚನೆ ಮಾಡಿದ್ದಾರೆ. 'ಬೆರಗು' ಕೃತಿಯ ಮೂಲಕ ವಿಭಿನ್ನವಾದ ರೀತಿಯಲ್ಲಿ ಬಸವಣ್ಣನವರ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದ್ದಾರೆ. ಅವರು ತಮ್ಮ ವ್ಯಕ್ತಿತ್ವ ಮತ್ತು ಕೃತಿಗಳ ಮೂಲಕವಾಗಿ ವಿಶೇಷವಾದಂತಹ ಪ್ರಭಾವವನ್ನು ಬೀರಿದ್ದಾರೆ ಎಂದು ಹೇಳಿದರು.

ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎನ್.ಎಸ್. ತಾರಾನಾಥರವರು ಸದಾ ಕಾಲ ಆರ್ದ್ರಭಾವ ತುಂಬಿಕೊಂಡು, ಯಾವುದರಲ್ಲೂ ತೋಯದ ಗುಣವನ್ನು ಇಟ್ಟುಕೊಂಡು ಬದುಕಿದ ಜೀವ ಪ್ರಭುಶಂಕರರವರದು. ದೊಡ್ಡ ಮನಸ್ಸು ಹೊಂದಿದ್ದ ಅವರು ಚಿರಸ್ಮರಣೀಯರು ಎಂದು ಸ್ಮರಿಸಿದರು.

ಹಿರಿಯ ಸಾಹಿತಿಗಳಾದ ಶ್ರೀ ಕೆ.ಸಿ. ಶಿವಪ್ಪನವರು ಸಂಪನ್ನ ಸ್ನೇಹಜೀವಿಯಾಗಿದ್ದ ಪ್ರಭುಶಂಕರರವರದು ಯಾರಿಗೂ ಕೇಡು ಬಯಸದ ವ್ಯಕ್ತಿತ್ವವಾಗಿತ್ತು. ಅವರ ಸಾಹಿತ್ಯದಲ್ಲಿ

ಜೀವಕಳೆ ತುಂಬಿತ್ತು. ಬದುಕಿನುದ್ದಕ್ಕೂ ಹಾಸ್ಯದ ಹೊನಲು ಹರಿಯುತ್ತಿತ್ತು. ಮೌಢ್ಯದ ವಿರುದ್ಧ ಅವರು ಬರೆದದ್ದು ಎಲ್ಲರಿಗೂ ಮಾದರಿಯಾಗಿದೆ ಎಂದರು.

ಶ್ರೀ ರಾಮಕೃಷ್ಣ ಆಶ್ರಮದ ಮುಕ್ತಿದಾನಂದಜೀ ಮಹಾರಾಜ್‌ರವರು ಅಧ್ಯಕ್ಷತೆ ವಹಿಸಿದ್ದರು. ಪ್ರೊ. ಸಿ.ಕೆ. ರೇಣುಕಾರ್ಯ ಮತ್ತು ಪ್ರೊ. ಎಂ. ಕೃಷ್ಣೇಗೌಡರವರು ಪ್ರಭುಶಂಕರವರೊಂದಿಗಿನ ನೆನಪುಗಳನ್ನು ಹಂಚಿಕೊಂಡರು. ಶ್ರೀ ನಿತಿನ್ ರಾಜಾರಾಮ ಶಾಸ್ತ್ರಿ ಭಾವಗೀತೆಗಳನ್ನು ಹಾಡಿದರು. ಲೇಖಕರಾದ ಶ್ರೀ ನ. ರವಿಕುಮಾರರವರು ಪ್ರಾಸ್ತಾವಿಕ ನುಡಿಗಳನ್ನಾಡಿ ಸ್ವಾಗತಿಸಿದರು. ಶ್ರೀಮತಿ ಅಸಿತಾ ಪ್ರಭುಶಂಕರ ವಂದಿಸಿದರು. ಪ್ರೊ. ಕೆ.ಬಿ. ಪ್ರಭುಪ್ರಸಾದ್, ಶ್ರೀಮತಿ ಜಲಜಾಕ್ಷಿ, ಡಾ. ಚಿದಾನಂದಗೌಡ ಹಾಗೂ ಶ್ರೀಮತಿ ತಾರಿಣಿ ಚಿದಾನಂದಗೌಡ ಗೌರವ ಪ್ರತಿಗಳನ್ನು ಸ್ವೀಕರಿಸಿದರು. ಶ್ರೀಮತಿ ನಿವೇದಿತಾ ಮೃತ್ಯುಂಜಯ ಉಪಸ್ಥಿತರಿದ್ದರು.

**ಸಾಲದ ಹೊರೆ ಇಲ್ಲದಂತೆ ಮನೆಗಳು ಸಿಗುವಂತಾಗಲಿ**

ಸಾಲದ ಹೊರೆ ಇಲ್ಲದಂತೆ ಮನೆಗಳು ಸಿಗುವಂತಾಗಲಿ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 10ರಂದು ಮೈಸೂರು ಕಮ್ಯುನಿಟಿ ಬಯೋಸ್ಫೇರ್ ಸಂಸ್ಥೆಯು ಹೆಚ್.ವಿ. ರಾಜೀವ್ ಟೌನ್‌ಶಿಪ್‌ನಲ್ಲಿ ನಿರ್ಮಿಸುತ್ತಿರುವ 'ಅವನಿ' ವಸತಿ ಸಮುಚ್ಚಯದ ಭೂಮಿ ಪೂಜೆಯ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಶ್ರೀರಾಮನವಮಿಯಂದು ಈ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದು ನೆನಪಿನಲ್ಲಿ ಉಳಿಯಲಿದೆ. ಅವನಿ ವಸತಿ ಸಮುಚ್ಚಯವು ಬೆಳೆಯುವ ಮೈಸೂರಿನ ಒಂದು ಭಾಗವಾಗಲಿದೆ. ಇದನ್ನು ಹೊಸ ತಂತ್ರಜ್ಞಾನ ಅಳವಡಿಸಿ ನಿರ್ಮಿಸುತ್ತಿರುವುದು ಇತರರಿಗೂ ಮಾದರಿಯಾಗಲಿದೆ ಎಂದು ಹೇಳಿದರು.

ಮಾಜಿ ಸಚಿವರಾದ ಶ್ರೀ ಎಂ.ಆರ್. ಸೀತಾರಾಂರವರು ನಮ್ಮ ತಂದೆ ಎಂ.ಎಸ್. ರಾಮಯ್ಯನವರ ಹೆಸರಿನಲ್ಲಿ ಮೈಸೂರಲ್ಲಿ 500 ನಿವೇಶನಗಳನ್ನು ಮಾರಾಟ ಮಾಡಿದೆವು. ಅದರಲ್ಲಿ 50 ಮಂದಿ ಮಾತ್ರ ಮನೆ ನಿರ್ಮಿಸಿಕೊಂಡಿದ್ದಾರೆ. ಪಿ.ಜಿ. ಶೆಟ್ಟಿ ಕನ್‌ಸ್ಟ್ರಕ್ಷನ್ ನಿರ್ಮಿಸುತ್ತಿರುವ ಅವನಿ ವಸತಿ ಸಮುಚ್ಚಯ ಮಧ್ಯಮ ವರ್ಗದವರಿಗೆ ಸಹಾಯವಾಗಲಿ ಎಂದರು.

ಮುಡಾ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್‌ರವರು ಹಲವಾರು ಬಡಾವಣೆಗಳನ್ನು ನಿರ್ಮಿಸಿ ಕೈಗೆಟಕುವ ದರದಲ್ಲಿ ಮನೆ ನಿರ್ಮಿಸಿಕೊಟ್ಟಿದ್ದೇನೆ. ಜನರ ಮನಸ್ಥಿತಿ ಅರ್ಥ ಮಾಡಿಕೊಂಡು ಎಲ್ಲ ಸೌಕರ್ಯ ಒದಗಿಸಿದರೆ ಜನರೇ ಮುಂದೆ ಬಂದು ನಿವೇಶನ ಖರೀದಿಸುತ್ತಾರೆ ಎಂದು ತಿಳಿಸಿದರು.

ಪಿ.ಜಿ. ಶೆಟ್ಟಿ ಕನ್‌ಸ್ಟ್ರಕ್ಷನ್‌ನ ಮುಖ್ಯಸ್ಥರಾದ ಶ್ರೀ ಸೋಮಶೇಖರ್ ಶೆಟ್ಟಿ ನಮ್ಮ ಪೂರ್ವಿಕರು ಉದ್ದೂರು ಗ್ರಾಮದವರು. ಅವನಿ ವಸತಿ ಸಮುಚ್ಚಯ ನಿರ್ಮಿಸುತ್ತಿರುವ

ಜಾಗವೂ ಉದ್ದೂರು ಗ್ರಾಮದ್ದೆ. ಹೀಗಾಗಿ ಎಲ್ಲೊ ಒಂದು ಕಡೆ ನಮ್ಮ ಪೂರ್ವಿಕರನ್ನು ನೆನಪಿಸಿಕೊಳ್ಳಲು ಈ ಯೋಜನೆ ನಮಗೆ ಲಭಿಸಿತು ಎಂದು ಹರ್ಷವಾಗುತ್ತಿದೆ ಎಂದರು.

ಮಾಜಿ ಶಾಸಕರಾದ ಶ್ರೀ ವಾಸು, ಮಾಜಿ ಮೇಯರ್ ಶ್ರೀ ಬಿ.ಎಲ್. ಭೈರಪ್ಪ, ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀ ಗುಂಡಪ್ಪಗೌಡ ಮೊದಲಾದವರು ಉಪಸ್ಥಿತರಿದ್ದರು. ಶ್ರೀಮತಿ ಅನು ಶ್ರೀರಾಮ್ ಪ್ರಾರ್ಥಿಸಿದರು. ಕು. ಭವ್ಯಾ ಶೆಟ್ಟಿ ಯೋಜನೆ ಬಗ್ಗೆ ತಿಳಿಸಿದರು. ಕು. ನವ್ಯಾ ಶೆಟ್ಟಿ ವಂದಿಸಿದರು.

**ಉತ್ತಂಗಿ ಚನ್ನಪ್ಪನವರ ಸಮಗ್ರ ಸಾಹಿತ್ಯ ಸಂಪುಟಗಳ ಲೋಕಾರ್ಪಣೆ**

ಉತ್ತಂಗಿ ಚನ್ನಪ್ಪನವರು ಈ ನಾಡು ಕಂಡ ಶ್ರೇಷ್ಠ ವ್ಯಕ್ತಿತ್ವವನ್ನು ಹೊಂದಿದ್ದರು ಎಂದು ಪರಮಪೂಜ್ಯ ಜಗದ್ಗುರುಗಳು ಏಪ್ರಿಲ್ 9ರಂದು ಮೈಸೂರು ಶ್ರೀನಗರ ಬಡಾವಣೆಯಲ್ಲಿ ನಡೆದ ಶ್ರೀ ಡಿ. ನಾಗೇಂದ್ರಪ್ಪನವರು ರಚಿಸಿರುವ ಸರ್ವಜ್ಞ ಸಾಹಿತಿ ಉತ್ತಂಗಿ ಚನ್ನಪ್ಪನವರ ಸಮಗ್ರ ಸಾಹಿತ್ಯ ಸಂಪುಟಗಳ ಲೋಕಾರ್ಪಣೆಯ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಚನ್ನಪ್ಪನವರಿಗೆ ಕ್ರೈಸ್ತ ಮತ್ತು ವೀರಶೈವ ಧರ್ಮಗಳೆರಡರ ಸಾಹಿತ್ಯವೂ ಮುಖ್ಯವಾಗಿತ್ತು. ಈ ಕೃತಿಗಳನ್ನು ಗಮನಿಸಿದಾಗ ಓದುಗರಿಗೆ ಅವರ ಅಧ್ಯಯನದ ವ್ಯಾಪ್ತಿಯ ಅರಿವಾಗುತ್ತದೆ. ಚನ್ನಪ್ಪನವರ ಸಮಗ್ರ ಸಾಹಿತ್ಯವನ್ನು ಅತ್ಯಂತ ಅಚ್ಚುಕಟ್ಟಾಗಿ ನಾಗೇಂದ್ರಪ್ಪನವರು ಸಂಪಾದಿಸಿದ್ದಾರೆ ಎಂದರು.

ಪ್ರೊ. ರಾಗೌರವರು 20ನೇ ಶತಮಾನದ ಪೂರ್ವಾರ್ಧದಲ್ಲಿ ನವೋದಯ ಸಾಹಿತ್ಯದಲ್ಲಿ ಚನ್ನಪ್ಪನವರು ಉತ್ತಮ ಕೃಷಿ ಮಾಡಿದರು. ಇಂದು ಚನ್ನಪ್ಪನವರನ್ನು ಎಷ್ಟೋ ಜನ ಮರೆತುಬಿಟ್ಟಿದ್ದಾರೆ. ಅವರ ನೆನಪನ್ನು ಈ ಕೃತಿಗಳು ನಿರಂತರವಾಗಿಸಲಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿಗಳಾದ ಪ್ರೊ. ಸಿ.ಪಿ.ಕೆ., ಕರ್ನಾಟಕ ಸಾಹಿತ್ಯ ಅಕ್ಯಾಡೆಮಿಯ ಅಧ್ಯಕ್ಷರಾದ ಪ್ರೊ. ಬಿ.ವಿ. ವಸಂತಕುಮಾರ್, ಸಂವಹನ ಪ್ರಕಾಶನದ ಶ್ರೀ ಡಿ.ಎನ್. ಲೋಕಪ್ಪ, ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ಎಂ. ಚಂದ್ರಶೇಖರ್ ಮೊದಲಾದವರುಗಳು ಉಪಸ್ಥಿತರಿದ್ದರು.

**ಆಲಮಟ್ಟಿಯ ಲಾಲ್ ಬಹದ್ದೂರ್ ಶಾಸ್ತ್ರಿ ಸಾಗರ ಅಣೆಕಟ್ಟೆಗೆ ಪೂಜ್ಯ ಜಗದ್ಗುರುಗಳವರ ಭೇಟಿ**

ವಿಜಯಪುರ ಜಿಲ್ಲೆ ನಿಡಗುಂದಿ ತಾಲ್ಲೂಕು ಆಲಮಟ್ಟಿಯಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ಸಾಗರ ಅಣೆಕಟ್ಟೆಗೆ ಏಪ್ರಿಲ್ 3 ಮತ್ತು 4ರಂದು ಪರಮಪೂಜ್ಯ ಜಗದ್ಗುರುಗಳು ಭೇಟಿ ನೀಡಿ ಜಲಾಶಯವನ್ನು ವೀಕ್ಷಿಸಿ, ಅಲ್ಲಿನ ಅಧಿಕಾರಿಗಳಿಂದ ಜಲಾಶಯ, ನೀರಿನ ಹೊರ ಹರಿವು ಮತ್ತು ಒಳ ಹರಿವಿನ ಕುರಿತು ಮಾಹಿತಿ ಪಡೆದರು.

ಅಲ್ಲಿ ನಿರ್ಮಿಸಿರುವ ಕೃಷ್ಣಾ ಮತ್ತು ಲವಕುಶ ಉದ್ಯಾನವನಗಳಿಗೆ ಭೇಟಿ ನೀಡಿ ಅಲ್ಲಿನ ಶಿಲ್ಪಕಲಾಕೃತಿಗಳು, ಲೇಸರ್ ಶೋ, 3ಡಿ ಶೋ, 7ಡಿ ಚಿತ್ರಗಳು ಹಾಗೂ ಸಂಗೀತ ಕಾರಂಜಿಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕೃಷ್ಣಾ ಜಲಭಾಗ್ಯ ನಿಗಮದ ಸಹಾಯಕ ಅಭಿಯಂತರರಾದ ಶ್ರೀ ವಿಠ್ಠಲ್ ಜಾಧವ್, ಶ್ರೀ ಆರ್.ಆರ್. ಹಿರೇಗೌಡರ್ ಹಾಗೂ ವಲಯ ಅರಣ್ಯಾಧಿಕಾರಿಗಳಾದ ಶ್ರೀ ಮಹೇಶ್ ಪಾಟೀಲ್, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಂದ್ರಶೇಖರ್ ನುಗ್ಗಿ ಮೊದಲಾದವರುಗಳು ಉಪಸ್ಥಿತರಿದ್ದರು.

**ಸ್ವಯಂಸೇವೆಯಲ್ಲಿ ತೊಡಗಿಸಿಕೊಳ್ಳುವುದು ಸೂಕ್ತ**

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ಪ್ರಿಯವಾಗಿದ್ದ ಸೇವಾಮನೋಭಾವವನ್ನು ನಿವೃತ್ತಿಯ ನಂತರ ಸ್ವಯಂಸೇವೆಯಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಬೆಳೆಸಿಕೊಳ್ಳಬೇಕೆಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 13ರಂದು ಮೈಸೂರಿನ ಶ್ರೀ ಸುತ್ತೂರು ಶಾಖಾಮಠದಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆಸಲ್ಲಿಸಿ 2020–21ನೇ ಸಾಲಿನಲ್ಲಿ ನಿವೃತ್ತರಾದವರಿಗೆ ಅಭಿನಂದಿಸಿ ಆಶೀರ್ವದಿಸುತ್ತಾ ತಿಳಿಸಿದರು.

ಜೆಎಸ್ಎಸ್ ಮಹಾವಿದ್ಯಾಪೀಠದ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ 2020–21ರಲ್ಲಿ ನಿವೃತ್ತರಾದ ನೌಕರರ ಪರಿಚಯದ 'ತೇರನೆಳೆದವರು' ಪುಸ್ತಕವನ್ನು ಬಿಡುಗಡೆ ಮಾಡಿದರು. ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸಿದವರೆಲ್ಲರಿಗೂ ಅಭಿನಂದಿಸಲಾಗಿದೆ. ಕಾಯಕ ಯಾವುದು ಎಂಬುದು ಮುಖ್ಯವಲ್ಲ, ಕಾಯಕದಲ್ಲಿ ಯಾವುದು ಕಡಿಮೆಯಲ್ಲ; ಯಾವುದೂ ಹೆಚ್ಚಲ್ಲ. ಎಲ್ಲಾ ಕಾಯಕವು ಮಹತ್ವದ್ದಾಗಿರುತ್ತದೆ. ಅದನ್ನು ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ನಿರ್ವಹಿಸುವುದು ಮುಖ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ 2020–21 ರಲ್ಲಿ ನಿವೃತ್ತರಾದ ಒಟ್ಟು 189 ನೌಕರರಲ್ಲಿ 141 ನೌಕರರು ಹಾಜರಿದ್ದು ಪರಮಪೂಜ್ಯ ಜಗದ್ಗುರುಗಳವರಿಂದ ಆಶೀರ್ವಾದಪೂರ್ವಕ ಅಭಿನಂದನೆಯನ್ನು ಸ್ವೀಕರಿಸಿದರು.

ನೌಕರಿಯ ದಿನಗಳ ಅನುಭವಗಳನ್ನು ಹಂಚಿಕೊಂಡ ನೌಕರರಾದ ಡಾ. ರುದ್ರಮೂರ್ತಿಯವರು "ಗ್ರಾಮೀಣ ಪ್ರದೇಶದಿಂದ ಅವರು ಪರಮಪೂಜ್ಯರ ಆಶೀರ್ವಾದ, ಅನುಕಂಪ, ಕಾರುಣ್ಯ ಮತ್ತು ಬೆಂಬಲದಿಂದ ಔದ್ಯೋಗಿಕ ಕ್ಷೇತ್ರದಲ್ಲಿ ಬೆಳೆಯಲು ಸಾಧ್ಯವಾಯಿತು" ಎಂದರು. ಶ್ರೀ ಎಂ.ಎಂ. ಪ್ರಭುಸ್ವಾಮಿಯವರು "ಜೆಎಸ್ಎಸ್ ಸಂಸ್ಥೆಯಲ್ಲಿನ ವೃತ್ತಿ ಅನುಭವ ಅದ್ಭುತವಾದದ್ದು. ಇಲ್ಲಿನ ಅನುಭವದಿಂದ ನಾನು ಮತ್ತೊಂದು ಸಂಸ್ಥೆಯಲ್ಲಿ ನಿವೃತ್ತಿಯ ನಂತರವೂ ಸಮರ್ಥವಾಗಿ ನಾಯಕತ್ವದ

ಗುಣದೊಂದಿಗೆ ಪ್ರಾಚಾರ್ಯನಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ" ಎಂದರು. ಶ್ರೀ ನಾ. ಮಹಾವೀರ ಪ್ರಸಾದ್‌ರವರು "ಸಂಸ್ಥೆಯಲ್ಲಿ ಸಾಹಿತ್ಯಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಅನುಭವ ಉತ್ತಮವಾಗಿತ್ತು" ಎಂದರು.

ಇದೇ ಸಂದರ್ಭದಲ್ಲಿ 2020–21ರ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ'ವನ್ನು ಹಾಗೂ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ವಿದ್ಯಾರ್ಥಿವೇತನವನ್ನು ವಿತರಿಸಲಾಯಿತು. ಪ್ರಸಾದ ದ್ವೈಮಾಸಿಕ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮತ್ತು ಸಂಸ್ಥೆಗಳ 2019–20ನೇ ಸಾಲಿನ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಬಹುಮಾನವನ್ನು ವಿತರಿಸಲಾಯಿತು.

ನಿವೃತ್ತರುಗಳ ಪರಿಚಯವನ್ನು ಶ್ರೀ ಗುರುಪ್ರಸಾದ್, ಶ್ರೀ ಯೋಗೀಶ್ ಚುಂಚನಹಳ್ಳಿ, ಕು. ಎಚ್.ಎಸ್. ಅಂಬಿಕಾ, ಡಾ. ಭೀಮರಾಜ್, ಶ್ರೀಮತಿ ಡಿ.ಎಸ್. ಅಂಬಿಕಾ, ಡಾ. ಪಳನಿಸ್ವಾಮಿ, ಶ್ರೀ ಮಹಮದ್ ಅಂಜುಂಪಾಷ, ಶ್ರೀಮತಿ ಪಿ. ರಶ್ಮಿ, ಶ್ರೀಮತಿ ಎಚ್. ಎನ್. ಮಾನಸ ಮತ್ತು ಶ್ರೀ ಕೆ.ವಿ. ಯೋಗೀಶ್‌ರವರುಗಳು ನಡೆಸಿಕೊಟ್ಟರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರು ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ ಪಿ. ಶಿವಾನಂದ ಭಾರತಿ ವಂದಿಸಿದರು. ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ನಟರಾಜು ಅವರು ನಿರೂಪಿಸಿದರು. ಜೆಎಸ್‌ಎಸ್ ಲಲಿತ ಕಲಾವೃಂದದವರ ಬೆಳಗ್ಗೆ ಸಾಂಸ್ಕೃತಿಕ ಗಾಯನ ಕಾರ್ಯಕ್ರಮ ನಡೆಸುವುದರ ಜೊತಗೆ ಪ್ರಾರ್ಥನೆ ಸಲ್ಲಿಸಿದರು.

**ಪೂಜೆ ವೈಯಕ್ತಿಕವಾಗಿರಬೇಕು ಫಲ ಸಾರ್ವತ್ರಿಕವಾಗಿರಬೇಕು**

ಪೂಜೆ ವೈಯಕ್ತಿಕವಾಗಿರಬೇಕು ಫಲ ಸಾರ್ವತ್ರಿಕವಾಗಿರಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಏಪ್ರಿಲ್ 17ರಂದು ಚಾಮರಾಜನಗರದಲ್ಲಿ ಕದಳಿ ಮಹಿಳಾ ವೇದಿಕೆಯಿಂದ ಆಯೋಜಿಸಿದ್ದ 19ನೇ ವಾರ್ಷಿಕೋತ್ಸವ, 'ಕದಳಿ ಸಿರಿ' ಪ್ರಶಸ್ತಿ ಪ್ರದಾನ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಫಲ ಸಮಾಜಮುಖಿ ಯಾಗಿದ್ದರೆ ಸಾಮರಸ್ಯ ಮೂಡುತ್ತದೆ. ನಗರೀಕರಣ ಹೆಚ್ಚಿದಂತೆ ಕೌಟುಂಬಿಕ ಬದುಕಿನಲ್ಲೂ ಬದಲಾವಣೆಗಳಾಗುತ್ತಿವೆ. ಅವಿಭಕ್ತ ಕುಟುಂಬದ ಪ್ರಾಧಾನ್ಯತೆ ಕಡಿಮೆಯಾಗಿದೆ. ಅಲ್ಲಿ ಮಕ್ಕಳಿಗೆ ದೊರೆಯುತ್ತಿದ್ದ ಸಂಸ್ಕಾರ ಇಂದು ಸಿಗುತ್ತಿಲ್ಲ. ತಾಯಿಯೇ ಸಂಸ್ಕಾರ ನೀಡುವ ಮೊದಲು ಗುರು. ಮಕ್ಕಳನ್ನು ಶ್ರೇಷ್ಠ ವ್ಯಕ್ತಿಗಳನ್ನಾಗಿ ರೂಪಿಸುವ ಹೊಣೆ ಅವಳ ಮೇಲಿರುತ್ತದೆ. ಕಾಯಕವೇ ಪೂಜೆಯಾಗಬೇಕೇ ಹೊರತು ಪೂಜಿಸುವುದೇ ಕಾಯಕವಾಗಬಾರದು. ಕದಳಿ ಮಹಿಳಾ ವೇದಿಕೆ ಶರಣ ಸಾಹಿತ್ಯ ಪರಿಷತ್ತಿನ ಒಂದು

ಭಾಗ. ಸಮಾಜಮುಖಿ ಕೆಲಸಗಳಿಗಾಗಿ ರಾಜೇಂದ್ರ ಶ್ರೀಗಳು ಪರಿಷತ್ತನ್ನು ಸ್ಥಾಪಿಸಿದರು. ಕದಳಿ ಮಹಿಳಾ ವೇದಿಕೆಯೂ ಸಹ ಈ ನಿಟ್ಟಿನಲ್ಲಿ ಕೆಲಸ ಮಾಡಲಿ ಎಂದು ಆಶಿಸಿದರು.

ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಬಿ.ವೈ. ಅರುಣಾದೇವಿಯವರು ಅಕ್ಕಮಹಾದೇವಿ 12ನೇ ಶತಮಾನದಲ್ಲೇ ಮಹಿಳೆಯರಿಗೆ ಚೈತನ್ಯ ತುಂಬಿದ್ದಾರೆ. ಅವರ ಕ್ರಾಂತಿಕಾರಿ ಬದುಕು ಮತ್ತು ಇಚ್ಛಾಶಕ್ತಿ ಮಹಿಳೆಯರಿಗೆ ಆದರ್ಶವಾಗಬೇಕು. ಮುಂದಿನ ಪೀಳಿಗೆಗೆ ನಾವು ಏನು ಕಲಿಸುತ್ತಿದ್ದೇವೆ ಎಂಬುದನ್ನು ಚಿಂತನೆ ಮಾಡಬೇಕು. ಮಹಿಳೆಯರು ಸಂಘಟಿತರಾಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ. ಡಿ. ಶೀಲಾನಂಜಪ್ಪನವರಿಗೆ 'ಕದಳಿ ಸಿರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀಮತಿ ಕಾತ್ಯಾಯಿನಿದೇವಿ, ಶ್ರೀಮತಿ ಪ್ರಿಯದರ್ಶಿನಿ ಸಾಣಿಕೊಪ್ಪ ಮತ್ತು ಶ್ರೀಮತಿ ಶಶಿಕಲಾ ಮಹದೇವಸ್ವಾಮಿಯವರನ್ನು ಸನ್ಮಾನಿಸಲಾಯಿತು.

ಮಾಜಿ ಶಾಸಕರಾದ ಶ್ರೀಮತಿ ಪರಿಮಳ ನಾಗಪ್ಪ ಮತ್ತು ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಮಲೆಯೂರು ಗುರುಸ್ವಾಮಿಯವರು ಮಾತನಾಡಿದರು. ಶ್ರೀಮತಿ ವಸಂತಮ್ಮ ಮಹದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಶೋಭಾ ಸಿದ್ಧರಾಜು ಮತ್ತು ಶ್ರೀಮತಿ ಸುಂದರಮ್ಮ ಶಿವಣ್ಣ ಪ್ರಾರ್ಥಿಸಿದರು. ಶ್ರೀಮತಿ ರತ್ನಮ್ಮ ಬಸವರಾಜು ಸ್ವಾಗತಿಸಿದರು. ಶ್ರೀಮತಿ ಸುಶೀಲಾ ಸೋಮಶೇಖರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಶಾರದಾ ಪುಟ್ಟಮಲ್ಲಪ್ಪ ಅಭಿನಂದನಾ ಪತ್ರ ವಾಚಿಸಿದರು. ಶ್ರೀಮತಿ ರಾಜೇಶ್ವರಿ ಮಾದೇಶ್, ಶ್ರೀಮತಿ ರಾಜಮ್ಮ ದೊರೆಸ್ವಾಮಿ, ಶ್ರೀಮತಿ ಸವಿತಾ ಪ್ರಕಾಶ್, ಶ್ರೀಮತಿ ರೂಪ ತೋಟೇಶ್, ಶ್ರೀಮತಿ ಸುಂದರಮ್ಮ ಶಿವಣ್ಣ, ಶ್ರೀಮತಿ ಪ್ರೀತಿ ಸುಭಾಷ್, ಶ್ರೀಮತಿ ಲತಾ ಜತ್ತಿ ಅತಿಥಿಗಳನ್ನು ಪರಿಚಯಿಸಿದರು.

**ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡಿರುವ ಕದಳಿ ಮಹಿಳಾ ವೇದಿಕೆ**

ಸಮಾಜಮುಖಿ ಕೆಲಸಗಳಲ್ಲಿ ಕದಳಿ ಮಹಿಳಾ ವೇದಿಕೆ ತೊಡಗಿಸಿಕೊಂಡಿದೆ ಎಂದು ವಿಶ್ರಾಂತ ಕುಲಪತಿಗಳಾದ ಡಾ. ಚಿದಾನಂದಗೌಡರವರು ಏಪ್ರಿಲ್ 18ರಂದು ಮೈಸೂರು ಜೆಎಸ್ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಕದಳಿ ಮಹಿಳಾ ವೇದಿಕೆಯಿಂದ ಆಯೋಜಿಸಿದ್ದ 'ಕದಳಿಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಹೇಳಿದರು. ಕದಳಿ ಎನ್ನುವ ಹೆಸರೇ ವಿಭಿನ್ನವಾದುದು. ಕದಳಿಶ್ರೀ ಪ್ರಶಸ್ತಿ ನೀಡಿ ಸಾಧಕರನ್ನು ಉತ್ತೇಜಿಸಲಾಗುತ್ತಿದೆ. ಸಮಾಜಸೇವಾ ದೃಷ್ಟಿಯಿಂದ ವಿಶೇಷಚೇತನರಿಗೆ ಕೃತಕ ಕಾಲು, ವೀಲ್ ಚೇರ್, ಅಶಕ್ತ ಮಹಿಳೆಯರಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳುವ ನಿಟ್ಟಿನಲ್ಲಿ ಹೊಲಿಗೆ ಯಂತ್ರ ಕೊಡುಗೆ ನೀಡಲಾಗಿದೆ. ಇದರಿಂದ ಹಲವು ಮನೆಗಳಲ್ಲಿ ನವಜ್ಯೋತಿ ಬೆಳಗಿದಂತಾಗಿದೆ.

ಇಂತಹ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಶ್ಲಾಘಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಮಲೆಯೂರು ಗುರುಸ್ವಾಮಿಯವರು ಜೀವನದಲ್ಲಿ ಸ್ವಪ್ರೀತಿ ಇಲ್ಲದಿದ್ದರೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ನಾವು ಪ್ರೀತಿಯಿಂದ ಜೀವಿಸಬೇಕು. ಕದಳಿ ಮಹಿಳಾ ವೇದಿಕೆ ನಾಡಿನ ಉದ್ದಗಲಕ್ಕೂ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ನೂರೆಂಟು ಬೌದ್ಧಿಕ ವಿಚಾರಗಳ ನಡುವೆ ಎಲ್ಲರನ್ನೂ ಸಂತೃಪ್ತಿಗೊಳಿಸಲು ಬೇಕಾದ ಗುಣ, ಸಂಯಮ, ಸಹನೆ ಮತ್ತು ಉದಾರತೆ ಇದ್ದಾಗ ಮಾತ್ರ ಸಂಘಟನೆ ಬೆಳೆಯುತ್ತದೆ ಎಂದರು.

ಕದಳಿಶ್ರೀ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ. ವಸುಂಧರಾ ದೊರೆಸ್ವಾಮಿಯವರು ಈ ಪ್ರಶಸ್ತಿ ಪಡೆದಿರುವ ನಾನು ಪುಣ್ಯವಂತೆ. ಪರಮಾತ್ಮನನ್ನು ಸೇರಲು ನೃತ್ಯ ಉತ್ತಮ ಮಾಧ್ಯಮ. ಶಾಸ್ತ್ರೀಯ ಕಲೆಗಳಲ್ಲಿ ನೃತ್ಯವು ಪರಮಾತ್ಮನ ಹೃದಯವಿದ್ದಂತೆ. ಎಲ್ಲದರಲ್ಲಿಯೂ ಒಳ್ಳೆಯದನ್ನು ಗುರುತಿಸಿ ಪ್ರತಿಭೆ ಮೂಲಕ ಸಮಾಜವನ್ನು ಸರಿದಾರಿಗೆ ತರುವ ಕೆಲಸ ಮಾಡಬೇಕು ಎಂದು ಹೇಳಿದರು.

ಶ್ರೀ ಮ.ಗು. ಸದಾನಂದಯ್ಯ, ಶ್ರೀ ಹೆಳವರಹುಂಡಿ ಸಿದ್ಧಪ್ಪ ಉಪಸ್ಥಿತರಿದ್ದರು. ಶ್ರೀಮತಿ ಶೈಲಾ ಸಿದ್ರಾಮಪ್ಪ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ ಸ್ವಾಗತಿಸಿದರು. ಶ್ರೀಮತಿ ನೀಲಾಂಬಿಕಾ ನಾಗರಾಜ್ ಅಭಿನಂದನಾ ಪತ್ರ ವಾಚನ ಮಾಡಿದರು. ಶ್ರೀಮತಿ ಶೋಭಾ ಶಿವಾನಂದ್ ವಾರ್ಷಿಕ ವರದಿ ಮಂಡಿಸಿದರು. ಶ್ರೀಮತಿ ಜಯಾ ಗೌಡ ಸಮುದಾಯ ಕಾರ್ಯದ ಬಗ್ಗೆ ತಿಳಿಸಿದರು. ಶ್ರೀಮತಿ ಮಂಜುಳಾ ಪ್ರಸಾದ್ ವಂದಿಸಿದರು. ಶ್ರೀಮತಿ ಸುಧಾ ಮೃತ್ಯುಂಜಯಪ್ಪ ಕಾರ್ಯಕ್ರಮ ನಿರೂಪಿಸಿದರು.

**ಶಿಕ್ಷಣದ ಜೊತೆಗೆ ಸಂಸ್ಕಾರವೂ ಮುಖ್ಯ**

ಶಿಕ್ಷಣದ ಜೊತೆಗೆ ಸಂಸ್ಕಾರವೂ ಮುಖ್ಯ ಎಂದು ಪರಮಪೂಜ್ಯ ಜಗದ್ಗುರುಗಳು ಏಪ್ರಿಲ್ 20ರಂದು ನೆಲಮಂಗಲ ತಾಲ್ಲೂಕು ಶ್ರೀ ಸದ್ಧರ್ಮ ಸಿಂಹಾಸನ ಸಂಸ್ಥಾನ ಹೊನ್ನಮ್ಮ ಗವಿಮಠದ ಶ್ರೀ ಹೊನ್ನಾದೇವಿ ಆರತಿ ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಲಿಂಗದೀಕ್ಷೆ ಸಂಸ್ಕಾರ ಅಭಿಯಾನ, ದಾಸೋಹ ದಿನ ಘೋಷಣೆಯ ಅಭಿನಂದನೆ ಹಾಗೂ ಅನುಭವ ಮಂಟಪದ ಜನಜಾಗೃತ ಸಮಾವೇಶದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ತಾಯಿಯ ಗರ್ಭದಿಂದಲೇ ಸಂಸ್ಕಾರ ನೀಡುವುದು ಪ್ರಾರಂಭವಾಗಿ ಅಂತ್ಯಸಂಸ್ಕಾರದವರೆಗೂ ಅದನ್ನು ಪರಿಪಾಲಿಸಲಾಗುತ್ತದೆ. ಪೂಜಾ ಸಂಸ್ಕಾರದಿಂದ ಭವಿಷ್ಯ ಉಜ್ವಲವಾಗುತ್ತದೆ. ಸಂಸ್ಕಾರವಂತರಿಗೆ ಸಮಾಜ ಎಂದಿಗೂ ಬೆಲೆ ಕೊಡುತ್ತದೆ ಎಂದರು.

ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಶಿವಗಂಗೆಯ ಹೊನ್ನಮ್ಮ ಗವಿಮಠ ಅತ್ಯಂತ ಪುರಾತನವಾಗಿದ್ದು, ಉತ್ತಮವಾದ ಕೆಲಸಗಳನ್ನು ಮಾಡುತ್ತಿದೆ. ಪುರಾತನವಾದ ಸಂಪ್ರದಾಯಗಳನ್ನು ಮುಂದಿನ ಜನಾಂಗಕ್ಕೆ ಉಳಿಸಿ ಬೆಳೆಸಿಕೊಂಡು ಹೋಗಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರಿಗೆ ಸಿದ್ಧಲಿಂಗ ಶಿವಾಚಾರ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹನೀಯರನ್ನು ಸನ್ಮಾನಿಸಲಾಯಿತು. ಶ್ರೀ ಹೊನ್ನಮ್ಮ ಗವಿಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಮೇಲಣ ಗವಿಮಠ, ಕಂಬಾಳು, ಸಿಡಗಡಲೆ, ಹಿತ್ತಲಹಳ್ಳಿ, ಮಾಯಗೊಂಡನಹಳ್ಳಿ ಮಠಗಳ ಶ್ರೀಗಳು, ಮಾಜಿ ಶಾಸಕರಾದ ಶ್ರೀ ಎಂ.ವಿ. ನಾಗರಾಜು, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ನಿಗಮದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್, ಕೆಆರ್ಐಡಿಎಲ್ ಅಧ್ಯಕ್ಷರಾದ ಶ್ರೀ ಎಂ. ರುದ್ರೇಶ್ ಮೊದಲಾದವರು ಉಪಸ್ಥಿತರಿದ್ದರು.

**ಭಾರತೀಯ ಸಾಂಪ್ರದಾಯಿಕ ವೈದ್ಯಪದ್ಧತಿಗೆ ವಿಶೇಷ ಸ್ಥಾನವಿದೆ**

ಸಮಾಜದ ಆರೋಗ್ಯ ರಕ್ಷಣೆಯಲ್ಲಿ ಪುರಾತನ ವೈದ್ಯಕೀಯ ಪದ್ಧತಿಯ ಪಾತ್ರ ಮಹತ್ವದ್ದು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 22ರಂದು ಮೈಸೂರು ಜೆಎಸ್ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಎಸ್ಎಫ್ಇ ಮೈಸೂರು ಛಾಪ್ಟರ್, ಜೆಎಸ್ಎಸ್ ಫಾರ್ಮಸಿ ಕಾಲೇಜು ಮತ್ತು ಜೆಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ ವತಿಯಿಂದ ಆಯೋಜಿಸಿದ್ದ ಭಾರತೀಯ ಸಾಂಪ್ರದಾಯಿಕ ಔಷಧಶಾಸ್ತ್ರ ಸಂಘದ 9ನೇ ಅಂತಾರಾಷ್ಟ್ರೀಯ ಸಮಾವೇಶದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಸಮ್ಮೇಳನದ ಸ್ಮರಣ ಸಂಚಿಕೆ ಎಸ್ಎಫ್ಇಸಿ–2022ನ್ನು ಬಿಡುಗಡೆ ಗೊಳಿಸಿ ಇಂತಹ ಅಂತಾರಾಷ್ಟ್ರೀಯ ಸಮ್ಮೇಳನಗಳನ್ನು ಆಯೋಜಿಸುವುದು ಬಹಳ ಮಹತ್ವದ್ದು. ಈ ಕಾರ್ಯಕ್ರಮವನ್ನು ಸರಿಯಾದ ಯೋಜನೆಯೊಂದಿಗೆ ಕಾರ್ಯಗತ ಗೊಳಿಸಲಾಗಿದೆ. ಭಾರತದ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ ವಿಶೇಷವಾದ ಸ್ಥಾನವನ್ನು ಹೊಂದಿದೆ. ಸಮಾಜದ ಆರೋಗ್ಯ ರಕ್ಷಣೆಯಲ್ಲಿ ಸಾಂಪ್ರದಾಯಿಕ ಮೌಲ್ಯಗಳು ಮಹತ್ತರವಾಗಿವೆ ಎಂದರು.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಕೆ. ಸುಧಾಕರ್ರವರು ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಯನ್ನು ರಕ್ಷಣೆ ಮಾಡುವ ಅಗತ್ಯವಿದೆ. ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ರವಾನಿಸಬೇಕಾದ ಅಗತ್ಯವಿದೆ. ಇದರ ಬಗ್ಗೆ ಜ್ಞಾನ ಹೊಂದಿರುವವರನ್ನು ಪ್ರೋತ್ಸಾಹಿಸಬೇಕು. ಹಿರಿಯ ತಲೆಮಾರಿನಿಂದ

ಪಡೆದ ಔಷಧೀಯ ಕುಶಲತೆಗಳನ್ನು ಭವಿಷ್ಯದ ಪೀಳಿಗೆಗೆ ತಿಳಿಸಿಕೊಡಬೇಕು. ಪ್ರತಿಯೊಂದು ನೈಸರ್ಗಿಕ ಉತ್ಪನ್ನಗಳು ಔಷಧೀಯ ಗುಣಗಳನ್ನು ಹೊಂದಿವೆ ಎಂದು ತಿಳಿಸಿದರು.

ಛತ್ತೀಸ್‌ಗಡದ ಮಾಜಿ ರಾಜ್ಯಪಾಲರಾದ ಶ್ರೀ ಶೇಖರ್ ದತ್ ಅಧ್ಯಕ್ಷತೆ ವಹಿಸಿದ್ದರು. ಎಸ್‌ಎಫ್‌ಇ ಉಪಾಧ್ಯಕ್ಷರಾದ ಡಾ. ಸಿ.ಕೆ. ಕಟಿಯಾರ್, ಕುಲಸಚಿವರಾದ ಡಾ. ಬಿ. ಮಂಜುನಾಥ್, ಡಾ. ಸುಭಾಷ್ ಸಿ. ಮಂಡಲ್ ಉಪಸ್ಥಿತರಿದ್ದರು. ಕು. ಅರುಣಿಮಾ ಮತ್ತು ತಂಡದವರು ಪ್ರಾರ್ಥಿಸಿದರು. ಪ್ರೊ. ಪುಲೋಕ್ ಕೆ. ಮುಖರ್ಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಟಿ.ಎಂ. ಪ್ರಮೋದ್‌ಕುಮಾರ್ ಸ್ವಾಗತಿಸಿದರು. ಡಾ. ಕೆ. ಮೃತ್ಯುಂಜಯ ವಂದಿಸಿದರು.

**ಭಕ್ತಿಭಾವನೆಯಲ್ಲಿ ದೇವರನ್ನು ಕಾಣಬಹುದು**

ಭಕ್ತಿಭಾವನೆಯಲ್ಲಿ ದೇವರನ್ನು ಕಾಣಬಹುದು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 21ರಂದು ಮೈಸೂರು ತಾಲ್ಲೂಕು ಕೀಳನಪುರದಲ್ಲಿ ಜೀರ್ಣೋದ್ಧಾರಗೊಂಡ ಶ್ರೀ ಬಸವೇಶ್ವರ, ಶ್ರೀ ಕಾಳಮ್ಮ, ಶ್ರೀ ಮಾರಮ್ಮ ಮತ್ತು ಶ್ರೀ ಸಿದ್ದಪ್ಪಾಜಿ ದೇವಾಲಯಗಳ ಉದ್ಘಾಟನೆಯ ದಿವ್ಯಸಾನ್ನಿಧ್ಯ ವಹಿಸಿ ಹೇಳಿದರು. ಗ್ರಾಮಗಳಲ್ಲಿ ಶಾಂತಿ ಸಮೃದ್ಧಿಗಾಗಿ ದೇವಸ್ಥಾನಗಳನ್ನು ನಿರ್ಮಿಸಲಾಗುತ್ತದೆ. ಭಕ್ತಿಭಾವದಿಂದ ದೇವರನ್ನು ನೆನೆಯಬೇಕು. ಪರಿಶುದ್ಧ ಭಕ್ತಿಗೆ ಮಾತ್ರ ದೇವರು ಒಲಿಯಲು ಸಾಧ್ಯ. ದೇವಾಲಯಗಳ ಜೀರ್ಣೋದ್ಧಾರ ಪುಣ್ಯದ ಕೆಲಸ ಎಂದು ತಿಳಿಸಿದರು.

ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯನವರು ಪ್ರತಿ ಗ್ರಾಮಗಳಲ್ಲೂ ದೇವಾಲಯಗಳು ಸ್ಥಾಪನೆಯಾದರೆ ಜನರಲ್ಲಿ ಭಕ್ತಿಭಾವನೆಯ ಜೊತೆಗೆ ಒಗ್ಗಟ್ಟು ಮೂಡುತ್ತದೆ. ಆಗ ಶಾಂತಿ ನೆಮ್ಮದಿಯಿಂದ ಬಾಳಬಹುದು ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಶ್ರೀ ಶಿವಾನಂದ ಪುರಿ ಸ್ವಾಮಿಗಳು ಶುಭಸಂದೇಶ ನೀಡಿದರು. ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ಮತ್ತು ಮುಡಿಗುಂಡ ಶ್ರೀ ಶ್ರೀಕಂಠ ಸ್ವಾಮಿಗಳು ಉಪನ್ಯಾಸ ನೀಡಿದರು. ಶ್ರೀ ನೀಲಕಂಠಸ್ವಾಮಿ ಮಠ, ಪಡುಗೂರು, ಕುದೇರು ಮಠ, ಸಾಲೂರು ಮಠ, ದಂಡಿಕೆರೆ, ಬರಡನಪುರ ಮೊದಲಾದ ಮಠಗಳ ಶ್ರೀಗಳು, ಶ್ರೀ ಕೆ.ಎನ್. ಪುಟ್ಟಬುದ್ಧಿ ಮತ್ತು ಶ್ರೀ ದಕಿಣಾಮೂರ್ತಿ ಉಪಸ್ಥಿತರಿದ್ದರು. ಶ್ರೀಮತಿ ಕೆ.ಜಿ. ವಿನುತಾ ಪ್ರಾರ್ಥಿಸಿದರು. ಶ್ರೀಮತಿ ಸೌಜನ್ಯ ರವಿಶಂಕರ್ ಸ್ವಾಗತಿಸಿದರು. ಶ್ರೀಮತಿ ಸಿಂಧು ವಂದಿಸಿದರು. ಶ್ರೀ ಕೆ.ಎಸ್. ಮಹದೇವಪ್ರಸಾದ್ ಕಾರ್ಯಕ್ರಮ ನಿರೂಪಿಸಿದರು.

**ಉದಾರವಾದ ಮನಸ್ಸುಳ್ಳವನೇ ಶ್ರೀಮಂತ ಮನುಷ್ಯ**

ಉದಾರವಾದ ಮನಸ್ಸುಳ್ಳವನೇ ಶ್ರೀಮಂತ ಮನುಷ್ಯ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 24ರಂದು ಮೈಸೂರು ರಾಘವೇಂದ್ರನಗರದ ವೀರಶೈವ

ಲಿಂಗಾಯತ ಸೇವಾ ಸಮಿತಿ, ಪೂರ್ವ ವಲಯದ ವತಿಯಿಂದ ಏರ್ಪಡಿಸಿದ್ದ ಶ್ರೀ ಬಸವೇಶ್ವರ, ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು ಹಾಗೂ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಇನ್ನೊಬ್ಬರ ಯಶಸ್ಸಿಗೆ ಕರುಬದೆ, ಇನ್ನೊಬ್ಬರ ಯಶಸ್ಸನ್ನೇ ತನ್ನ ಯಶಸ್ಸು ಎಂದು ಭಾವಿಸುವವನು ನಿಜವಾದ ಶ್ರೀಮಂತ. ಇಂಥ ಮನಸ್ಸುಗಳನ್ನು ಹೊಂದಿರುವವರು ಭಾರತೀಯರು. ಉದಾರ ಚರಿತಾನಾಂತು ವಸುದೈವ ಕುಟುಂಬಕಂ ಎಂಬಂತೆ ಎಲ್ಲರೂ ಬಾಳಬೇಕು ಎಂದು ಹೇಳಿದರು.

ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ಶರಣ ಪರಂಪರೆ ಎಲ್ಲೆಡೆ ಹರಡಿ ಸಮಾಜದಲ್ಲಿ ಆಮೂಲಾಗ್ರ ಬದಲಾವಣೆಯಾಗಿದೆ. ಶರಣರ ಚಿಂತನೆಗಳು ಪರಂಪರೆ ಎಲ್ಲ ಕಡೆಗಳಲ್ಲಿ ಹರಿದು ಶರಣ ಸಂಸ್ಕೃತಿ ವಿಸ್ತಾರವಾಗಿದೆ. ರಾಜೇಂದ್ರ ಶ್ರೀಗಳು ಮತ್ತು ಸಿದ್ಧಗಂಗಾ ಶ್ರೀಗಳು ಸಮಾಜದ ಬದಲಾವಣೆಗಾಗಿ ದುಡಿದರು ಎಂದು ತಿಳಿಸಿದರು.

ದೇವನೂರು, ಕುದೇರು, ಮಲ್ಲನಮೂಲೆ ಹಾಗೂ ಶ್ರೀ ಬಸವೇಶ್ವರ ಮಠಗಳ ಶ್ರೀಗಳು ಮಾತನಾಡಿದರು. ಶಾಸಕರಾದ ಶ್ರೀ ತನ್ವೀರ್ ಸೇಠ್ ಉಪಸ್ಥಿತರಿದ್ದರು. ಶ್ರೀಮತಿ ರಾಜೇಶ್ವರಿ ಮಲ್ಲಿಕಾರ್ಜುನ ಪ್ರಾರ್ಥಿಸಿದರು. ಶ್ರೀ ಎನ್. ಶ್ರೀಕಂಠಮೂರ್ತಿ ಸುತ್ತೂರು ಸ್ವಾಗತಿಸಿದರು. ಪ್ರೊ. ಸಿ.ಬಿ. ಬಸವರಾಜು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಜಿ. ಮಹೇಶ್ ವಂದಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

### ನಡೆ ನುಡಿಯಲ್ಲಿ ಸಾಮರಸ್ಯವಿರಬೇಕು

ನುಡಿಯೊಂದು ನಡೆಯೊಂದು ಆಗಿರದೆ ಅವೆರಡರಲ್ಲಿಯೂ ಸಾಮರಸ್ಯವಿರಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 24ರಂದು ಹಾಸನ ಜಿಲ್ಲೆ ಶ್ರೀ ತಣ್ಣೀರುಹಳ್ಳ ಮಠದಲ್ಲಿ ಏರ್ಪಡಿಸಿದ್ದ ಬಸವ ಜಯಂತಿ, ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು ಮತ್ತು ತಣ್ಣೀರುಹಳ್ಳ ಮಠದ ಶ್ರೀ ಶಿವಲಿಂಗ ಸ್ವಾಮಿಗಳವರ 88ನೇ ಜಯಂತಿ ಹಾಗೂ ಶ್ರೀ ವಿಜಯಕುಮಾರ ಸ್ವಾಮಿಗಳವರ ಪಟ್ಟಾಧಿಕಾರ ಅಷ್ಟಮಾಸ ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ನಡೆ ನುಡಿ ಒಂದಾಗಿದ್ದಾಗ ಮಾತ್ರ ಯಶಸ್ಸು ಸಾಧ್ಯ. ಮಾತು ಮತ್ತು ಕೃತಿಯಲ್ಲಿ ಯಾವುದೇ ವ್ಯತ್ಯಾಸವಿರಬಾರದು. ವೀರಶೈವ ಲಿಂಗಾಯತ ಮಠಗಳು ಶಿಕ್ಷಣದಲ್ಲಿ ಕ್ರಾಂತಿಯನ್ನೇ ಮಾಡಿವೆ. ಲಕ್ಷಾಂತರ ವಿದ್ಯಾರ್ಥಿಗಳಿಗೆ ಆಶ್ರಯ ಒದಗಿಸಿವೆ. ಅವುಗಳಿಗೆ ಎಲ್ಲರ ಬೆಂಬಲ ಮತ್ತು ಸಹಾಯದ ಅಗತ್ಯವಿದೆ ಎಂದು ಹೇಳಿದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಉತ್ತಮ ಸಮಾಜ ನಿರ್ಮಾಣವಾಗಬೇಕಾದರೆ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು. ಉತ್ತಮ ನಡೆನುಡಿಗಳನ್ನು ಕಲಿಸಬೇಕು. ಸಂಸ್ಕಾರವಂತರನ್ನಾಗಿ ಮಾಡಬೇಕು ಎಂದರು.

ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು ಉಪನ್ಯಾಸ ನೀಡಿದರು. ಶ್ರೀ ವಿಜಯಕುಮಾರ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಬೇಲೂರು ಶಾಸಕರಾದ ಶ್ರೀ ಕೆ.ಎಸ್. ಲಿಂಗೇಶ್ ಮಾತನಾಡಿದರು. ಕನಕಪುರ, ಬೆಟ್ಟದಪುರ, ಬೆಳಗೋಡು, ಹಳೇಬೀಡು, ಸೋಮನಹಳ್ಳಿ, ಕೊಡ್ಲಿಪೇಟೆ, ಯಸಳೂರು ಮಠಗಳ ಶ್ರೀಗಳು, ಶ್ರೀ ಹೆಚ್.ಎಸ್. ಶಂಕರಯ್ಯ, ಶ್ರೀ ಬಿ.ಪಿ. ಐಸಾಮಿಗೌಡ, ಶ್ರೀ ಸಿದ್ದೇಶ್ ನಾಗೇಂದ್ರ, ಶ್ರೀ ಹೆಚ್.ಎನ್. ದೇವರಾಜ್‌ರವರುಗಳು ಉಪಸ್ಥಿತರಿದ್ದರು. ಕು. ಭೂಮಿಕಾ ಪ್ರಾರ್ಥಿಸಿದರು. ಶ್ರೀ ರೇಣುಕಪ್ರಸಾದ್ ಸ್ವಾಗತಿಸಿದರು. ಶ್ರೀಮತಿ ಸೃಜಲದೇವಿ ಹಾಗೂ ಡಾ. ಬಸವರಾಜು ಕಾರ್ಯಕ್ರಮ ನಿರೂಪಿಸಿದರು. ಶ್ರೀ ರವೀಂದ್ರ ವಂದಿಸಿದರು.

**ಭಗವಂತನಲ್ಲಿ ಅಚಲವಾದ ನಂಬಿಕೆಯಿರಬೇಕು**

ಭಗವಂತನಲ್ಲಿ ಅಚಲವಾದ ನಂಬಿಕೆಯಿರಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 27ರಂದು ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕು ಯಡ್ರಾಮಿಯಲ್ಲಿ ಗ್ರಾಮದೇವತೆ ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ನೂತನ ದೇವಸ್ಥಾನದ ಉದ್ಘಾಟನೆಯ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ದೇವರು ಇದ್ದಾನೆ ಎಂಬ ಬಲವಾದ ನಂಬಿಕೆಯಿಂದ ದೇವಸ್ಥಾನಕ್ಕೆ ಹೋಗಬೇಕು. ವಿಶ್ವಾಸ ಮತ್ತು ನಂಬಿಕೆಯೇ ದೇವರು. ಜಗತ್ತಿನಲ್ಲಿ ತಾಯಿಯ ವಾತ್ಸಲ್ಯ ಬಹಳ ದೊಡ್ಡದು. ತಾಯಿಗೆ ಪರ್ಯಾಯ ಮತ್ತೊಂದಿಲ್ಲ. ಜಗತ್ತಿನ ಯಾವ ಬೆಲೆಬಾಳುವ ವಸ್ತುಗಳಿಂದಲೂ ತಾಯಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ದೈವಸಮಾನಳಾದ ತಾಯಿಯ ಸ್ಥಾನವನ್ನು ಯಾರೂ ತುಂಬಲಾರರು ಎಂದರು.

ಶಾಸಕರಾದ ಡಾ. ಅಜಯ್‌ಸಿಂಗ್‌ರವರು ಯಡ್ರಾಮಿಯಲ್ಲಿ ನೂತನ ದೇವಸ್ಥಾನವನ್ನು ನಿರ್ಮಿಸಿರುವುದು ಅತ್ಯಂತ ಸಂತೋಷದ ಸಂಗತಿ. ಈ ನೂತನ ದೇವಸ್ಥಾನಕ್ಕೆ ಅವರು ಅನುದಾನ ನೀಡುವುದಾಗಿ ತಿಳಿಸಿದರು.

ಸೊನ್ನದ ಡಾ. ಶ್ರೀ ಶಿವಾನಂದ ಸ್ವಾಮಿಗಳು, ಯಡ್ರಾಮಿಯ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಬೈಲಹೊಂಗಲದ ಶ್ರೀ ಪ್ರಭು ನೀಲಕಂಠ ಸ್ವಾಮಿಗಳು, ವಿಧಾನಪರಿಷತ್ ಸದಸ್ಯರಾದ ಶ್ರೀ ಬಿ.ಜಿ. ಪಾಟೀಲ್, ಮಾಜಿ ಶಾಸಕರಾದ ಶ್ರೀ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ ಮೊದಲಾದವರು ಉಪಸ್ಥಿತರಿದ್ದರು.

**ಮಠಗಳು ಸಮಾಜದ ನಂದಾದೀಪ**

ಅನ್ನ, ಅರಿವು, ಆಶ್ರಯಗಳ ಮೂಲಕ ಸಮಾಜದ ಅಭಿವೃದ್ಧಿಯಲ್ಲಿ ತೊಡಗಿರುವ ಮಠಗಳು ಸಮಾಜದ ನಂದಾದೀಪಗಳಾಗಿವೆ ಎಂದು ಪರಮಪೂಜ್ಯ ಜಗದ್ಗುರುಗಳವರು

ಏಪ್ರಿಲ್ 28ರಂದು ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕು ಶೇಗುಣಿಸಿ ವಿರಕ್ತಮಠದ ನಿ.ಪ್ರ.ಸ್ವ. ಶ್ರೀ ಶಂಕರ ಸ್ವಾಮಿಗಳವರ ಅಮೃತ ಮಹೋತ್ಸವ ಹಾಗೂ ಡಾ. ಶ್ರೀ ಮಹಾಂತದೇವರ ನಿರಂಜನ ಚರ ಪಟ್ಟಾಧಿಕಾರ ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಶ್ರೀ ಶಂಕರ ಸ್ವಾಮಿಗಳು ಶಾಂತಮೂರ್ತಿಗಳಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಇಂದಿನ ಯುವಕರು ಸಾಮಾಜಿಕ ಜಾಲತಾಣಗಳಲ್ಲಿ ಅನಗತ್ಯ ಸಮಯ ವ್ಯರ್ಥ ಮಾಡದೆ ಪುಸ್ತಕ ಓದುವ, ತಂದೆ–ತಾಯಿಯಗಳಿಗೆ ವಿವಿಧ ಕೆಲಸಗಳಲ್ಲಿ ನೆರವಾಗುವ ಮನಃಸ್ಥಿತಿ ಬೆಳೆಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಶಂಕರ ಸ್ವಾಮಿಗಳು ಹಾಗೂ ಡಾ. ಶ್ರೀ ಮಹಾಂತ ದೇವರುಗಳನ್ನು ಪರಮಪೂಜ್ಯ ಜಗದ್ಗುರುಗಳು ಸನ್ಮಾನಿಸಿ ಹಾರೈಸಿದರು. ಮೋಟಗಿಮಠದ ಶ್ರೀ ಪ್ರಭುಚನ್ನಬಸವ ಸ್ವಾಮಿಗಳು, ಹಂದಿಗುಂದದ ಶ್ರೀ ಶಿವಾನಂದ ಸ್ವಾಮಿಗಳು, ಕಮತೇನಟ್ಟಿ ಶ್ರೀ ಗುರುದೇವ ದೇವರು, ಶ್ರೀ ವಿಜಯಮಹಾಂತದೇವರು ಉಪಸ್ಥಿತರಿದ್ದರು.

**ಮಠಾಧಿಪತಿಗಳಾಗುವುದು ಅಲಗಿನ ಮೇಲಿನ ನಡಿಗೆಯಂತೆ**

ಮಠಾಧಿಪತಿಗಳಾಗುವುದು ಸುಲಭದ ಕಾರ್ಯವಲ್ಲ, ಅದು ಅಲಗಿನ ಮೇಲಿನ ನಡಿಗೆಯಂತೆ ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 28ರಂದು ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕು ಅರಳೀಕಟ್ಟಿಯ ಶ್ರೀ ತೋಂಟದಾರ್ಯ ಮಠದ ಶ್ರೀ ಶಿವಮೂರ್ತಿದೇವರ ಪಟ್ಟಾಧಿಕಾರದ ನಿಮಿತ್ತ ನಡೆದ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಸ್ವಾಮಿಗಳಾದವರಿಗೆ ಪ್ರತಿ ಕ್ಷಣವೂ ಜವಾಬ್ದಾರಿಯುತ ಕರ್ತವ್ಯಗಳಿರು ತ್ತವೆ. ಶಿವಮೂರ್ತಿದೇವರು ಕ್ರಿಯಾಶೀಲರಾಗಿದ್ದು ಮಠವನ್ನು ಸರಾಗವಾಗಿ ಮುನ್ನಡೆಸಿಕೊಂಡು ಹೋಗಲಿದ್ದಾರೆ. ಗ್ರಾಮೀಣ ಪ್ರದೇಶಗಳು ಅಭಿವೃದ್ಧಿಯಾಗಬೇಕೆಂದರೆ ಜನ ವಿದ್ಯಾವಂತರಾಗಬೇಕು. ಮಕ್ಕಳು ಉತ್ತಮ ಸಂಸ್ಕಾರ ಮತ್ತು ಶಿಕ್ಷಣವನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ನಾಗನೂರು ಶ್ರೀ ರುದ್ರಾಕ್ಷಿಮಠದ ಡಾ. ಶ್ರೀ ಅಲ್ಲಮಪ್ರಭು ಸ್ವಾಮಿಗಳು ಸುತ್ತೂರು ಶ್ರೀಗಳು ಮಾತೃಹೃದಯದ ಮಮತಾಮೂರ್ತಿ. ನಮ್ಮಂತಹ ಯುವಸಾಧಕರ ಮೇಲೆ ಅಪಾರವಾದ ಭರವಸೆಯನ್ನಿಟ್ಟು ನಮಗೆಲ್ಲ ಮಾರ್ಗದರ್ಶಕರಾಗಿ ಆಶೀರ್ವದಿಸುತ್ತಿದ್ದಾರೆ ಎಂದರು.

ವಿಧಾನಪರಿಷತ್ ಸದಸ್ಯರಾದ ಶ್ರೀ ಚನ್ನರಾಜ ಹಟ್ಟಿಹೊಳಿ ಮಾತನಾಡಿದರು. ಕುಂದರಗಿಯ ಶ್ರೀ ಅಮರಸಿದ್ಧೇಶ್ವರ ಸ್ವಾಮಿಗಳು, ಬೈಲಹೊಂಗಲದ ಶ್ರೀ ಪ್ರಭುನೀಲಕಂಠ ಸ್ವಾಮಿಗಳು ಉಪಸ್ಥಿತರಿದ್ದರು. ತಾರಿಹಾಳದ ಶ್ರೀ ಅಡವೀಶದೇವರು ಕಾರ್ಯಕ್ರಮ ನಿರೂಪಿಸಿದರು.

**ಸಹಾಯಹಸ್ತ ಚಾಚುವಂತಹ ಉದಾರ ಆಲೋಚನೆಗಳನ್ನು ರೂಢಿಸಿಕೊಳ್ಳಬೇಕು**

ಅಸಹಾಯಕರಿಗೆ ಸಹಾಯಹಸ್ತ ಚಾಚುವಂತಹ ಉದಾರ ಆಲೋಚನೆಗಳನ್ನು ರೂಢಿಸಿಕೊಳ್ಳಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 28ರಂದು ವಿಜಯಪುರದ ಡಾ. ಮಹಾಂತೇಶ ಬಿರಾದಾರರವರ ನಿವಾಸದಲ್ಲಿ ಆಯೋಜಿಸಿದ್ದ ಸತ್ಸಂಗದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಬಿರಾದಾರರವರು ಸ್ನೇಹಜೀವಿಗಳು, ಕ್ರಿಯಾಶೀಲರು, ಸಹಾಯ-ಸಹಕಾರದ ಮನೋಭಾವವುಳ್ಳವರು. ಸಮಾಜದಲ್ಲಿ ಸುಧಾರಣೆಗಳನ್ನು ತರಬೇಕೆನ್ನುವ ಆಕಾಂಕ್ಷೆಯುಳ್ಳವರು. ಉದಾತ್ತ ಗುಣಗಳನ್ನು ಮೈಗೂಡಿಸಿಕೊಂಡು ಆದರ್ಶಯುತವಾದ ಜೀವನವನ್ನು ಸಾಗಿಸುತ್ತಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಶ್ರೀ ಬಾಪುರಾಯ ಲೋಣಿ, ಡಾ. ಅರವಿಂದ ಪಾಟೀಲ, ಡಾ. ಹೆಚ್.ವಿ. ಕರಿಗೌಡರ, ಡಾ. ಪ್ರಭುಗೌಡ ಪಾಟೀಲ, ಶ್ರೀ ಪಿ.ಕೆ. ಪ್ರಶಾಂತ, ಡಾ. ಕಂಠೀರವ ಕಲ್ಲೋಳಿ, ಡಾ. ಎಂ.ಎಸ್. ಮದಬಾವಿ, ಶ್ರೀ ಸಾಯಿಬಾಬಾ ಸಿಂದನಗೇರಿ, ಡಾ. ಪ್ರಹ್ಲಾದ್ ಪಾಟೀಲರವರುಗಳನ್ನು ಸನ್ಮಾನಿಸಲಾಯಿತು.

**ಶ್ರದ್ಧೆ ಮತ್ತು ನಿಷ್ಠೆಯಿಂದ ಕರ್ತವ್ಯ ನಿರ್ವಹಿಸಬೇಕು**

ಪ್ರತಿಯೊಬ್ಬರೂ ಅವರಿಗೆ ವಹಿಸಿದ ಹೊಣೆಗಾರಿಕೆಗಳನ್ನು ಶ್ರದ್ಧೆ ಮತ್ತು ನಿಷ್ಠೆಯಿಂದ ನಿರ್ವಹಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಏಪ್ರಿಲ್ 29ರಂದು ಧಾರವಾಡದ ಕೆಲಗೇರಿಯ ಜೆಎಸ್ಎಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠದ ಧಾರವಾಡ ವಿಭಾಗೀಯ ಕಚೇರಿಯ ಆಡಳಿತಾಧಿಕಾರಿಗಳಾಗಿದ್ದ ಶ್ರೀ ಎಂ.ಪಿ. ಬಗಲಿಯವರಿಗೆ ಅಭಿನಂದನೆ ಹಾಗೂ ನೂತನ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಜಿ. ಬಿರಾದಾರ್‌ರವರ ಸ್ವಾಗತ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು. ಶ್ರದ್ಧೆ ಮತ್ತು ನಿಷ್ಠೆಯಿಂದ ಕಾರ್ಯನಿರ್ವಹಿಸಿದಾಗ ಸಮಾಜದಲ್ಲಿ ಸ್ಥಾನಮಾನ ಒಲಿದು ಬರುತ್ತದೆ. ಬಗಲಿ ಅವರು ಉತ್ತಮ ಆಡಳಿತದಿಂದ ಸಂಸ್ಥೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರ 18 ವರ್ಷಗಳ ಸೇವಾ ಅವಧಿಯ ಕರ್ತವ್ಯಪರತೆ ಮತ್ತು ಸೇವಾಮನೋಭಾವ ಸ್ಮರಣೀಯ ಎಂದರು.

ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್‌ರವರು ಧಾರವಾಡದಲ್ಲಿ ಸಂಸ್ಥೆ ಈ ಮಟ್ಟಕ್ಕೆ ಬೆಳೆಯಲು ಬಗಲಿಯವರ ಸೇವೆ ಮಹತ್ವದ್ದು. ಧಾರವಾಡದಲ್ಲಿ ಸಂಸ್ಥೆ ಯಾವುದೇ ಸಮಸ್ಯೆಗಳಿಲ್ಲದೆ ಮುಂದುವರಿದುಕೊಂಡು ಹೋಗುವಲ್ಲಿ ಶ್ರಮಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಶ್ರೀ ಎಂ.ಪಿ. ಬಗಲಿಯವರು 84 ವರ್ಷ ವಯಸ್ಸಾದರೂ ಕರ್ತವ್ಯದಲ್ಲಿ ಉತ್ಸಾಹ,

ಹುಮ್ಮಸ್ಸು, ತಾಳ್ಮೆಯಿಂದ ಶ್ರಮಿಸಿದ್ದಾರೆ. ಅವರಲ್ಲಿರುವ ತಾಳ್ಮೆಯನ್ನು ನಾವು ಮಾದರಿಯಾಗಿ ತೆಗೆದುಕೊಳ್ಳಬೇಕು ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಮಹೇಶ್, ಜೆಎಸ್‌ಎಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಶ್ರೀ ಬಿ.ಎಂ. ಪಾಟೀಲ್, ವಾಕ್ ಮತ್ತು ಶ್ರವಣ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಶಬರೀಶ್, ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಲಿಲಿಯನ್ ಅಂತೋನಿ ಶಾನ್, ಸಹಾಯಕ ಆಡಳಿತಾಧಿಕಾರಿಗಳಾದ ಶ್ರೀ ಮಹೇಂದ್ರ ಪಟೇಲ್, ಕಟ್ಟಡ ನಿರ್ಮಾಣ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ.ಸಿ. ತಲ್ಲೂರುರವರು ಶ್ರೀ ಎಂ.ಪಿ. ಬಗಲಿ ಅವರೊಂದಿಗಿನ ಒಡನಾಟದ ಕುರಿತು ಮಾತನಾಡಿದರು. ಶ್ರೀ ಪ್ರಕಾಶ್ ಎಸ್. ಅಂಗಡಿಯವರು ಬಗಲಿಯವರ ಪರಿಚಯವನ್ನು ಮಾಡಿದರು. ಕು. ಶ್ರೇಯಾ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀಮತಿ ಶ್ವೇತಾ ಪಾಟೀಲ್ ಸ್ವಾಗತಿಸಿದರು. ಶ್ರೀ ಡಿ. ದರ್ಶನ ವಂದಿಸಿದರು. ಶ್ರೀ ಡಿ.ಜಿ. ರಾಜಶೇಖರಪ್ಪಗೌಡ ಕಾರ್ಯಕ್ರಮ ನಿರೂಪಿಸಿದರು.

**ಜೆಎಸ್‌ಎಸ್ ಮಹಿಳಾ ಕಾಲೇಜಿನ 13ನೇ ಪದವೀಧರರ ದಿನಾಚರಣೆ**

ಏಪ್ರಿಲ್ 30ರಂದು ಜೆಎಸ್‌ಎಸ್ ಮಹಿಳಾ ಕಾಲೇಜಿನ 13ನೇ ಪದವೀಧರರ ದಿನಾಚರಣೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ನೆರವೇರಿತು. 2019–20ನೇ ಸಾಲಿನ ಶೈಕ್ಷಣಿಕ ವರ್ಷದ ಒಟ್ಟು 670 ವಿದ್ಯಾರ್ಥಿನಿಯರಿಗೆ ಪದವಿ ಪ್ರದಾನ ಮಾಡಲಾಯಿತು.

ಕೇಂದ್ರ ಸರ್ಕಾರದ ಶಿಕ್ಷಣ ಮತ್ತು ವಿದೇಶಾಂಗ ಇಲಾಖೆ ರಾಜ್ಯ ಖಾತೆ ಸಚಿವರಾದ ಸನ್ಮಾನ್ಯ ಡಾ. ರಾಜ್‌ಕುಮಾರ್ ರಂಜನ್ ಸಿಂಗ್‌ರವರು ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜು ಭಾರತದ ಖಾಸಗಿ ಸ್ವಾಯತ್ತ ಕಾಲೇಜುಗಳ ಸಮೀಕ್ಷೆಯ ಪ್ರಕಾರ ರಾಜ್ಯಮಟ್ಟದಲ್ಲಿ 5ನೇ ರ‍್ಯಾಂಕ್ ಮತ್ತು ರಾಷ್ಟ್ರಮಟ್ಟದಲ್ಲಿ 25ನೇ ರ‍್ಯಾಂಕ್ ಪಡೆಯುವ ಹೆಗ್ಗಳಿಕೆಗೆ ಕಾರಣರಾದ ಆಡಳಿತ ಮಂಡಳಿ, ಪ್ರಾಂಶುಪಾಲರು, ಅಧ್ಯಾಪಕ ವೃಂದ ಮತ್ತು ವಿದ್ಯಾರ್ಥಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದರು. ಸಮಾಜದ ಮೂಲ ಉದ್ದೇಶವಾದ ಜ್ಞಾನಗಳಿಕೆ ಮತ್ತು ಪ್ರಸರಣಕ್ಕೆ ಮುಖ್ಯವಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಜೊತೆಜೊತೆಯಲ್ಲಿ ಕಾರ್ಯ ನಿರ್ವಹಿಸಬೇಕೆಂದು ಕರೆ ನೀಡಿದರು. ಶೈಕ್ಷಣಿಕ ಸಾಧನೆಯಿಂದಲೇ ಮಹಿಳೆಯರ ಸಬಲೀಕರಣ ಎಂಬ ಕಾಲೇಜಿನ ಧ್ಯೇಯವಾಕ್ಯ ಆದರ್ಶನೀಯವಾಗಿದೆ. ಭಾರತೀಯ ಸಂಸ್ಕೃತಿಯ ಸಾರವನ್ನು ಅವನತಿಗೊಳಿಸುವಂತಹ ಯಾವುದೇ ಚಟುವಟಿಕೆಗಳಲ್ಲಿ ಭಾಗಿಯಾಗಬಾರದು. ಸಂಸ್ಕೃತಿಯ ಪರಿಕಲ್ಪನೆಯಲ್ಲಿ ಬರುವ ಜ್ಞಾನ, ಕಲೆ, ನೀತಿನಿಯಮ, ನಂಬಿಕೆಗಳು ಮುಂತಾದ ಅಸಂಖ್ಯಾತ ವಿಷಯಗಳು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮುಂದುವರೆಯುವ ಅಗತ್ಯವಿದೆ. "ವಸುದೈವ ಕುಟುಂಬಕಂ" ಮತ್ತು "ಅಹಂ ಬ್ರಹ್ಮಾಸ್ಮಿ" ಎಂಬ ವಿಚಾರಧಾರೆಯ

ಮೂಲ ಉದ್ದೇಶಗಳನ್ನು ತಿಳಿಸುತ್ತಾ ನೂತನ ಪದವೀಧರರಿಗೆ ಉಜ್ವಲ ಭವಿಷ್ಯವನ್ನು ಹಾರೈಸಿದರು.

ಹೆಚ್ಚು ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಹೊಂದಿದವರಿಗೆ ಮಣಿಪುರ ರಾಜ್ಯದ ಇಂಫಾಲ ಮಾಡ್ರನ್ ಕಾಲೇಜಿನ ಭೂಗೋಳಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ಡಾ. ರಾಜ್‌ಕುಮಾರ್ ರಂಜನ್ ಸಿಂಗ್‌ರವರ ಶ್ರೀಮತಿಯವರಾದ ಪ್ರೊ. ದೇಬಲ ದೇವಿಯವರು ಪ್ರಶಸ್ತಿ ಪತ್ರ ಮತ್ತು ಪದಕಗಳನ್ನು ಪ್ರದಾನ ಮಾಡಿದರು.

2019–20ನೇ ಸಾಲಿನ ಒಟ್ಟು 670 ವಿದ್ಯಾರ್ಥಿನಿಯರು ಪದವಿಯನ್ನು ಪಡೆದರು. ಪದವಿ ಕೋರ್ಸುಗಳಲ್ಲಿ ಒಟ್ಟು 557 ವಿದ್ಯಾರ್ಥಿನಿಯರಲ್ಲಿ 331 ವಿದ್ಯಾರ್ಥಿನಿಯರು ಉನ್ನತ ದರ್ಜೆ, 185 ವಿದ್ಯಾರ್ಥಿನಿಯರು ಪ್ರಥಮ ದರ್ಜೆ, 38 ವಿದ್ಯಾರ್ಥಿನಿಯರು ದ್ವಿತೀಯ ದರ್ಜೆಯನ್ನು ಪಡೆದಿರುವರು. ಸ್ನಾತಕೋತ್ತರ ಪದವಿ ಕೋರ್ಸುಗಳಲ್ಲಿ ಒಟ್ಟು 113 ವಿದ್ಯಾರ್ಥಿನಿಯರಲ್ಲಿ 17 ವಿದ್ಯಾರ್ಥಿನಿಯರು ಉನ್ನತ ದರ್ಜೆ, 96 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯನ್ನು ಪಡೆದಿರುವರು.

ಕಲಾ ವಿಭಾಗದಲ್ಲಿ ಕು. ಆರ್. ಕುಸುಮಿತ, ವಿಜ್ಞಾನ ವಿಭಾಗದಲ್ಲಿ ಕು. ಎಸ್. ಸಹನಾ, ವಾಣಿಜ್ಯ ವಿಭಾಗದಲ್ಲಿ ಕು. ಕೆ.ಆರ್. ಐಶ್ವರ್ಯ, ವ್ಯವಹಾರ ನಿರ್ವಹಣ ವಿಭಾಗದಲ್ಲಿ ಕು. ಮೇಘನಾ ಎಸ್. ನಾಯಕ್, ಗಣಕ ವಿಜ್ಞಾನ ವಿಭಾಗದಲ್ಲಿ ಕು. ಎನ್. ದೀಪಿಕಾ, ಎಂಎ ಅರ್ಥಶಾಸ್ತ್ರದಲ್ಲಿ ಕು. ವಿ.ಎಂ. ನೀಲಮ್ಮ, ಎಂಕಾಂನಲ್ಲಿ ಕು. ಕೆ.ಎ. ಅನುಷಾ, ಎಂಎಸ್ಸಿ ರಸಾಯನಶಾಸ್ತ್ರದಲ್ಲಿ ಕು. ಎಸ್. ಮಮತಾ ಮೊದಲಿಗರಾಗಿ ಪದವಿ ಪುರಸ್ಕಾರ ಪಡೆದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಅವರು ವಿದ್ಯಾರ್ಥಿನಿಯರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಅವರು ಸ್ವತಃ ಚಿತ್ರಿಸಿದ ಅರ್ಥಶಾಸ್ತ್ರಜ್ಞರ ಚಿತ್ರಪಟವನ್ನು ಕಾಲೇಜಿಗೆ ಕೊಡುಗೆಯಾಗಿ ನೀಡಿದರು, ಹಾಗೂ ಅರ್ಥಶಾಸ್ತ್ರ ವಿಷಯದಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿನಿಯರಿಗೆ ಬಹುಮಾನವನ್ನು ಪ್ರಾಯೋಜಿಸಿದರು.

ಶಾಸಕರಾದ ಶ್ರೀ ಎಲ್. ನಾಗೇಂದ್ರ, ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿ, ಪ್ರಾಂಶುಪಾಲರಾದ ಡಾ. ಕೆ.ವಿ. ಸುರೇಶ, ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಶ್ರೀ ಎಂ.ಎಂ. ಸ್ವಾಮಿ, ಕಾಲೇಜಿನ ನಿವೃತ್ತ ಪ್ರಾಂಶುಪಾಲರುಗಳು, ಕಾಲೇಜಿನ ಬೋಧಕ–ಬೋಧಕೇತರ ವರ್ಗ, ಪೋಷಕರು, ನೂತನ ಪದವೀಧರರು ಹಾಗೂ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ಶ್ರೀಮತಿ ರೂಪಾ ರವೀಶ್ ಮತ್ತು ಶ್ರೀಮತಿ ಕೆ.ಜಿ. ವಿನುತಾ ಪ್ರಾರ್ಥಿಸಿದರು. ಡಾ. ಎಚ್.ಬಿ. ಸುರೇಶ್ ಸ್ವಾಗತಿಸಿದರು. ಶ್ರೀ ಆರ್.ಎಸ್. ಕುಮಾರ್ ವಂದಿಸಿದರು. ಶ್ರೀಮತಿ ಬಿ.ಎಂ. ಉಮಾದೇವಿ ಅವರು ನಿರೂಪಿಸಿದರು.

□

# ಪ್ರಸಾದ



## ಕೃತಿ-ಸ್ವೀಕೃತಿ

**ಶರಣರು ಮತ್ತು ವಿಚಾರಧಾರೆ**
ಜೆ.ಎಸ್. ಪರಶಿವಮೂರ್ತಿ
ಪ್ರ.: ಸಂವಹನ ಪ್ರಕಾಶನ
ಈವಿನಿಂಗ್ ಬಜಾರ್
ಶಿವರಾಂಪೇಟೆ, ಮೈಸೂರು
ಪು. 172, ಬೆಲೆ: 160/-

**ಎನ್‌ಕೌಂಟರ್**
ಕುಂ.ವೀ. ವೀರಭದ್ರಪ್ಪ
ಪ್ರ.: ಅಂಕಿತ ಪುಸ್ತಕ
ಬಸವನಗುಡಿ ಬೆಂಗಳೂರು
ಪು. 304, ಬೆಲೆ: 330/-

**ಶ್ರೀ ನಿರಾಭಾರಿ ಜಂಗಮಾಧಿಕಾರ ವಿಧಾನ**
ಜಗದ್ಗುರು ಡಾ. ಅನ್ನದಾನೀಶ್ವರ
ಮಹಾಶಿವಯೋಗಿಗಳು
ಪ್ರ.: ಸುವರ್ಣಗಿರಿ ಜ್ಞಾನಮಾಲೆ
ಸುವರ್ಣಗಿರಿ ಸಂಸ್ಥಾನ ವಿರಕ್ತಮಠ
ಕನಕಗಿರಿ, ಕೊಪ್ಪಳ ಜಿಲ್ಲೆ
ಪು. 180, ಬೆಲೆ: 251/-

**ಹರಿದಾಸರು ಸ್ತುತಿಸಿದ ವಿಶ್ವಕರ್ಮ**
ಇಂ. ಭೀಮಸೇನ ಬಡಿಗೇರ
ಪ್ರ.: ಶ್ರೀ ವಿಶ್ವಕಮಯ ಸಾಹಿತ್ಯ
ಪ್ರಚಾರ ಸಮಿತಿ, ವಿದ್ಯಾನಗರ, ಹುಬ್ಬಳ್ಳಿ
ಪು. 68, ಬೆಲೆ: 100/-

**ವಿಶ್ವಕರ್ಮಣ ಪರಂಪರೆ**
ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ
ಪ್ರ.: ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ
ಸಮಿತಿ, ವಿದ್ಯಾನಗರ, ಹುಬ್ಬಳ್ಳಿ
ಪು. 32. ಬೆಲೆ: 30/-

**ಕರೋನ ಮುಕ್ತಿಯ ಕಥನ**
ಡಾ. ಕೆ.ಆರ್. ಸಂಧ್ಯಾರೆಡ್ಡಿ
ಪ್ರ.: ಸಮಯ ಪ್ರಕಾಶನ
ಶ್ರೀನಿವಾಸನಗರ, ಬೆಂಗಳೂರು
ಪು. 136. ಬೆಲೆ: 120/-

**ನೆಲೆಯಾದ ಜೀವಗಳು**
ಡಾ. ಕೆ.ಆರ್. ಸಂಧ್ಯಾರೆಡ್ಡಿ
ಪ್ರ.: ಶಶಿ ಪಬ್ಲಿಕೇಷನ್
ಜಾಲಮಂಗಳ, ರಾಮನಗರ ತಾಲ್ಲೂಕು
ಪು. 190. ಬೆಲೆ: 150/-

**ಶಿವಾಜಿ ಮೂಲ ಕನ್ನಡ ನೆಲ**
**(ಡಾ. ರಾಚಿಂ. ಢೇರೆ ಕೃತಿ ಆಧಾರಿತ)**
ಡಾ. ಸರಜೂ ಕಾಟ್ಕರ್
ಪ್ರ.: ಲೋಹಿಯ ಪ್ರಕಾಶನ
ಗಾಂಧಿನಗರ, ಬಳ್ಳಾರಿ
ಪು. 236. ಬೆಲೆ: 150/-

**ವಿಶ್ವಕರ್ಮ ಜ್ಞಾನಗಂಗೋತ್ರಿ**
ಸಿದ್ಧರಾಮ ವಿ. ಪಟ್ಟಣಶೆಟ್ಟಿ
ಪ್ರ.: ಶೂನ್ಯ ಪ್ರಕಾಶನ
ಓಂ ನಗರ, ಬಸವನ ಬಾಗೇವಾಡಿ
ವಿಜಯಪುರ ಜಿಲ್ಲೆ
ಪು. 102. ಬೆಲೆ: 100/-

**ಸ್ಥಪತಿ**
ಕನ್ನಡಕ್ಕೆ: ಶಾಂತಿನಾಥ ದಿಬ್ಬದ
ಪ್ರ.: ಅಭಿನವ, ಮಾರೇನಹಳ್ಳಿ
ವಿಜಯನಗರ, ಬೆಂಗಳೂರು
ಪು. 344. ಬೆಲೆ: 350/-

**ಮಾದಾರ ಚೆನ್ನಯ್ಯ**
ಡಾ. ಬಸವರಾಜ ಸಬರದ
ಪ್ರ.: ಅಂತಾರಾಷ್ಟ್ರೀಯ ಲಿಂಗಾಯತ
ಧರ್ಮಕೇಂದ್ರ, ಬಸವಕಲ್ಯಾಣ
ಬೀದರ ಜಿಲ್ಲೆ
ಪು. 68. ಬೆಲೆ: 40/-

**ವೀರಶೈವ–ಲಿಂಗಾಯತ ಶಾಸಕರು ಮತ್ತು ಸಂಸದರು**
ಎಸ್. ಸೋಮಶೇಖರ್ ಆರಾಧ್ಯ (ಗಾಂಧಿ)
ಪ್ರ.: ಸಿಂಚನ ಪ್ರಕಾಶನ
ಬಿಡಿಎ ಲೇಔಟ್, ಪಟ್ಟೇಗರ ಪಾಳ್ಯ
ಬೆಂಗಳೂರು
ಪು. 120, ಬೆಲೆ: 100/-

**ಅಣ್ಣನ ಚರಿತ್ರೆಗೆ ಹೊಸ ಬೆಳಕು**
ಸಿದ್ಧರಾಮ ವೀ. ಪಟ್ಟಣಶೆಟ್ಟಿ
ಪ್ರ.: ಶೂನ್ಯ ಪ್ರಕಾಶನ
ಓಂ ನಗರ, ಬಸವನ ಬಾಗೇವಾಡಿ
ವಿಜಯಪುರ ಜಿಲ್ಲೆ
ಪು. 70, ಬೆಲೆ: 80/-

**ಸಮಾಜಮುಖಿ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಸ್ಮೃತಿ ಸಂಚಯ**
ಎನ್. ಜಗದೀಶ್ ಕೊಪ್ಪ
ಶಶಿಧರ ತೋಡಕರ
ಪ್ರ.: ಕರ್ನಾಟಕ ಸಂಘ
ಜಗದ್ಗುರು ತೋಂಟದಾರ್ಯ
ವಿದ್ಯಾಪೀಠದ ಹಿರೇಮಲ್ಲೂರ
ಈಶ್ವರನ್ ಪದವಿಪೂರ್ವ ವಿಜ್ಞಾನ
ಮತ್ತು ವಾಣಿಜ್ಯ ಮಹಾವಿದ್ಯಾಲಯ
ಕಲ್ಯಾಣನಗರ, ಧಾರವಾಡ
ಪು. 672, ಬೆಲೆ: 650/-

**ನಾನು ಮತ್ತು ರೇಷ್ಮೆ**
ಡಾ. ಶಂಕರ ಬಸೆಟ್ಟೆಪ್ಪದಂಡಿನ
ಪ್ರ.: ಸಿಲ್ಕ್ ಅಸೋಸಿಯೇಷನ್ ಆಫ್
ಇಂಡಿಯಾ, ಬಸವನಗುಡಿ
ಬೆಂಗಳೂರು ಪು. 424, ಬೆಲೆ: 250/-

**ಸರ್ ಸಿ.ಆರ್. ರೆಡ್ಡಿ ವಿಚಾರಗಳು ಮತ್ತು ವಿಶ್ಲೇಷಣೆಗಳು**
ಕನ್ನಡಕ್ಕೆ: ಡಾ. ಕೆ.ಆರ್. ಸಂಧ್ಯಾರೆಡ್ಡಿ
ಪ್ರ.: ಕರ್ನಾಟಕ ರೆಡ್ಡಿ ಜನಸಂಘ
ಕೋರಮಂಗಲ, ಬೆಂಗಳೂರು
ಪು. 396, ಬೆಲೆ: 500/-

**ಶಿವನೆಡೆಗೆ ನಡೆದರು ನಡೆದಾಡುವ ದೇವರು**
ಬಿ.ಟಿ. ಬೆಳಗಟ್ಟ
ಪ್ರ.: ಸಿದ್ಧರಾಮೇಶ್ವರ ಬಡಾವಣೆ
ಲೆನಿನ್ ನಗರ, ದಾವಣಗೆರೆ
ಪು. 184, ಬೆಲೆ: 180/-

**ಹರನೆಂಬುದೇ ಸತ್ಯ**
ಕೃಷ್ಣಮೂರ್ತಿ ಹನೂರು
ಪ್ರ.: ಲೋಹಿಯ ಪ್ರಕಾಶನ
ಗಾಂಧಿನಗರ, ಬಳ್ಳಾರಿ
ಪು. 160, ಬೆಲೆ: 100/-

---

## ಲೇಖಕರ ವಿಳಾಸ

**ಶ್ರೀ ಜಯರಾಜೇಂದ್ರರು**
ಶ್ರೀ ಸುತ್ತೂರು ಮಠ
ಚಾಮುಂಡಿ ಬೆಟ್ಟದ ತಪ್ಪಲು
ಮೈಸೂರು–270025

**ಡಾ. ಚಿದಾನಂದ ಚಿಕ್ಕಮಠ**
ಸಹಾಯಕ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಶರಣಬಸವ ವಿಶ್ವವಿದ್ಯಾಲಯ
ವಿದ್ಯಾನಗರ, ಕಲಬುರಗಿ–582103
ಮೊ : 9019591118

**ಶ್ರೀ ಸಂಗಮೇಶ ಎನ್. ಜವಾದಿ**
ನಂ. 3/135
ರಾಜ್ ಖಾನಾವಳಿ
ಆರ್ಯ ಸಮಾಜದ ಹತ್ತಿರ
ಚಿಟಗುಪ್ಪಾ
ಚಿಟಗುಪ್ಪಾ ತಾಲ್ಲೂಕು
ಬೀದರ ಜಿಲ್ಲೆ 585412
ಮೊ.: 9663809340

**ಫಾರಂ (ರೂಲ್ 8 ರಂತೆ)**

**'ಪ್ರಸಾದ' ದ್ವೈಮಾಸಿಕದ ಮಾಲಿಕತ್ವ ಮತ್ತು ಇತರ ವಿವರಗಳು**

| | | |
|---|---|---|
| 1. ಪತ್ರಿಕೆಯ ಹೆಸರು<br>ಮತ್ತು ವಿಳಾಸ | : | ಪ್ರಸಾದ<br>ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು |
| 2. ದ್ವೈಮಾಸಿಕವೆ ? ಮಾಸಿಕವೆ ?<br>ವಾರಪತ್ರಿಕೆಯೆ ? | : | ದ್ವೈಮಾಸಿಕ |
| 3. ಪ್ರಕಾಶಕರ ಹೆಸರು ಮತ್ತು<br>ವಿಳಾಸ | : | ಸಿ.ಜಿ. ಬೆಟಸೂರಮಠ<br>ಕಾರ್ಯನಿರ್ವಾಹಕ ಕಾರ್ಯದರ್ಶಿ<br>ಜೆಎಸ್‌ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 4. ಸಂಪಾದಕರ ಹೆಸರು | : | ಮಲೆಯೂರು ಗುರುಸ್ವಾಮಿ |
| ಭಾರತೀಯರೆ, ಹೊರದೇಶದವರೆ ? | : | ಭಾರತೀಯರು |
| ಮತ್ತು ವಿಳಾಸ | : | ಪ್ರಕಟಣ ವಿಭಾಗ<br>ಜೆಎಸ್‌ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |
| 5. ಮುದ್ರಕರ ಹೆಸರು ಮತ್ತು<br>ವಿಳಾಸ | : | ಜೆಎಸ್‌ಎಸ್ ಮುದ್ರಣಾಲಯ<br>ಮೈಸೂರು 570 004 |
| 6. ಭಾರತೀಯರೆ, ಹೊರದೇಶದವರೆ ? | : | ಭಾರತೀಯರು |
| 7. ಪತ್ರಿಕೆಯ ಮಾಲೀಕತ್ವ ಮತ್ತು ವಿಳಾಸ<br>ಒಬ್ಬರಿಗಿಂತ ಹೆಚ್ಚು ಜನ ಅದರ<br>ಒಡೆತನದಲ್ಲಿದ್ದರೆ ಅವರ ಹೆಸರು,<br>ವಿಳಾಸ ಮತ್ತು ವಿವರಗಳು | : | ಜೆಎಸ್‌ಎಸ್ ಮಹಾವಿದ್ಯಾಪೀಠ<br>ಮೈಸೂರು 570 004 |

ಮೇಲಿನ ವಿವರಗಳು ಸತ್ಯ ಮತ್ತು ನೈಜವಾದ ವಿವರಗಳೆಂದು ಹೇಳುತ್ತೇನೆ.

ಸಿ.ಜಿ. ಬೆಟಸೂರಮಠ
ಪ್ರಕಾಶಕ, 'ಪ್ರಸಾದ' ದ್ವೈಮಾಸಿಕ
ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಮೈಸೂರು ಶಕ್ತಿಧಾಮದಲ್ಲಿ ಇನ್ಫೋಸಿಸ್ ಫೌಂಡೇಷನ್ ವತಿಯಿಂದ ನಿರ್ಮಿಸಿರುವ ನೂತನ ಕಟ್ಟಡದ ಉದ್ಘಾಟನೆ ಮತ್ತು ಶಕ್ತಿಧಾಮ ವಿದ್ಯಾಶಾಲಾದ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ನೆರವೇರಿಸಿದರು. ಶ್ರೀ ಪ್ರತಾಪ ಸಿಂಹ, ಶ್ರೀ ಎಸ್.ಎ. ರಾಮದಾಸ್, ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಸಂದೇಶ್ ನಾಗರಾಜ್, ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ, ಶ್ರೀ ಜಿ.ಎಸ್. ಜಯದೇವ, ಡಾ. ಶಿವರಾಜ್‌ಕುಮಾರ್, ಶ್ರೀ ಷಾಜಿ ಮ್ಯಾಥ್ಯು ಮತ್ತು ಶ್ರೀಮತಿ ಗೀತಾ ಶಿವರಾಜ್‌ಕುಮಾರ್‌ರವರುಗಳಿದ್ದಾರೆ (7 ಏಪ್ರಿಲ್ 2022)



ತಮಿಳುನಾಡಿನ ತಾಳವಾಡಿಯ ಬಸವ ಸಮಿತಿ, ವೀರಶೈವ ಮಹಾಸಭಾ ಹಾಗೂ ವೀರಶೈವ–ಲಿಂಗಾಯತ ಯುವವೇದಿಕೆಯ ವತಿಯಿಂದ ಆಯೋಜಿಸಿದ್ದ ಸಭಾಭವನ ಕಟ್ಟಡದ ಭೂಮಿಪೂಜೆ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಜಯವಿಭವಸ್ವಾಮಿ, ಶ್ರೀ ಎನ್.ಕೆ.ಕೆ. ಪೆರಿಯಸ್ವಾಮಿ, ಡಾ. ಸಿ. ಸೋಮಶೇಖರ್, ಶ್ರೀ ಈಶ್ವರ್ ಬಿ. ಖಂಡ್ರೆ, ಡಾ. ಶಾಮನೂರು ಶಿವಶಂಕರಪ್ಪ, ಶ್ರೀ ಮೂಡ್ಲುಪುರ ನಂದೀಶ್, ಶ್ರೀ ವರುಣ ಮಹೇಶ್, ಶ್ರೀ ಅಥಣಿ ವೀರಣ್ಣ, ಶ್ರೀ ಅಣಬೇರು ರಾಜಣ್ಣ ಹಾಗೂ ಮಹಾಸಭಾ ಮತ್ತು ಸಮಿತಿಯ ಪದಾಧಿಕಾರಿಗಳಿದ್ದಾರೆ (7 ಮಾರ್ಚ್ 2022)



ಯಳಂದೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ರಜತ ಮಹೋತ್ಸವ ಹಾಗೂ ಜ್ಞಾನದೀಪ ಭವನ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಎಸ್. ದತ್ತೇಶ್, ಶ್ರೀ ಜಿ.ಎನ್. ನಂಜುಂಡಸ್ವಾಮಿ, ಶ್ರೀ ಎನ್. ಮಹೇಶ್, ಬ್ರಹ್ಮಕುಮಾರಿ ಲಕ್ಷ್ಮೀಜಿ, ಶ್ರೀಮತಿ ಪರಿಮಳ ನಾಗಪ್ಪರವರುಗಳಿದ್ದಾರೆ (7 ಮಾರ್ಚ್ 2022)



ರಾಮನಗರ ಜಿಲ್ಲೆ ರೇವಣಸಿದ್ಧೇಶ್ವರ ಬೆಟ್ಟದ ಶ್ರೀ ರೇವಣಸಿದ್ಧೇಶ್ವರಸ್ವಾಮಿ ದಾಸೋಹ ಮಠದಲ್ಲಿ ಸಮುದಾಯ ಭವನ ಉದ್ಘಾಟನೆ, ಉಚಿತ ಸಾಮೂಹಿಕ ವಿವಾಹ, ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮಿಗಳ 15ನೇ ವರ್ಷದ ಪಟ್ಟಾಧಿಕಾರ ವರ್ಧಂತಿ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರು ಹಾಗೂ ಸಿದ್ಧಗಂಗಾ ಶ್ರೀಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಎಂ. ರುದ್ರೇಶ್ ಮೊದಲಾದವರುಗಳಿದ್ದಾರೆ (13 ಮಾರ್ಚ್ 2022)



ಮೈಸೂರಿನ ಮಾನಸಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನಡೆದ ಪ್ರೊ. ನೀಲಗಿರಿ ತಳವಾರ ಅಭಿನಂದನಾ ಸಮಾರಂಭದಲ್ಲಿ ನೀಲಪಥ ಅಭಿನಂದನಾ ಗ್ರಂಥವನ್ನು ಬಿಡುಗಡೆಗೊಳಿಸಲಾಯಿತು. ಶ್ರೀಮತಿ ಮಹಾದೇವಿ ತಳವಾರ, ಪ್ರೊ. ನೀಲಗಿರಿ ತಳವಾರ, ಪ್ರೊ. ಶಿವಪ್ರಕಾಶ ಶಿಗ್ಲಿ, ಪ್ರೊ. ಕೃಷ್ಣಮೂರ್ತಿ ಹನೂರು, ಪ್ರೊ. ಎನ್.ಎಸ್. ತಾರಾನಾಥ, ಪ್ರೊ. ಹಂಪನಾ, ಶ್ರೀ ವಿ. ಶ್ರೀನಿವಾಸಪ್ರಸಾದ್, ಡಾ. ಮನು ಬಳಿಗಾರ್, ಶ್ರೀ ಮ. ವೆಂಕಟರಾಮು. ಪ್ರೊ. ಆರ್.ಎನ್. ಪಾಟೀಲ ಹಾಗೂ ಶ್ರೀ ಎನ್.ಎನ್. ಪಾಟೀಲರವರುಗಳಿದ್ದಾರೆ (5 ಮಾರ್ಚ್ 2022)



ಮೈಸೂರಿನ ಶ್ರೀ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ವತಿಯಿಂದ 2021ರ ಶಕುಂತಲ ಜಯದೇವ ಶರಣ ಪ್ರಶಸ್ತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಶ್ರೀ ಎಲ್. ಶಿವಲಿಂಗಪ್ಪ ಮತ್ತು ಮಾತೆ ಬಸವೇಶ್ವರಿಯವರುಗಳಿಗೆ ಪ್ರದಾನ ಮಾಡಲಾಯಿತು. ಶ್ರೀ ಹೆಳವರಹುಂಡಿ ಸಿದ್ದಪ್ಪ, ಶ್ರೀ ಕುಮಾರಸ್ವಾಮಿ, ಶ್ರೀ ಮ.ಗು. ಸದಾನಂದಯ್ಯ, ಪ್ರೊ. ಮೊರಬದ ಮಲ್ಲಿಕಾರ್ಜುನ, ಪ್ರೊ. ಮಲೆಯೂರು ಗುರುಸ್ವಾಮಿ, ಶ್ರೀಮತಿ ಶಕುಂತಲ ಜಯದೇವ ಹಾಗೂ ಶ್ರೀ ಶಾರದಾ ಶಿವಲಿಂಗಸ್ವಾಮಿಯವರುಗಳಿದ್ದಾರೆ (19 ಮಾರ್ಚ್ 2022)



ಬೆಂಗಳೂರು ಅಕ್ಕಿಪೇಟೆಯ ಶ್ರೀ ದೊಡ್ಡಮಠದಲ್ಲಿ ಶ್ರೀ ಸಿದ್ಧಲಿಂಗೇಶ್ವರರ ದೇವಾಲಯವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನಿಕಟಪೂರ್ವ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಉದ್ಘಾಟಿಸಿದರು. ಶ್ರೀ ದಿನೇಶ್ ಗುಂಡೂರಾವ್, ಶ್ರೀ ಪಿ.ಸಿ. ಮೋಹನ್, ಶ್ರೀ ಶಿವಬಸವ ಸ್ವಾಮಿಗಳು, ಹೊನ್ನಮ್ಮ ಗವಿಮಠದ ಶ್ರೀಗಳು, ಕಂಬಾಳು ಮಠದ ಶ್ರೀಗಳು ಮತ್ತು ಶ್ರೀ ಬಿ.ಎಸ್. ಪರಮಶಿವಯ್ಯನವರುಗಳಿದ್ದಾರೆ (3 ಏಪ್ರಿಲ್ 2022)



ಮೈಸೂರು ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ವೈಜ್ಞಾನಿಕ ಪ್ರಾಣಾಯಾಮ ಸಂಶೋಧಕರಾದ ಡಾ. ದೇವಕಿ ಮಾಧವ್‌ರವರ 'ಸೈಂಟಿಫಿಕ್ ಪ್ರಾಣಾಯಾಮ' ಮತ್ತು 'ಇಂಫ್ಯಾಕ್ಟ್ ಆಫ್ ಸೈನ್ಸ್ ಆಫ್ ಪ್ರಾಣಾಯಾಮ' ಕೃತಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು. ಶ್ರೀ ವಿಶ್ವನಾಥ ಅಯ್ಯ, ಶ್ರೀಮತಿ ನಾಗಲಕ್ಷ್ಮಿ, ಡಾ. ಯೋಗಿ ದೇವರಾಜ, ಡಾ. ರಾಜಶೇಖರ್ ರೆಡ್ಡಿ, ಡಾ. ಲಕ್ಷ್ಮಿ ಶ್ರೀನಿವಾಸ ಮೊದಲಾದವರುಗಳಿದ್ದಾರೆ (20 ಮಾರ್ಚ್ 2022)




ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಟಿ. ಮಾಯಗೌಡನಹಳ್ಳಿಯಲ್ಲಿ ಶ್ರೀ ನಂಜುಂಡೇಶ್ವರ ಸ್ವಾಮಿ ದೇವಸ್ಥಾನದ ಉದ್ಘಾಟನೆ ಹಾಗೂ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಹೆಚ್.ಡಿ. ರೇವಣ್ಣ, ಟಿ. ಮಾಯಗೌಡನಹಳ್ಳಿ, ಬೆಟ್ಟದಪುರ, ಕೊಡ್ಲಿಪೇಟೆ ಕಲ್ಲುಮಠದ ಶ್ರೀಗಳು, ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರವರು, ಶಾಸಕರಾದ ಶ್ರೀ ಎ.ಟಿ. ರಾಮಸ್ವಾಮಿ ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಮೊದಲಾದವರುಗಳಿದ್ದಾರೆ (18 ಮಾರ್ಚ್ 2022)




ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಮೈ ಬಿಲ್ಡ್–21 ವಸ್ತುಪ್ರದರ್ಶನವನ್ನು ಪರಮಪೂಜ್ಯ ಜಗದ್ಗುರುಗಳವರು ಉದ್ಘಾಟಿಸಿದರು. ಶ್ರೀಮತಿ ರೀನಾ ಪ್ರವೀಣ್ ಪಾಲ್, ಶ್ರೀ ನಾಗರಾಜ ವಿ. ಬೈರಿ, ಶ್ರೀ ಎ.ಎಸ್. ಯೋಗನರಸಿಂಹ, ಶ್ರೀ ಕೆ. ಸತೀಶ್ ಮೋಹನ್, ಶ್ರೀ ಕೆ. ಅಜಿತ್ ನಾರಾಯಣ್, ಶ್ರೀ ಎಂ.ಡಿ. ಚಂದ್ರಶೇಖರ್ ಮೊದಲಾದವರುಗಳಿದ್ದಾರೆ (24 ಮಾರ್ಚ್ 2022)



ಪರಮಪೂಜ್ಯ ಜಗದ್ಗುರುಗಳವರು ಹೈದರಾಬಾದ್‌ನಲ್ಲಿ ನೂತನವಾಗಿ ನಿರ್ಮಾಣವಾಗಿರುವ ಸಮಾನತೆಯ ಮೂರ್ತಿ ಶ್ರೀ ರಾಮಾನುಜಾಚಾರ್ಯರ ಪ್ರತಿಮೆಯ ಸಂಕೀರ್ಣಕ್ಕೆ ಭೇಟಿ ನೀಡಿದರು. ಶ್ರೀ ಭೂಪತಿ, ಶ್ರೀ ಮಧೂಸೂಧನ್, ಡಾ. ರಾಜಶೇಖರ್ ಚಕ್ರವರ್ತಿ, ಡಾ. ಕಿರಣ್ಮಯಿ ಚಕ್ರವರ್ತಿ, ಗುರುಕುಲ ಸಾಧಕರು ಹಾಗೂ ಮಠದ ಸೇವಾ ಸಿಬ್ಬಂದಿಗಳಿದ್ದಾರೆ (25 ಏಪ್ರಿಲ್ 2022)




ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ಪಡಗೂರು ಶ್ರೀ ಅಡವಿ ಮಠದಲ್ಲಿ ನೂತನ ಗದ್ದುಗೆ, ಅತಿಥಿಗೃಹ ಹಾಗೂ ಹಿರಿಯರ ಮನೆಯ ಉದ್ಘಾಟನೆಯ ದಿವ್ಯಸಾನ್ನಿಧ್ಯ ವಹಿಸಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವಚನ ನೀಡಿದರು. ಶ್ರೀ ಹೆಚ್.ಎಸ್. ನಂಜಪ್ಪ, ಶಾಸಕರಾದ ಶ್ರೀ ಸಿ.ಎಸ್. ನಿರಂಜನಕುಮಾರ್, ಪಡುಗೂರು ಶ್ರೀಗಳು, ಶ್ರೀ ಕೆ.ಆರ್. ಮಲ್ಲಿಕಾರ್ಜುನಪ್ಪ, ಶ್ರೀ ಹೆಚ್.ಎಂ. ಗಣೇಶಪ್ರಸಾದ್, ಶ್ರೀ ಕೊಡಸೋಗೆ ಶಿವಬಸಪ್ಪನವರುಗಳಿದ್ದಾರೆ (26 ಮಾರ್ಚ್ 2022)




ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜಿಲ್ಲಾ ಕಾನೂನು ಘಟಕವನ್ನು ನಿವೃತ್ತ ಗೌ.ನ್ಯಾ. ಶ್ರೀ ಎಸ್.ಆರ್. ಬನ್ನೂರಮಠರವರು ಉದ್ಘಾಟಿಸಿದರು. ಶ್ರೀ ಕೆ.ಎಸ್. ಮಹದೇವ ಪ್ರಸಾದ್, ಗೌ.ನ್ಯಾ. ಶ್ರೀ ಸುಭಾಷ್ ಬಿ. ಆಡಿ, ಶ್ರೀ ಬಿ.ಆರ್. ಚಂದ್ರಮೌಳಿ, ಶ್ರೀ ಟಿ.ಎಸ್. ಲೋಕೇಶ್, ಶ್ರೀ ಈಶ್ವರ್ ಖಂಡ್ರೆ, ಶ್ರೀ ಶಿವಮೂರ್ತಿ ಕಾನ್ಯರವರುಗಳಿದ್ದಾರೆ (26 ಮಾರ್ಚ್ 2022)



ಮೈಸೂರು ಶ್ರೀ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ವತಿಯಿಂದ ಕುನ್ನಾಳು ಬಸವಲಿಂಗೇಗೌಡರ ದತ್ತಿ ಮತ್ತು ಹರದನಹಳ್ಳಿ ಕಂಚಿ ಮಲ್ಲಪ್ಪ ದತ್ತಿಯ ಗಾನಯೋಗಿ ಪಂಚಾಕ್ಷರ ಗವಾಯಿಗಳ ಸ್ಮರಣಾರ್ಥ ವಚನ ಸಂಗೀತೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಡಾ. ನಾಗೇಶ ವಿ. ಬೆಟ್ಟಕೋಟೆ ಉದ್ಘಾಟಿಸಿದರು. ಶ್ರೀ ಎಂ. ಷಡಕ್ಷರಿ, ಶ್ರೀ ಟಿ.ಎಸ್. ಕುಮಾರಸ್ವಾಮಿ, ಶ್ರೀ ಮ.ಗು. ಸದಾನಂದಯ್ಯ, ಶ್ರೀಮತಿ ಗೀತಾ ಪ್ರಸನ್ನ, ಶ್ರೀಮತಿ ಮಂಗಳ ಮುದ್ದುಮಾದಪ್ಪನವರುಗಳಿದ್ದಾರೆ (26 ಮಾರ್ಚ್ 2022)



ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಸಭಾಂಗಣದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ನಡೆದ ಪ್ರಕಾಶಕರ ದ್ವಿತೀಯ ಸಮ್ಮೇಳನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಆರ್.ಬಿ. ಗದ್ದಗಿಮಠ, ಡಾ. ಎಂ.ಎನ್. ನಂದೀಶ್ ಹಂಚೆ, ಶ್ರೀಮತಿ ಸುನಂದ ಪಾಲನೇತ್ರ, ಶ್ರೀ ಟಿ.ಎಸ್. ಛಾಯಾಪತಿ, ಶ್ರೀ ಪ್ರಕಾಶ ಕಂಬತ್ತಹಳ್ಳಿ ಹಾಗೂ ಶ್ರೀ ಕೆ.ಬಿ. ಕಿರಣ್‌ಸಿಂಗ್‌ರವರುಗಳಿದ್ದಾರೆ (15 ಮಾರ್ಚ್ 2022)




ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕು ಗೌಡಹಳ್ಳಿಯ ಶ್ರೀ ವಿರಕ್ತಮಠದ ಬಳ್ಳಾರಿ ನಿ.ಪ್ರ. ಶ್ರೀ ಮಹಾಂತ ಸ್ವಾಮಿಗಳು ಮತ್ತು ಶ್ರೀ ಸಿದ್ಧಲಿಂಗ ಸ್ವಾಮಿಗಳವರ ಗದ್ದುಗೆಗಳಿಗೆ ಲಿಂಗ ಪ್ರತಿಷ್ಠಾಪನೆ, ಬಸವಭವನ, ಬಸವದ್ವಾರ, ಪ್ರಸಾದನಿಲಯ ಮತ್ತು ಮಠದ ನೂತನ ಕಟ್ಟಡ ಹಾಗೂ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನಿಕಟಪೂರ್ವ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಉದ್ಘಾಟಿಸಿದರು. ಮುಡುಕನಪುರ ಶ್ರೀಗಳು, ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ, ಗೌಡಹಳ್ಳಿ ಶ್ರೀಗಳು, ಶ್ರೀ ಎನ್. ಮಹೇಶ್, ವಾಟಾಳು ಶ್ರೀಗಳು, ಮರಳೆಗವಿಮಠ ಶ್ರೀಗಳು, ಕುಂದೂರು ಮಠ ಮತ್ತು ಸಾಲೂರು ಮಠದ ಶ್ರೀಗಳು ಮೊದಲಾದವರಿದ್ದಾರೆ (31 ಮಾರ್ಚ್ 2022)




ಹುಣಸೂರು ತಾಲ್ಲೂಕು ಗಾವಡಗೆರೆ ಶ್ರೀ ಗುರುಲಿಂಗಜಂಗಮದೇವರ ಮಠದಲ್ಲಿ ಮೈಸೂರು–ಚಾಮರಾಜನಗರ ಜಿಲ್ಲಾ ವೀರಶೈವ–ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ರಾಜೇಂದ್ರ ಶ್ರೀಗಳವರ 106ನೇ ಜಯಂತಿ, ಪ್ರತಿಭಾ ಪುರಸ್ಕಾರ ಹಾಗೂ ಶಿವದೀಕ್ಷೆ–ಲಿಂಗದೀಕ್ಷೆ ಕಾರ್ಯಕ್ರಮವನ್ನು ಸಚಿವರಾದ ಶ್ರೀ ಮುರುಗೇಶ್ ಆರ್. ನಿರಾಣಿಯವರು ಉದ್ಘಾಟಿಸಿದರು. ಡಾ. ಎಂ.ಎನ್. ನಂದೀಶ್ ಹಂಚೆ, ಹರವೆ, ಬೆಟ್ಟದಪುರ, ಗಾವಡಗೆರೆ, ಮಾದಹಳ್ಳಿ, ನೀಲಕಂಠಸ್ವಾಮಿಮಠ, ದಂಡಿಕೆರೆ, ಕುಂದೂರು ಮಠ, ಮುಡಿಗುಂಡಂ ಮಠಗಳ ಶ್ರೀಗಳಿದ್ದಾರೆ (19 ಮಾರ್ಚ್ 2022)




ಹಾವೇರಿ ತಾಲ್ಲೂಕು ಹಂದಿಗನೂರು ಶ್ರೀ ವಿರಕ್ತಮಠದ ನಿ.ಪ್ರ.ಸ್ವ. ಶ್ರೀ ಶಿವಲಿಂಗ ಮಹಾಸ್ವಾಮಿಗಳವರ ವಜ್ರ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನಡೆದ ಪುರಾಣ ಮಹಾಮಂಗಲದಲ್ಲಿ ಹಂದಿಗನೂರು ಮಠದ ನಿ.ಪ್ರ.ಸ್ವ. ಶ್ರೀ ಶಿವಲಿಂಗ ಮಹಾಸ್ವಾಮಿಗಳವರನ್ನು ಪೂಜ್ಯರು ಅಭಿನಂದಿಸಿ ಸನ್ಮಾನಿಸಿದರು (5 ಏಪ್ರಿಲ್ 2022)



ವಿಜಯಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕು ಯರನಾಳ ಶ್ರೀ ವಿರಕ್ತಮಠದ ಶ್ರೀ ಪಂಪಾಪತಿ ಶಿವಯೋಗಿಗಳ ಜಾತ್ರಾ ಮಹೋತ್ಸವ, ಶ್ರೀ ಸಂಗನಬಸವ ಶಿವಯೋಗಿಗಳ ಪುಣ್ಯಾರಾಧನೆಯ ಸುವರ್ಣ ಮಹೋತ್ಸವ ಹಾಗೂ ಶ್ರೀ ಗುರುಸಂಗನಬಸವ ಸ್ವಾಮಿಗಳವರ ದ್ವಾದಶ ಪಟ್ಟಾಭಿಷೇಕ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಚಿ.ಸಿ. ನಿಂಗಣ್ಣ, ಡಾ. ಅಮರೇಶ್, ಬಸವನ ಬಾಗೇವಾಡಿ ಶ್ರೀಗಳು, ಷಣ್ಮುಖಾರೂಢ ಮಠದ ಶ್ರೀಗಳು, ಶ್ರೀ ಬಿ.ಎಂ. ಉಮೇಶ್‌ಕುಮಾರ್, ಯರನಾಳ ಶ್ರೀಗಳು, ಶ್ರೀ ಎಂ.ಬಿ. ಪಾಟೀಲ್, ಶ್ರೀ ಸತೀಶ್ ಜಾರಕಿಹೊಳಿ, ಶ್ರೀ ಶ್ರೀಪಾದ ಪಾಟೀಲ್ ಹಾಗೂ ಶ್ರೀ ಲಕ್ಷ್ಮಣ್‌ರಾವ್‌ರವರುಗಳಿದ್ದಾರೆ (4 ಏಪ್ರಿಲ್ 2022)



ಟಿ. ನರಸೀಪುರ ತಾಲ್ಲೂಕು ಬೆನಕನಹಳ್ಳಿಯಲ್ಲಿ ಗೌಡರ ಶ್ರೀ ಎಸ್. ಜಯಶಂಕರಪ್ಪನವರ ಸಂಸ್ಮರಣೆ ಹಾಗೂ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯ ದಲ್ಲಿ ಶಾಸಕರಾದ ಶ್ರೀ ಎಂ. ಅಶ್ವಿನ್‌ಕುಮಾರ್‌ರವರು ಉದ್ಘಾಟಿಸಿದರು. ಕುದೇರು ಮಠ, ಮಾದ್ದಾರಲಿಂಗಯ್ಯನಹುಂಡಿ, ಕನಕಪುರ, ಕುಂದೂರು ಮಠ ಹಾಗೂ ಕಳ್ಳೀಪುರದ ಮಠಗಳ ಶ್ರೀಗಳಿದ್ದಾರೆ (22 ಮಾರ್ಚ್ 2022)



ಮೈಸೂರು ಶ್ರೀನಗರ ಬಡಾವಣೆಯಲ್ಲಿ ನಡೆದ ಶ್ರೀ ಡಿ. ನಾಗೇಂದ್ರಪ್ಪನವರು ಸಂಪಾದಿಸಿರುವ ಉತ್ತಂಗಿ ಚನ್ನಪ್ಪನವರ ಸಮಗ್ರ ಸಾಹಿತ್ಯ ಸಂಪುಟಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಶ್ರೀ ಡಿ.ಎನ್. ಲೋಕಪ್ಪ, ಶ್ರೀ ಡಿ. ನಾಗೇಂದ್ರಪ್ಪ, ಪ್ರೊ. ಬಿ.ವಿ. ವಸಂತಕುಮಾರ್, ಪ್ರೊ. ಮೊರಬದ ಮಲ್ಲಿಕಾರ್ಜುನ, ಪ್ರೊ. ರಾಗೌ, ಪ್ರೊ. ಸಿಪಿಕೆ, ಡಾ. ಮಂಜುನಾಥಸ್ವಾಮಿ, ಶ್ರೀ ಎಂ. ಚಂದ್ರಶೇಖರ್‌ರವರುಗಳಿದ್ದಾರೆ (9 ಏಪ್ರಿಲ್ 2022)




ಮೈಸೂರಿನ ಆಲನಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ನಿರ್ಮಲ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ವಾಟಾಳು ಶ್ರೀಗಳು, ಡಾ. ಎ.ಪಿ. ನಿರ್ಮಲ, ಕು. ಪ್ರತೀಕ್ಷ, ಕು. ಮಹಾತೇಜ, ಡಾ. ಆರ್. ಬಸವರಾಜು, ಶ್ರೀ ಜಿ.ಡಿ. ಹರೀಶ್‌ಗೌಡ ಹಾಗೂ ಶ್ರೀ ಪ್ರತಾಪ ಸಿಂಹ ಮೊದಲಾದವರುಗಳಿದ್ದಾರೆ (10 ಏಪ್ರಿಲ್ 2022)



ಮೈಸೂರಿನ ನವಜ್ಯೋತಿ ಸಭಾಂಗಣದಲ್ಲಿ ನಡೆದ 'ಹೀಗಿದ್ದರು ಪ್ರಭುಶಂಕರ' ಸ್ಮರಣ ಸಂಪುಟವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಲೋಕಾರ್ಪಣೆಗೊಳಿಸಲಾಯಿತು. ಶ್ರೀ ರವಿಕುಮಾರ್, ಪ್ರೊ. ಎಂ. ಕೃಷ್ಣೇಗೌಡ, ಶ್ರೀ ಕೆ.ಸಿ. ಶಿವಪ್ಪ, ಪ್ರೊ. ಎನ್.ಎಸ್. ತಾರಾನಾಥ್, ಶ್ರೀ ಮುಕ್ತಿದಾನಂದಜೀ ಮಹಾರಾಜ್, ಪ್ರೊ. ಸಿ.ಕೆ. ರೇಣುಕಾರ್ಯ, ಶ್ರೀಮತಿ ಅಸಿತಾ ಪ್ರಭುಶಂಕರ ಮತ್ತು ಶ್ರೀಮತಿ ನಿವೇದಿತಾ ಮೃತ್ಯುಂಜಯರವರುಗಳಿದ್ದಾರೆ (7 ಏಪ್ರಿಲ್ 2022)



ಮೈಸೂರು ಕಮ್ಯುನಿಟಿ ಬಯೋಸ್ಫೇರ್ ಸಂಸ್ಥೆಯು ಹೆಚ್.ವಿ. ರಾಜೀವ್ ಟೌನ್‌ಶಿಪ್‌ನಲ್ಲಿ ನಿರ್ಮಿಸುತ್ತಿರುವ 'ಅವನಿ' ವಸತಿ ಸಮುಚ್ಚಯದ ಭೂಮಿಪೂಜಾ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಮಾಜಿ ಶಾಸಕರಾದ ಶ್ರೀ ವಾಸು, ಶ್ರೀ ಸೋಮಶೇಖರ್ ಶೆಟ್ಟಿ ಹಾಗೂ ಕುಟುಂಬದವರು ಮತ್ತು ಮುಡಾ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್ ಮೊದಲಾದವರುಗಳಿದ್ದಾರೆ (10 ಏಪ್ರಿಲ್ 2022)




ವಿಜಯಪುರ ಜಿಲ್ಲೆ ನಿಡಗುಂದಿ ತಾಲ್ಲೂಕು ಆಲಮಟ್ಟಿಯ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ಸಾಗರ ಅಣೆಕಟ್ಟಿಗೆ ಪರಮಪೂಜ್ಯ ಜಗದ್ಗುರುಗಳು ಭೇಟಿ ನೀಡಿ ಜಲಾಶಯವನ್ನು ವೀಕ್ಷಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದರು. ಕೃಷ್ಣಾ ಜಲಭಾಗ್ಯ ನಿಗಮದ ಸಹಾಯಕ ಅಭಿಯಂತರರಾದ ಶ್ರೀ ವಿಠ್ಠಲ್ ಜಾಧವ್, ಶ್ರೀ ಎಸ್.ಎಸ್. ಹಿರೇಗೌಡರ್, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಂದ್ರಶೇಖರ್ ನುಗ್ಲಿ ಹಾಗೂ ವಲಯ ಅರಣ್ಯಾಧಿಕಾರಿಗಳಾದ ಶ್ರೀ ಮಹೇಶ್ ಪಾಟೀಲ್ ಮೊದಲಾದವರುಗಳಿದ್ದಾರೆ (4 ಏಪ್ರಿಲ್ 2022)



ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜರುಗಿದ ಯುಗಾದಿ ಹಬ್ಬ ಹಾಗೂ ಅಲ್ಲಮಪ್ರಭುದೇವರ ಜಯಂತಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಗಮದ ನಿವೃತ್ತ ನಿರ್ದೇಶಕರಾದ ಶ್ರೀ ಶಂಕರ್ ದೇವನೂರುರವರು ಮಾತನಾಡಿದರು. ಮಠಾಧೀಶರುಗಳು, ಡಾ. ಎಸ್. ಶಿವರಾಜಪ್ಪ ಹಾಗೂ ಡಾ. ಕೆ.ಜಿ. ಪುಟ್ಟಹೊನ್ನಯ್ಯರವರಿದ್ದಾರೆ (2 ಏಪ್ರಿಲ್ 2022)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಗೌರಿಗದ್ದೆ ಸ್ವರ್ಣಪೀಠಿಕಾಪುರಿ ಶ್ರೀ ದತ್ತ ಆಶ್ರಮದ ಅವಧೂತ ಶ್ರೀ ವಿನಯ್ ಗುರೂಜಿಯವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಅಭಿನಂದಿಸಿ ಹಾರೈಸಿದರು (14 ಏಪ್ರಿಲ್ 2022)




ಚಾಮರಾಜನಗರದಲ್ಲಿ ಕದಳಿ ಮಹಿಳಾ ವೇದಿಕೆಯಿಂದ ಆಯೋಜಿಸಿದ್ದ 19ನೇ ವಾರ್ಷಿಕೋತ್ಸವ 'ಕದಳಿ ಸಿರಿ' ಪ್ರಶಸ್ತಿ ಪ್ರದಾನ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಶ್ರೀಮತಿ ಬಿ.ವೈ. ಅರುಣಾದೇವಿಯವರು ಉದ್ಘಾಟಿಸಿದರು. ಶ್ರೀಮತಿ ರತ್ನಮ್ಮ ಬಸವರಾಜು, ಶ್ರೀಮತಿ ಶಶಿಕಲಾ ಮಹದೇವಸ್ವಾಮಿ, ಡಾ. ಡಿ. ಶೀಲಾ ನಂಜಪ್ಪ, ಶ್ರೀಮತಿ ಸುಶೀಲಾ ಸೋಮಶೇಖರ್, ಡಾ. ಗೀತಾ ಮಹದೇವಪ್ರಸಾದ್, ಶ್ರೀಮತಿ ಕಾತ್ಯಾಯಿನಿದೇವಿ, ಶ್ರೀಮತಿ ಪರಿಮಳ ನಾಗಪ್ಪ, ಶ್ರೀಮತಿ ವಸಂತಮ್ಮ ಮಹದೇವಪ್ಪ, ಪ್ರೊ. ಮಲೆಯೂರು ಗುರುಸ್ವಾಮಿ, ಶ್ರೀ ಮಲ್ಲಿಕಾರ್ಜುನಸ್ವಾಮಿ ಮೊದಲಾದವರುಗಳಿದ್ದಾರೆ (17 ಏಪ್ರಿಲ್ 2022)



ಮೈಸೂರಿನಲ್ಲಿ ಕದಳಿ ಮಹಿಳಾ ವೇದಿಕೆಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಡಾ. ವಸುಂಧರಾ ದೊರೆಸ್ವಾಮಿಯವರಿಗೆ 'ಕದಳಿಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಶ್ರೀಮತಿ ಶೋಭಾ ಶಿವಾನಂದ, ಶ್ರೀಮತಿ ಪಾವನ, ಶ್ರೀಮತಿ ಜಯಾ ಗೌಡ, ಶ್ರೀಮತಿ ಶಾರದಾ ಶಿವಲಿಂಗಸ್ವಾಮಿ, ಪ್ರೊ. ಮಲೆಯೂರು ಗುರುಸ್ವಾಮಿ, ಡಾ. ಕೆ. ಚಿದಾನಂದಗೌಡ, ಶ್ರೀ ಮ.ಗು. ಸದಾನಂದಯ್ಯ, ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ಶ್ರೀಮತಿ ಮಮತಾ ಸುರೇಶ್, ಶ್ರೀಮತಿ ನೀಲಾಂಬಿಕಾ ನಾಗರಾಜರವರುಗಳಿದ್ದಾರೆ (18 ಏಪ್ರಿಲ್ 2022)




ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಅಯೋಧ್ಯಾನಗರದ ಶಿವಾಚಾರ ವೈಶ್ಯ ನಗರ್ತ ವಿದ್ಯಾವರ್ಧಕ ಸಂಘದ ಶತಮಾನೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಸಿ. ಸೋಮಶೇಖರ್, ಶ್ರೀ ಹೆಚ್.ಎಸ್. ಬಸವರಾಜು, ಶ್ರೀ ಕರಿವೃಷಭೇಂದ್ರ ಸ್ವಾಮಿಗಳು, ಶ್ರೀ ಎನ್. ಪುಟ್ಟರುದ್ರ ಮತ್ತು ಸಂಘದ ಇತರ ಪದಾಧಿಕಾರಿಗಳಿದ್ದಾರೆ (19 ಏಪ್ರಿಲ್ 2022)




ಮೈಸೂರು ತಾಲ್ಲೂಕು ಕೀಳನಪುರದಲ್ಲಿ ಜೀರ್ಣೋದ್ಧಾರಗೊಂಡ ಶ್ರೀ ಬಸವೇಶ್ವರ, ಶ್ರೀ ಕಾಳಮ್ಮ, ಶ್ರೀ ಮಾರಮ್ಮ, ಮತ್ತು ಶ್ರೀ ಸಿದ್ದಪ್ಪಾಜಿ ದೇವಾಲಯಗಳು ಮತ್ತು ಬಸವ ಭವನ ಉದ್ಘಾಟನೆ ಮತ್ತು ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಿಸಲಾಯಿತು. ಶ್ರೀ ಕೆ.ಎನ್. ರವಿಶಂಕರ್, ಶ್ರೀಮತಿ ಸೌಜನ್ಯ ರವಿಶಂಕರ್, ಶ್ರೀ ಕೆ.ಸಿ. ಮಂಜುನಾಥ್, ಶ್ರೀ ಮಹದೇವಪ್ಪ, ದಂಡಿಕೆರೆ ಶ್ರೀಗಳು, ಶ್ರೀ ಶಿವಾನಂದ ಪುರಿ ಸ್ವಾಮಿಗಳು, ಸಿದ್ಧಗಂಗೆಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಸಾಲೂರು ಮಠದ ಶ್ರೀಗಳು, ಶ್ರೀ ಕೆ.ಎನ್. ಪುಟ್ಟಬುದ್ಧಿ, ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ದಕ್ಷಿಣಾಮೂರ್ತಿ ಮೊದಲಾದವರುಗಳಿದ್ದಾರೆ (21 ಏಪ್ರಿಲ್ 2022)




ಮೈಸೂರು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಎಸ್‌ಎಫ್‌ಇ ಮೈಸೂರು ಛಾಪ್ಟರ್, ಜೆಎಸ್‌ಎಸ್ ಫಾರ್ಮಸಿ ಕಾಲೇಜು ಮತ್ತು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ವತಿಯಿಂದ ಆಯೋಜಿಸಿದ್ದ ಭಾರತೀಯ ಸಾಂಪ್ರದಾಯಿಕ ಔಷಧಶಾಸ್ತ್ರ ಸಂಘದ 9ನೇ ಅಂತಾರಾಷ್ಟ್ರೀಯ ಸಮಾವೇಶವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಸಚಿವರಾದ ಡಾ. ಕೆ. ಸುಧಾಕರ್ ಉದ್ಘಾಟಿಸಿದರು. ಪ್ರೊ. ಪುಲೋಕ್ ಕೆ. ಮುಖರ್ಜಿ, ಶ್ರೀ ಇಂದ್ರನೀಲ್ ದಾಸ್, ಶ್ರೀ ಶೇಖರ್ ದತ್, ಡಾ. ಕೆ. ಮೃತ್ಯುಂಜಯ, ಡಾ. ಬಿ. ಮಂಜುನಾಥ್, ಡಾ. ಟಿ.ಎಂ. ಪ್ರಮೋದ್ ಕುಮಾರ್ ಹಾಗೂ ಡಾ. ಸುಭಾಷ್ ಸಿ. ಮಂಡಲ್‌ರವರುಗಳಿದ್ದಾರೆ (22 ಏಪ್ರಿಲ್ 2022)



ಮೈಸೂರು ರಾಘವೇಂದ್ರನಗರದ ವೀರಶೈವ ಲಿಂಗಾಯತ ಸೇವಾ ಸಮಿತಿ, ಪೂರ್ವ ವಲಯದ ವತಿಯಿಂದ ಏರ್ಪಡಿಸಿದ್ದ ಶ್ರೀ ಬಸವೇಶ್ವರ, ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳು ಹಾಗೂ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಎಸ್. ಶಂಕರಪ್ಪ, ಶ್ರೀಮತಿ ರೇಣುಕಾ ರಾಜು, ಶ್ರೀ ಎನ್. ಶ್ರೀಕಂಠಮೂರ್ತಿ, ಶ್ರೀಮತಿ ರಾಣಿ ಸುರೇಶ್, ಶಾಸಕರಾದ ಶ್ರೀ ತನ್ವೀರ್ ಸೇಠ್, ಬಸವೇಶ್ವರ ಮಠದ ಶ್ರೀಗಳು, ಕುಂದೂರು ಮಠದ ಶ್ರೀಗಳು, ಪ್ರೊ. ಸಿ.ಬಿ. ಬಸವರಾಜು, ಶ್ರೀ ಎಂ. ಷಡಕ್ಷರಿ, ಶ್ರೀ ಟಿ.ಟಿ. ಮಹೇಶ್ ಮೊದಲಾದವರುಗಳಿದ್ದಾರೆ (24 ಏಪ್ರಿಲ್ 2022)



ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕು ಶೇಗುಣಿಸಿ ಶ್ರೀ ವಿರಕ್ತಮಠದ ನಿ.ಪ್ರ.ಸ್ವ. ಶ್ರೀ ಶಂಕರ ಮಹಾಸ್ವಾಮಿಗಳವರ ಅಮೃತ ಮಹೋತ್ಸವ ಹಾಗೂ ಡಾ. ಶ್ರೀ ಮಹಾಂತ ದೇವರ ನಿರಂಜನ ಚರಪಟ್ಟಾಧಿಕಾರ ಸಮಾರಂಭದಲ್ಲಿ ಪೂಜ್ಯರು ಉಭಯ ಶ್ರೀಗಳನ್ನು ಸನ್ಮಾನಿಸಿ ಹಾರೈಸಿದರು. ಮೋಟಗಿಮಠ, ಕಮತೇನಟ್ಟಿ, ಹಂದಿಗುಂದದ ಮಠಗಳ ಶ್ರೀಗಳರವರುಗಳಿದ್ದಾರೆ (28 ಏಪ್ರಿಲ್ 2022)



ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕು ಯಡ್ರಾಮಿಯಲ್ಲಿ ಗ್ರಾಮದೇವತೆಯ ನೂತನ ದೇವಸ್ಥಾನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಮಾದನಹಿಪ್ಪರಗಿ, ಯಡ್ರಾಮಿ ಮಠಗಳ ಶ್ರೀಗಳು, ಮಾಜಿ ಶಾಸಕರಾದ ಶ್ರೀ ದೊಡ್ಡಪ್ಪಗೌಡ ಪಾಟೀಲ್ ನರಿಬೋಳ, ಶಾಸಕರಾದ ಡಾ. ಅಜಯ್‌ಸಿಂಗ್ ಮೊದಲಾದವರುಗಳಿದ್ದಾರೆ (27 ಏಪ್ರಿಲ್ 2022)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೇ ಜಯಂತಿ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ 2019–20ನೇ ಸಾಲಿನಲ್ಲಿ ಜೆಎಸ್‌ಎಸ್ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ 189 ಜನರನ್ನು ಅಭಿನಂದಿಸಲಾಯಿತು (13 ಏಪ್ರಿಲ್ 2022)



ಪರಮಪೂಜ್ಯ ಜಗದ್ಗುರುಗಳವರು ಹೈದರಾಬಾದ್‌ನ ರಾಮೋಜಿ ಫಿಲಂ ಸಿಟಿಗೆ ಭೇಟಿ ನೀಡಿದ್ದಾಗ ಸಂಬಂಧಪಟ್ಟ ಪದಾಧಿಕಾರಿಗಳು ಜೊತೆಯಲ್ಲಿದ್ದಾರೆ (26 ಏಪ್ರಿಲ್ 2022)



ಹಾಸನದ ಶ್ರೀ ತಣ್ಣೀರುಹಳ್ಳ ಮಠದಲ್ಲಿ ಏರ್ಪಡಿಸಿದ್ದ ಬಸವ ಜಯಂತಿ, ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳ 115ನೇ ಜಯಂತಿ ಮತ್ತು ತಣ್ಣೀರುಹಳ್ಳ ಮಠದ ಶ್ರೀ ಶಿವಲಿಂಗ ಸ್ವಾಮಿಗಳವರ 88ನೇ ಜಯಂತಿ ಹಾಗೂ ಶ್ರೀ ವಿಜಯಕುಮಾರ ಸ್ವಾಮಿಗಳವರ ಪಟ್ಟಾಧಿಕಾರ ಅಷ್ಟಮಾಸ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳು ಮತ್ತು ಸಿದ್ಧಗಂಗಾ ಶ್ರೀಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಬಿ.ಪಿ. ಐಸಾಮಿಗೌಡರು, ಅರಮೇರಿ, ತಣ್ಣೀರುಹಳ್ಳ, ಕುಂದೂರು, ಕಿರಿಕೊಡ್ಲಿ, ಕನಕಪುರ ಮಠಗಳ ಶ್ರೀಗಳು ಹಾಗೂ ಶ್ರೀ ಧರ್ಮಶೇಖರ್‌ರವರಿದ್ದಾರೆ (24 ಏಪ್ರಿಲ್ 2022)



ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕು ಅರಳಿಕಟ್ಟಿಯ ಶ್ರೀ ತೋಂಟದಾರ್ಯ ಮಠದ ಶ್ರೀ ಶಿವಮೂರ್ತಿದೇವರ ಪಟ್ಟಾಧಿಕಾರದ ನಿಮಿತ್ತ ನಡೆದ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಶ್ರೀ ಶಿವಮೂರ್ತಿದೇವರನ್ನು ಸನ್ಮಾನಿಸಿ ಆಶೀರ್ವದಿಸಿದರು. ನಾಗನೂರು ಶ್ರೀಗಳು, ವಿಧಾನಪರಿಷತ್ ಸದಸ್ಯರಾದ ಶ್ರೀ ಚನ್ನರಾಜ್ ಹಟ್ಟಿಹೊಳಿ ಮೊದಲಾದವರು ಗಳಿದ್ದಾರೆ (28 ಏಪ್ರಿಲ್ 2022)



ಧಾರವಾಡದ ಕೆಲಗೇರಿಯ ಜೆಎಸ್ಎಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ ಜೆಎಸ್ಎಸ್ ಮಹಾವಿದ್ಯಾಪೀಠದ ಧಾರವಾಡ ವಿಭಾಗೀಯ ಕಚೇರಿಯ ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸಿದ ಶ್ರೀ ಎಂ.ಪಿ. ಬಗಲಿಯವರನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಅಭಿನಂದಿಸಲಾಯಿತು. ಶ್ರೀಮತಿ ಲಿಲಿಯನ್ ಅಂತೋನಿ ಶಾನ್, ಶ್ರೀಮತಿ ಪಾರ್ವತಿ ಹಾಲಭಾವಿ, ಶ್ರೀ ಮಹೇಂದ್ರ ಪಟೇಲ್, ಶ್ರೀ ಜಿ.ಸಿ. ತಲ್ಲೂರು, ನೂತನ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಜಿ. ಬಿರಾದಾರ್, ಶ್ರೀ ಸುರೇಶ್ ಹಾಲಭಾವಿ, ಶ್ರೀ ಬಿ.ಎಂ. ಪಾಟೀಲ್ ಮತ್ತು ಶ್ರೀ ಲಿಂಗರಾಜ ಸರ್ದೇಸಾಯಿಯವರುಗಳಿದ್ದಾರೆ (29 ಏಪ್ರಿಲ್ 2022)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (7 ಏಪ್ರಿಲ್ 2022)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ನಿಕಟಪೂರ್ವ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದ ಸಂದರ್ಭದಲ್ಲಿ ಪೂಜ್ಯರು ಗೌರವಿಸಿ ಸನ್ಮಾನಿಸಿದರು. ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ, ಶ್ರೀ ಹೆಚ್.ವಿ. ರಾಜೀವ್, ಶ್ರೀ ಎಂ. ಅಪ್ಪಣ್ಣ ಮೊದಲಾದವರುಗಳಿದ್ದಾರೆ (30 ಮಾರ್ಚ್ 2022)

Registered with the Registrar of Newspapers in India Under No. 50622/86
'Prasada' Bi-Monthly, Vol. 37 Issue No. 2, March-April 2022



ಶ್ರೀ ಸಿದ್ಧಗಂಗಾ ಮಠದ ಡಾ. ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 115ನೇ ಜಯಂತಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಶ್ರೀ ಅಮಿತ್ ಶಾರವರು ಉದ್ಘಾಟಿಸಿದರು. ಕೇಂದ್ರ ಸಚಿವರಾದ ಶ್ರೀ ಭಗವಂತ ಖೂಬಾ, ಶ್ರೀ ಬಿ.ವೈ. ವಿಜಯೇಂದ್ರ, ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿ, ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ ಜೋಶಿರವರುಗಳಿದ್ದಾರೆ (1 ಏಪ್ರಿಲ್ 2022)

ಬಿಡಿ ಪ್ರತಿ: ರೂ. 10

e-mail: prasadamagazine@gmail.com * www.jssonline.org